ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 29 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 14 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಕೆಬಿಜಿಯವರ
ಛೂಮಂತ್ರ..

ಸರ್ಕಾರಕ್ಕೆ "ಮಾನವೀಯ ಮುಖವಿರಬೇಕು": ಡಾ.ಮನಮೋಹನ್ ಸಿಂಗ್ ಅವರನ್ನು ಕೇಳಿ

ಪುಟ–4

ಮೈಸೂರಿಗೆ ಸ್ಮಾರ್ಟ್ ಸಿಟಿ ಭಾಗ್ಯವಿಲ್ಲ

ಬೆಂಗಳೂರು, ಏ.28(ಕೆಎಂಶಿ)– ಮೈಸೂರು ಕೇಂದ್ರವನ್ನು ಸ್ಮಾರ್ಟ್ ಸಿಟಿಗೆ ಸೇರಿಸಲು ಸಾಧ್ಯವಿಲ್ಲ ಎಂದು ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಸ್ಪಷ್ಟಪಡಿಸಿದೆ.

ಸದ್ಯಕ್ಕೆ ರಾಷ್ಟ್ರದಲ್ಲಿ ಯಾವುದೇ ನಗರಗಳನ್ನು ಸ್ಮಾರ್ಟ್ ಸಿಟಿ ಯೋಜನೆಯಡಿ ಕೈಗೆತ್ತಿಕೊಳ್ಳುವುದಿಲ್ಲ, ಅದರ ಬದಲು ಪ್ರಮುಖ ನಗರಗಳಿಗೆ ವಿವಿಧ ಯೋಜನೆಯಡಿ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಆರ್ಥಿಕ ನೆರವು ನೀಡುವುದಾಗಿ ಕೇಂದ್ರ ನಗರಾಭಿವೃದ್ಧಿ ಸಚಿವಾಲಯ ತಿಳಿಸಿದೆ.

ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ್, ಹಾಲಿ ಕೈಗೆತ್ತಿಕೊಂಡಿರುವ ಸ್ಮಾರ್ಟ್ ಸಿಟಿಗಳ ಕಾಮಗಾರಿ ಶೇ.70ರಿಂದ 80ರಷ್ಟು ಪೂರ್ಣಗೊಂಡಿದೆ. ಮುಂದಿನ 2023ರ ಮಾರ್ಚ್ ವೇಳೆಗೆ ಸ್ಮಾರ್ಟ್ ಸಿಟಿ ಕಾರ್ಯ ಪೂರ್ಣಗೊಂಡು ರಾಷ್ಟ್ರಕ್ಕೆ ಸಮರ್ಪಣೆ ಮಾಡಲಾಗುವುದು ಎಂದರು.

ಅಧಿಕ ಅಂಕ ಗಳಿಸಿದ ಮೀಸಲಾತಿ ಅಭ್ಯರ್ಥಿ ಸಾಮಾನ್ಯ ವರ್ಗದಡಿ ಪರಿಗಣನೆ: ಸುಪ್ರೀಂ

ನವದೆಹಲಿ: ಸಾಮಾನ್ಯ ವರ್ಗದಲ್ಲಿ ಆಯ್ಕೆಯಾದ ಕೊನೆಯ ಅಭ್ಯರ್ಥಿ ಪಡೆದದ್ದಕ್ಕಿಂತ ಅಧಿಕ ಅಂಕಗಳನ್ನು ಗಳಿಸಿದ ಮೀಸಲಾತಿ ಇರುವ ಅಭ್ಯರ್ಥಿಯನ್ನು 'ಸಾಮಾನ್ಯ ವರ್ಗ'ದಡಿ ಪರಿಗಣಿಸಬೇಕು ಎಂದು ಸುಪ್ರೀಂಕೋರ್ಟ್ ಹೇಳಿದೆ.

ಮೀಸಲಾತಿ ಇರುವ ವರ್ಗಗಳ ಅಭ್ಯರ್ಥಿಗಳು ಅರ್ಹತೆ ಹಾಗೂ ತಾವು ಪಡೆದ ಸ್ಥಾನದ ಕಾರಣಗಳಿಂದಾಗಿ ಮೀಸಲಾತಿ ಇಲ್ಲದ ಹುದ್ದೆಗಳಿಗೆ ಆಯ್ಕೆಯಾಗುವಂತಿದ್ದರೆ, ಆ ಅಭ್ಯರ್ಥಿಗಳು ಸಾಮಾನ್ಯ ವರ್ಗದಲ್ಲಿನ ಹುದ್ದೆಗಳನ್ನೇ ಆಯ್ಕೆ ಮಾಡಿಕೊಳ್ಳಬಹುದು ಎಂದು ನ್ಯಾಯಮೂರ್ತಿಗಳಾದ ಎಂ.ಆರ್.ಶಾ ▶ 8ನೇ ಪುಟಕ್ಕೆ

ಮೈಸೂರಲ್ಲಿ 'ಉದ್ಯಮಿಯಾಗು–ಉದ್ಯೋಗ ನೀಡು' ಕಾರ್ಯಾಗಾರ

ಉದ್ದಿಮೆ ಆರಂಭಿಸಲು ಛಲವಿದ್ದರೆ ಸಾಕು...!

- ಬೃಹತ್, ಮಧ್ಯಮ ಕೈಗಾರಿಕಾ ಸಚಿವ ಡಾ. ಮುರುಗೇಶ ಆರ್. ನಿರಾಣಿ ವಿಶ್ವಾಸ
- ಕಾರ್ಯಾಗಾರದಲ್ಲಿ ಸಾವಿರಕ್ಕೂ ಹೆಚ್ಚು ಭಾವಿ ಉದ್ಯಮಿಗಳು, ವಿದ್ಯಾರ್ಥಿಗಳು ಭಾಗಿ



ಮೈಸೂರಿನ ಕರಾಮುವಿ ಆವರಣದಲ್ಲಿ ಭಾವಿ ಉದ್ಯಮಿಗಳು ಹಾಗೂ ವಿದ್ಯಾರ್ಥಿಗಳೊಂದಿಗೆ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಸಂವಾದ ನಡೆಸಿದರು. ಚಿತ್ರದಲ್ಲಿ ಸಚಿವ ಎಂಟಿಬಿ ನಾಗರಾಜ್, ಶಾಸಕ ಎಲ್.ನಾಗೇಂದ್ರ ಇನ್ನಿತರರನ್ನು ಕಾಣಬಹುದು.

ಮೈಸೂರು,ಏ.28(ಆರ್‌ಕೆಬಿ)–ಉದ್ದಿಮೆ ಮಾಡಲು ಹಣವೇ ಮುಖ್ಯವಲ್ಲ. ಛಲ ಒಂದಿದ್ದರೆ ಏನು ಬೇಕಾದರೂ ಸಾಧಿಸಬಹುದು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಡಾ.ಮುರುಗೇಶ ಆರ್. ನಿರಾಣಿ ಯುವ ಜನರಲ್ಲಿ ಉತ್ಸಾಹ ತುಂಬಿದ್ದಾರೆ.

ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ, ಕರ್ನಾಟಕ ಉದ್ಯೋಗ ಮಿತ್ರ ಮೈಸೂರಿನ ಕರ್ನಾಟಕ ಮುಕ್ತ ವಿಶ್ವ ವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಭಾವಿ ಉದ್ಯಮಿಗಳು ಹಾಗೂ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ 'ಉದ್ಯಮಿಯಾಗು –ಉದ್ಯೋಗ ನೀಡು' ಕಾರ್ಯಾಗಾರಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು.

ಸರ್ಕಾರಿ ಕೆಲಸವೇ ಬೇಕು ಎಂಬುದನ್ನು ಬಿಡಿ, ಸ್ವಂತ ಉದ್ದಿಮೆ ಪ್ರಾರಂಭಿಸುವತ್ತ ಗಮನ ನೀಡಿ ಎಂದು ಭಾವಿ ಉದ್ಯಮಿಗಳಿಗೆ ಕರೆ ನೀಡಿದ ಅವರು, ನನ್ನ ಬಳಿ ಜ್ಞಾನ ಇದೆ. ಆದರೆ ಹಣ ಇಲ್ಲ ಎನ್ನುವವರು ಸ್ವಯಂ ಉದ್ಯಮಿಯಾಗಲು ಸಾಧ್ಯವಾಗುವ ಯೋಜನೆಯನ್ನು ಪ್ರಧಾನಿ ನರೇಂದ್ರ ಮೋದಿ ರೂಪಿಸಿದ್ದಾರೆ ಎಂದರು.

ಕೈಗಾರಿಕೆಗಳನ್ನು ಆರಂಭಿಸಬೇಕೆಂಬ ಮಹದಾಸೆ ಹೊಂದಿರುವವರಿಗಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಶೇ.40ರಷ್ಟು ಸಬ್ಸಿಡಿ, ಜವಳಿ ಉದ್ಯಮ ಕೈಗೊಳ್ಳುವವರಿಗೆ ಶೇ.40 ಸಬ್ಸಿಡಿ, ಶೇ.60ರಷ್ಟು ಬ್ಯಾಂಕ್ ಸಾಲ ಸಿಗುವ ವ್ಯವಸ್ಥೆ ಮಾಡಿದ್ದಾರೆ. ಎಥೆನಾಲ್ ಯೋಜನೆಗೆ ಶೇ.95ರಷ್ಟು ಸಾಲ ಕೊಟ್ಟರೆ, 5 ವರ್ಷಗಳವರೆಗೆ ಸಬ್ಸಿಡಿ ಇದೆ. ಭೂಮಿ ಇದ್ದರೆ ಸಾಕು. ಎಥೆನಾಲ್ ಕಾರ್ಖಾನೆ ಮಾಡಬಹುದು. ಇದಕ್ಕೆ ಸಾಕಷ್ಟು ಮಾರ್ಗದರ್ಶನವನ್ನೂ ಸರ್ಕಾರದ ವತಿಯಿಂದ ನೀಡಲಾಗುವುದು ಎಂದು ಹೇಳಿದರು.

ಯಾರಿಗೆ ಯಾವ ವಲಯದ ಬಗ್ಗೆ ಆಸಕ್ತಿ ಇದೆಯೋ ಅಂಥವರು ಕನಿಷ್ಠ 30 ಮಂದಿ ನೋಂದಣಿ ಮಾಡಿಕೊಂಡು ಬಂದರೆ ಅವರಿಗೆ ತರಬೇತಿ ನೀಡಿ, ಯಶಸ್ವಿ ಉದ್ಯಮಿಯಾಗಿ ಹೊರಹೊಮ್ಮಲು ಎಲ್ಲಾ ರೀತಿಯ ಸಹಕಾರ, ಪ್ರೋತ್ಸಾಹವನ್ನು ಸರ್ಕಾರ ನೀಡಲಿದೆ ಎಂದರು.

ಕೈಗಾರಿಕೋದ್ಯಮಿಯಾಗಲು ಆಸಕ್ತಿ ಹೊಂದಿರುವವರು ತಮ್ಮ ತಮ್ಮ ವ್ಯಾಪ್ತಿಯಲ್ಲಿರುವ ದೊಡ್ಡ ದೊಡ್ಡ ಕಾರ್ಖಾನೆಗಳಿಗೆ ಭೇಟಿ ನೀಡಿ, ಅಧ್ಯಯನ ಮಾಡಿ ಅಗತ್ಯ ಮಾಹಿತಿ ಪಡೆದುಕೊಳ್ಳಿ. ನಾನೂ ಕೈಗಾರಿಕೋದ್ಯಮಿ ಆಗಬೇಕು, ಒಂದಷ್ಟು ಜನರಿಗೆ ನಾವೇ ಏಕೆ ಉದ್ಯೋಗ ನೀಡಬಾರದು ಎಂಬುದನ್ನು ನೀವೇ ತೀರ್ಮಾನಿಸಿ, ದೂರದೃಷ್ಟಿ ಇಟ್ಟುಕೊಂಡು ಕೆಲಸ ಮಾಡಿದರೆ ಯಶಸ್ವಿ ಉದ್ಯಮಿಯಾಗಿ ಹೊರಹೊಮ್ಮಲು ಸಾಧ್ಯವಿದೆ ಎಂದು ನಿರಾಣಿ ತಿಳಿಸಿದರು.

> ನನ್ನ ಬಳಿ ದುಡ್ಡಿಲ್ಲ, ಕೈಗಾರಿಕೆ ಮಾಡುವುದು ಹೇಗೆ?. ಭೂಮಿ ಮಾಡಲು ನಮಗೆ ಶಕ್ತಿ ಇಲ್ಲ. ನಾವೇನು ಮಾಡಬೇಕು ಎಂಬ ಪ್ರಶ್ನೆ ನಿಮ್ಮಲ್ಲಿ ಮೂಡಬಹುದು. ಅದಕ್ಕಾಗಿ ಪರಿಶಿಷ್ಟ ಜಾತಿ, ವರ್ಗದವರಿಗೆ ಕೈಗಾರಿಕೆ ತೆರೆಯಲು 2 ಎಕರೆಗೆ 75 ಲಕ್ಷ ಸಬ್ಸಿಡಿ ನೀಡುತ್ತದೆ. ಉಳಿದ ಶೇ.25ರಷ್ಟನ್ನು ಕಂತುಗಳ ರೂಪದಲ್ಲಿ ನೀಡಲು ಅವಕಾಶವಿದೆ. ಆರ್ಥಿಕವಾಗಿ ಹಿಂದುಳಿದಿರುವ ಪರಿಶಿಷ್ಟೇತರರು ಸೇರಿದಂತೆ ಯಾವುದೇ ಸಮುದಾಯದವರು 2 ಎಕರೆ ಭೂಮಿಗೆ ಸಬ್ಸಿಡಿ ನೀಡಲು ಸಿಎಂ ಬಸವರಾಜ ಬೊಮ್ಮಾಯಿ ಸರ್ಕಾರ ನಿರ್ಧರಿಸಿದೆ. ಉದಾಹರಣೆಗೆ ಮೈಸೂರಲ್ಲಿ 1 ಎಕರೆ ಭೂಮಿ ಖರೀದಿ ಮಾಡಬೇಕಾದರೆ ಸುಮಾರು 1 ಕೋಟಿ ರೂ. ಬೇಕಾಗಬಹುದು. ಇದರಿಂದ ಭೂಮಿ ಸಮಸ್ಯೆ ನೀಗುವ ಜೊತೆಗೆ ಭೂಮಿ ನಿಮ್ಮ ಹೆಸರಿನಲ್ಲೇ ಉಳಿಯಲಿದೆ. ಜೊತೆಗೆ ಉದ್ಯಮಿಯಾಗಿ ಹೊರಹೊಮ್ಮಲು ಸಾಧ್ಯವಿದೆ. ■ **ಡಾ.ಮುರುಗೇಶ ಆರ್.ನಿರಾಣಿ**

> **ದುಡಿಮೆಯೇ ದೊಡ್ಡಪ್ಪ:** ಅಂದು ದುಡ್ಡೇ ದೊಡ್ಡಪ್ಪ ಎನ್ನುತ್ತಿದ್ದರು. ಆದರೆ ಇಂದು ದುಡಿಮೆಯೇ ದೊಡ್ಡಪ್ಪ. ಜೀವನದಲ್ಲಿ ಏನಾದರೂ ಸಾಧಿಸುತ್ತೇನೆಂಬ ಪ್ರಯತ್ನ ಇರಬೇಕು. ಅದಕ್ಕೆ ಪ್ರತಿಫಲ ಸಿಗುತ್ತದೆಂಬ ಭರವಸೆ ಇಟ್ಟುಕೊಳ್ಳಬೇಕು. ■ **ಎಂಟಿಬಿ ನಾಗರಾಜ್**

ಈ ಕಾರ್ಯಾಗಾರದಲ್ಲಿ ಭಾಗವಹಿಸಿರುವ 2 ಸಾವಿರ ಜನರ ಪೈಕಿ ಶೇ.2ರಷ್ಟು ಮಂದಿ ಉದ್ಯಮಿಗಳಾದರೆ ಉಳಿದ ಶೇ.98ರಷ್ಟು ಮಂದಿಗೆ ನೀವೇ ಕೆಲಸ ನೀಡಬಹುದು. ಇಂತಹ ಕಾರ್ಯಾಗಾರಗಳನ್ನು ಮಾಡಿ ಅಷ್ಟಕ್ಕೇ ಕೈ ಬಿಡುವುದಿಲ್ಲ. ಯಾರಿಗೆ ಯಾವ ವಲಯದಲ್ಲಿ ಆಸಕ್ತಿ ಇದೆಯೋ ಅಂತಹ ವಲಯದಲ್ಲಿ ಡಿಪಿಆರ್ ಮಾಡಿ, ಬ್ಯಾಂಕ್ ಸಾಲ ಕೊಡಿಸಿ, ಕಾರ್ಖಾನೆ ಆರಂಭಿಸಲು ನೆರವಾಗುವುದಾಗಿ ತಿಳಿಸಿದರು.

ಪೌರಾಡಳಿತ, ಸಣ್ಣ ಕೈಗಾರಿಕೆ, ಸಾರ್ವಜನಿಕ ಉದ್ದಿಮೆಗಳ ಸಚಿವ ಎಂಟಿಬಿ ನಾಗರಾಜು ಮಾತನಾಡಿ, ಇನ್ಫೋಸಿಸ್‌ನ ಸುಧಾಮೂರ್ತಿ, ನಾರಾಯಣಮೂರ್ತಿ ಅವರು ಶೂನ್ಯ ಬಂಡವಾಳದಿಂದ ಆರಂಭಿಸಿದ ▶ 8ನೇ ಪುಟಕ್ಕೆ

ಮೈಸೂರು ಸಮಗ್ರ ಅಭಿವೃದ್ಧಿ ಭರವಸೆ

ಪಾಲಿಕೆಯಲ್ಲಿ 6.11 ಕೋಟಿ ಉಳಿತಾಯ ಬಜೆಟ್

ಮೈಸೂರು,ಏ.28(ಆರ್‌ಕೆ)–ಮೈಸೂರು ಸಮಗ್ರ ಅಭಿವೃದ್ಧಿ ಭರವಸೆಯೊಂದಿಗೆ ಮೈಸೂರು ಮಹಾನಗರ ಪಾಲಿಕೆಯಲ್ಲಿ 2022–23ನೇ ಸಾಲಿಗೆ 6.11 ಕೋಟಿ ರೂ. ಉಳಿತಾಯ ಬಜೆಟ್ ಮಂಡನೆಯಾಗಿದೆ. ಪಾಲಿಕೆ ಪ್ರಧಾನ ಕಚೇರಿಯ ಕೌನ್ಸಿಲ್ ಸಭಾಂಗಣದಲ್ಲಿ ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಭೆಯಲ್ಲಿ ತೆರಿಗೆ ನಿರ್ಧರಣಾ ಹಣಕಾಸು ಮತ್ತು ಅಪೀಲುಗಳ ಸ್ಥಾಯಿ ಸಮಿತಿ ಅಧ್ಯಕ್ಷೆ ಎಂ.ಎಸ್. ಶೋಭಾ ಅವರು ಮಂಡಿಸಿದ ಆಯವ್ಯಯಕ್ಕೆ ಸಭೆಯು ಅನುಮೋದನೆ ನೀಡಿತು.

ಇದೇ ಮೊದಲು ಒಂದೇ ಅವಧಿಯಲ್ಲಿ ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷರು ಎರಡು ಬಾರಿ ಬಜೆಟ್ ಮಂಡಿಸಿದ ದಾಖಲೆಗೆ ಶೋಭಾ ಪಾತ್ರರಾಗಿದ್ದಾರೆ. ಇದರೊಂದಿಗೆ ಮೈಸೂರು ನಗರ ಪಾಲಿಕೆ ಇತಿಹಾಸದಲ್ಲೇ ಹೊಸ ಅಧ್ಯಾಯಕ್ಕೆ ನಾಂದಿಯಾಗಿದೆ. ಅಭಿವೃದ್ಧಿ, ತಂತ್ರಜ್ಞಾನ ಬಳಕೆ, ಹಸಿರೀಕರಣಕ್ಕೆ ಒತ್ತು ನೀಡಿ ಮಂಡಿಸಿರುವ 1,000 ಕೋಟಿ ಗಾತ್ರದ ಪ್ರಾಯೋಗಿಕ ಆಯವ್ಯಯಕ್ಕೆ ಪಾಲಿಕೆಯಲ್ಲಿನ ಎಲ್ಲಾ ಪಕ್ಷಗಳ ಸದಸ್ಯರು ಸಹಮತ ವ್ಯಕ್ತಪಡಿಸಿದರು. ಆರಂಭ ಶಿಲ್ಕು 40,888.92 ಲಕ್ಷ ರೂ. ಜಮೆ 59,067.43 ಲಕ್ಷ ರೂ. ಸೇರಿ ಒಟ್ಟು 99,956.35 ಲಕ್ಷ ರೂ.ಗಳು ಸಂದಾಯವಾಗಲಿದೆ ಎಂದು ನಿರೀಕ್ಷಿಸಲಾಗಿದ್ದು, ವಿವಿಧ ಬಾಬತ್ತಿಗೆ 99,345. 34 ಕೋಟಿ ರೂ. ಖರ್ಚು ಮಾಡಲು ಉದ್ದೇಶಿಸಲಾಗಿದೆ. ಅದರಂತೆ 611.01 ಲಕ್ಷ ರೂ.ಗಳ ಉಳಿಕೆ ಬಜೆಟ್ ಪ್ರಸಕ್ತ ಸಾಲಿನಲ್ಲಿ ಮಂಡಿತವಾಗಿದೆ. ನಾಗರಿಕರಿಗೆ ಮೂಲಭೂತ ಸೌಕರ್ಯ ಒದಗಿಸಿ, ಮೈಸೂರು ನಗರವನ್ನು ಸುವ್ಯವಸ್ಥಿತವಾಗಿ ನಿರ್ವಹಿಸಲು ಹಣಕಾಸಿನ ಅಗತ್ಯವಿರುವುದರಿಂದ ತೆರಿಗೆ, ವಿವಿಧ ಶುಲ್ಕ ಸಂಗ್ರಹ ಸೇರಿದಂತೆ ಹಲವು ಮೂಲಗಳಿಂದ ಆರ್ಥಿಕ ಸಂಪನ್ಮೂಲ ಕ್ರೋಢೀಕರಿಸಲು ನಗರ ಪಾಲಿಕೆ ತಯಾರಿ ನಡೆಸಿದೆ. ▶ 8ನೇ ಪುಟಕ್ಕೆ



ಹಣಕಾಸು–ಅಪೀಲುಗಳ ಸ್ಥಾಯಿ ಸಮಿತಿ ಅಧ್ಯಕ್ಷೆ ಎಂ.ಎಸ್.ಶೋಭಾ ಬಜೆಟ್ ಮಂಡಿಸಿದರು.

ಬಜೆಟ್‌ನಲ್ಲಿ ಬಂಪರ್ ಘೋಷಣೆ

ಯೋಗ ಮಂಟಪ, ನಗರ ಪಾಲಿಕೆ ಭವನ, ಅಂತಾರಾಷ್ಟ್ರೀಯ ಮಟ್ಟದ ಸ್ಕೇಟಿಂಗ್ ರಿಂಗ್, ಮಿಯಾವಾಕಿ ಪಾರ್ಕ್, ಎಲೆಕ್ಟ್ರಿಕ್ ಆಟೋ ಟಿಪ್ಪರ್

ಮೈಸೂರು: ಪಾರಂಪರಿಕ ನಗರಿಯ ಸಮಗ್ರ ಅಭಿವೃದ್ಧಿಗಾಗಿ ಪಾಲಿಕೆ ಬಜೆಟ್‌ನಲ್ಲಿ ಹಲವು ಹೊಸ ಯೋಜನೆಗಳ ಪ್ರಸ್ತಾಪದೊಂದಿಗೆ ಅನುದಾನ ಮೀಸಲಿರಿಸಲಾಗಿದೆ.

ಮಹಾನಗರ ಪಾಲಿಕೆ ಭವನ: ನಗರ ಪಾಲಿಕೆಯಿಂದ ಕಾರ್ಯಕ್ರಮ ಆಯೋಜಿಸಲು ಫಂಕ್ಷನ್ ಹಾಲ್‌ಗಳನ್ನು ಬಾಡಿಗೆಗೆ ಪಡೆಯುವುದನ್ನು ತಪ್ಪಿಸಲು ನಗರದ ಹೃದಯ ಭಾಗದಲ್ಲಿ ಸುಸಜ್ಜಿತ 'ಮಹಾನಗರ ಪಾಲಿಕೆ ಭವನ' ನಿರ್ಮಿಸಲು ಬಜೆಟ್‌ನಲ್ಲಿ 5 ಕೋಟಿ ರೂ. ಕಾಯ್ದಿರಿಸಲಾಗಿದೆ.

ಯೋಗ ಮಂಟಪ: ವರನಟ ಡಾ.ರಾಜಕುಮಾರ್ 93ನೇ ಹುಟ್ಟುಹಬ್ಬದ ಪ್ರಯುಕ್ತ ಮೈಸೂರಿನ ಆಲ್ಬರ್ಟ್ ವಿಕ್ಟರ್ ರಸ್ತೆಯಲ್ಲಿರುವ ಡಾ.ರಾಜಕುಮಾರ್ ಉದ್ಯಾನವನದಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ 30 ಲಕ್ಷ ರೂ. ವೆಚ್ಚದ ಯೋಗ ಮಂಟಪ ನಿರ್ಮಿಸಲು ಉದ್ದೇಶಿಸಲಾಗಿದೆ.

ಸ್ಕೇಟಿಂಗ್ ರಿಂಗ್: ಯುವ ಜನಾಂಗಕ್ಕೆ ಕ್ರೀಡೆಯನ್ನು ಪ್ರೋತ್ಸಾಹಿಸಲು ವಿಜಯನಗರ 2ನೇ ಹಂತದಲ್ಲಿ 1600 ಚದರ ಮೀಟರ್ ಪ್ರದೇಶದ ಅಂತಾರಾಷ್ಟ್ರೀಯ ಮಟ್ಟದ 'ಸ್ಕೇಟಿಂಗ್ ರಿಂಗ್' ನಿರ್ಮಿಸಲು 3.5 ಕೋಟಿ ರೂ. ಮೀಸಲಿರಿಸಲಾಗಿದೆ. ▶ 7ನೇ ಪುಟಕ್ಕೆ

ಬೆಂಗಳೂರಲ್ಲಿ ಪ್ರೀತಿ ನಿರಾಕರಿಸಿದ ಯುವತಿ ಮೇಲೆ ಆಸಿಡ್ ದಾಳಿ


ಬೆಂಗಳೂರು, ಏ.28– ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ 24 ವರ್ಷದ ಯುವತಿ ಮೇಲೆ ಆಸಿಡ್ ದಾಳಿ ನಡೆದಿದ್ದು, ತನ್ನನ್ನು ಪ್ರೀತಿಸಲು ನಿರಾಕರಿಸಿದ್ದಕ್ಕೆ ಭಗ್ನಪ್ರೇಮಿ ಈ ಕೃತ್ಯ ಎಸಗಿದ್ದಾನೆ. ಸುಂಕದಕಟ್ಟೆಯ ಮುತ್ತೂಟ್ ಫೈನಾನ್ಸ್‌ನಲ್ಲಿ ಕೆಲಸ ಮಾಡುತ್ತಿದ್ದ ಯುವತಿ ಮೇಲೆ ನಾಗೇಶ್ ಎಂಬಾತ ಈ ದಾಳಿ ನಡೆಸಿದ್ದಾನೆ. ಯುವತಿ ನಾಗೇಶ್‌ನ ಪ್ರೀತಿ ನಿರಾಕರಿಸಿದ್ದಳು ಎನ್ನಲಾಗಿದೆ. ಇದೇ ವಿಚಾರಕ್ಕೆ ನಿನ್ನೆ ಸಂಜೆಯೂ ಯುವತಿ ಹಾಗೂ ನಾಗೇಶ್ ನಡುವೆ ಗಲಾಟೆ ನಡೆದಿತ್ತು. ಅದೇ ದ್ವೇಷದಿಂದ ಇಂದು ಆಕೆ ಕೆಲಸಕ್ಕೆ ಹೋಗುವ ಸಂದರ್ಭದಲ್ಲಿ ಆಸಿಡ್ ಎರಚಿ ಪರಾರಿಯಾಗಿದ್ದಾನೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ಪಶ್ಚಿಮ ವಿಭಾಗದ ಡಿಸಿಪಿ ಡಾ.ಸಂಜೀವ್ ಪಾಟೀಲ್, ಬೆಳಗ್ಗೆ 8.30ರಿಂದ 8.45ರ ಸುಮಾರಿಗೆ ಸುಂಕದಕಟ್ಟೆ ಬಸ್ ನಿಲ್ದಾಣದ ಬಳಿ ಆಸಿಡ್ ದಾಳಿ ನಡೆದಿದೆ. ಯುವತಿಯ ಕತ್ತು, ಬೆನ್ನು, ತಲೆ ಭಾಗಕ್ಕೆ ಗಾಯವಾಗಿದೆ. ಗಾಯಾಳು ಯುವತಿಗೆ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಸದ್ಯ ಯುವತಿ ಆರೋಗ್ಯದಲ್ಲಿ ಚೇತರಿಕೆ ಕಂಡು ಬಂದಿದೆ. ▶ 8ನೇ ಪುಟಕ್ಕೆ



ಆಸಿಡ್ ಆರೋಪಿ ಬಂಧನಕ್ಕೆ ಕ್ರಮ

'ಮಿತ್ರ'ನ ವಾಣಿಜ್ಯವಾರ್ತೆ

ಈ ಅಕ್ಷಯ ತೃತೀಯದಲ್ಲಿ ಎ.ಶಂಕರ್ ಚೆಟ್ಟಿ ಅಂಡ್ ಸನ್ಸ್ ಕೊಡುಗೆ



ಮೈಸೂರು, ಏ.28–ಈ ಬಾರಿಯ ಅಕ್ಷಯ ತೃತೀಯಕ್ಕೆ ಮೈಸೂರಿನ ಪ್ರಸಿದ್ಧ ಆಭರಣ ಮಳಿಗೆ 'ಎ.ಶಂಕರಚೆಟ್ಟಿ ಅಂಡ್ ಸನ್ಸ್', ಗ್ರಾಹಕರಿಗೆ ಬಂಪರ್ ಕೊಡುಗೆ ನೀಡುತ್ತಿದೆ. ಇದಕ್ಕಾಗಿ ಅಕ್ಷಯ ತೃತೀಯ ಗೋಲ್ಡ್ ರಶ್ 2022; ಪರಿಶುದ್ಧ ಚಿನ್ನ, ಪರಿಶುದ್ಧ ಜೀವನ ಧ್ಯೇಯದೊಂದಿಗೆ ಮೇ 3ರವರೆಗೆ ಬಂಪರ್ ಆಫರ್ ನೀಡಿದೆ. ಒಂದು ಗ್ರಾಂ ಚಿನ್ನ ಖರೀದಿಗೆ ಒಂದು ಗ್ರಾಂ ಸಿಲ್ವರ್ ಉಚಿತ. ಒಂದು ಕ್ಯಾರಟ್ ವಜ್ರ ಖರೀದಿಗೆ ಒಂದು ಗ್ರಾಂ ಚಿನ್ನ ಉಚಿತ. 20 ಸಾವಿರದ ಬೆಳ್ಳಿ ಖರೀದಿಗೆ ಚಿನ್ನದ ನಾಣ್ಯ ಉಚಿತ ಉಡುಗೊರೆ ಪ್ರಕಟಿಸಲಾಗಿದೆ. ಮೈಸೂರಿನ ವಿಶ್ವಾಸಾರ್ಹ ಆಭರಣ ಮಳಿಗೆಯಾಗಿರುವ ಮೈಸೂರಿನ ಕೆ.ಆರ್.ಸರ್ಕಲ್‌ನ ಎ.ಶಂಕರ್ ಚೆಟ್ಟಿ ಅಂಡ್ ಸನ್ಸ್‌ನಲ್ಲಿ ವ್ಯಾಲೆಟ್ ಪಾರ್ಕಿಂಗ್, ಇಎಂಐ ಸೌಲಭ್ಯವೂ ಉಂಟು. ಬೆಳಗ್ಗೆ 11 ರಿಂದ ರಾತ್ರಿ 8 ಗಂಟೆವರೆಗೆ ವಹಿವಾಟಿರುತ್ತದೆ.

ಬ್ರಾಂಡೆಡ್ ಕಂಪನಿಗಳ ರೆಡಿಮೇಡ್ ಗಾರ್ಮೆಂಟ್ಸ್, ಶೂಸ್ ರಿಯಾಯಿತಿ ಮಾರಾಟ

ಮೈಸೂರು, ಏ.28–ರಂಜಾನ್ ಹಬ್ಬದ ಪ್ರಯುಕ್ತ ಮೈಸೂರಿನ ಉದಯಗಿರಿಯಲ್ಲಿರುವ ಸಫಾ ಫಂಕ್ಷನ್ ಹಾಲ್ ಮತ್ತು ಜೆಎಲ್‌ಬಿ ರಸ್ತೆಯಲ್ಲಿರುವ ಇನ್ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್‌ನಲ್ಲಿ ಬ್ರಾಂಡೆಡ್ ಕಂಪನಿಗಳ ರೆಡಿಮೇಡ್ ಗಾರ್ಮೆಂಟ್ಸ್ ಮತ್ತು ಫುಟ್‌ವೇರ್‌ಗಳನ್ನು ಭಾರೀ ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುತ್ತಿದೆ.



ಬ್ರಾಂಡೆಡ್ ಫುಟ್‌ವೇರ್ ಪುರುಷರ ಮತ್ತು ಮಹಿಳೆಯರ ಸ್ಪೋರ್ಟ್ಸ್ ಶೂಸ್, ಫಾರ್ಮಲ್ ಶೂಸ್, ಲೂಫರ್ಸ್, ಫ್ಲಿಫ್‌ಫ್ಲಾಪ್ಸ್, ಸ್ಲಿಪರ್ಸ್ ಹಾಗೂ ಎಲ್ಲಾ ರೀತಿಯ ಪಾದರಕ್ಷೆಗಳು ದೊರೆಯುತ್ತವೆ. ಪುರುಷರ ಬ್ರಾಂಡೆಡ್ ಶರ್ಟ್ಸ್, ಪ್ಯಾಂಟ್ಸ್, ಟೀ–ಶರ್ಟ್, ಜಾಕೇಟ್ಸ್, ಸ್ವೆಟರ್ಸ್, ಸ್ವೆಟ್ ಶರ್ಟ್ಸ್, ಟ್ರಾಕ್ ಫ್ಯಾಂಟ್, ಲೋವರ್ ಶರ್ಟ್ಸ್, ಬ್ಲೇಸರ್, ಸನ್ ಗ್ಲಾಸ್, ವಾಚ್‌ಗಳು, ಬೆಲ್ಟ್‌ಗಳು ಲಭ್ಯವಿದೆ.

ಮಹಿಳೆಯರ ಬ್ರಾಂಡೆಡ್ ಕುರ್ತಿಗಳು, ಲೇಡಿಸ್ ಟಾಪ್ಸ್, ಜಾಕೇಟ್ಸ್, ಸ್ವೆಟರ್ಸ್, ಟ್ರಾಕ್ ಪ್ಯಾಂಟ್ಸ್, ಸ್ವಿಮ್ಮಿಂಗ್ಸ್ ಕಾಸ್ಟೂಮ್ಸ್, ಪರ್ಸ್‌ಗಳು, ಟೀ–ಶರ್ಟ್ಸ್, ಟೈಟ್ಸ್, ಪ್ಲಾಜೋ, ಲೆಗ್ಗಿನ್ಸ್, ಮಹಿಳೆಯರ ಎನಾಮರ್ ಕಂಪನಿಯ ಬ್ರಾ, ಪ್ಯಾಂಟೀಸ್, ಟ್ರಾಕ್ ಪ್ಯಾಂಟ್ಸ್, ಶರ್ಟ್ಸ್, ಟಿ–ಶರ್ಟ್ಸ್, ಟಾಪ್ಸ್, ಕೆಮಿಲೋಸ್, ನೈಟ್‌ವೇರ್, ಜಿಮ್ ಪ್ಯಾಂಟ್ ಸಹಿತ ಅನೇಕ ಬ್ರಾಂಡೆಡ್ ಉತ್ಪನ್ನಗಳು ಆಫರ್‌ಗಳಲ್ಲಿ ಲಭ್ಯವಿದೆ. ಬ್ರಾಂಡೆಡ್ ಅಡಿಗಾಸ್, ನೈಕಿ, ಪೂಮಾ, ಫಿಲಾ ಸ್ಪೋರ್ಟ್ಸ್, ಅಂಡರ್ ಆರ್ಮೇರ್, ಗೆಸ್ಸ್, ಕಲರ್ ಪ್ಲಸ್, ಕೂಕ ಕಿಚ್, ಡಬ್ಲೂ ಡಿ ರೋಡ್ ಸ್ಟಾರ್, ರಿಬಾಕ್, ಸ್ಟ್ರಂಡಿ, ಎಚ್‌ಆರೆಕ್ಸ್ ವಾನ್ಸ್, ಯುಸಿಬಿ, ಮಸ್ತ್ ಅಂಡ್ ಹರ್ಬಲ್, ಕಾರ್ಲ್ಟನ್ ಲಂಡನ್, ಕಾನ್‌ವೆರ್ಸ್, ಲೊಟ್ಟೊ, ಕ್ಯಾಟರ್ ಪಿಲ್ಲರ್, ಯುಎಸ್ ಪೋಲೋ, ಒರೆಲಿಯಾ, ಕ್ಯಾಟ್ ವಾಕ್, ಫ್ಲೈಯಿಂಗ್ ಮಿಷನ್ ಸಹಿತ ವಿವಿಧ ಕಂಪನಿಯ ಉತ್ಪನ್ನಗಳು ರಿಯಾಯಿತಿ ದರದಲ್ಲಿ ಮಾರಾಟವಾಗುತ್ತಿದೆ. ಈ ಪ್ರದರ್ಶನ ಮತ್ತು ಮಾರಾಟ ಕೆಲವೇ ದಿನಗಳು ಮಾತ್ರ ಇರಲಿದ್ದು, ಪ್ರತಿದಿನ ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ ಇರುತ್ತದೆ ಎಂದು ಆಯೋಜಕರು ತಿಳಿಸಿದ್ದಾರೆ.

ಶೂ ವರ್ಲ್ಡ್‌ನಲ್ಲಿ ರಂಜಾನ್ ಹಬ್ಬದ ಪ್ರಯುಕ್ತ 2+1 ಆಫರ್

ಮೈಸೂರು, ಏ.28–ಮೈಸೂರಿನ ಶಿವರಾಂಪೇಟೆಯಲ್ಲಿರುವ 'ಶೂ ವರ್ಲ್ಡ್'ನಲ್ಲಿ (ಮನ್ನಾರ್ಸ್ ಮಾರ್ಕೆಟ್ ಎದುರು) ಸ್ತ್ರೀ ಮತ್ತು ಪುರುಷರ ಗುಣಮಟ್ಟದ ಚಪ್ಪಲಿ, ಶೂ ಮತ್ತು ಇತರೆ ಎಲ್ಲಾ ಇನ್‌ಹೌಸ್ ಬ್ರಾಂಡ್‌ನ ಪಾದರಕ್ಷೆಗಳ ಮೇಲೆ 2+1 ಆಫರ್ (2 ಜೊತೆ ಖರೀದಿಸಿದರೆ 1 ಜೊತೆ ಉಚಿತ) ನೀಡಲಾಗುತ್ತಿದೆ.



25 ವರ್ಷಗಳಿಂದ ಮೈಸೂರಿಗರ ನೆಚ್ಚಿನ ಫುಟ್‌ವೇರ್ ಮತ್ತು ಶೂ ಖರೀದಿ ಕೇಂದ್ರವಾಗಿರುವ ಶೂ ವರ್ಲ್ಡ್‌ನಲ್ಲಿ 100 ರೂ.ನಿಂದ 9,999 ರೂ.ವರೆಗೆ ನಾನಾ ಕಂಪನಿಯ ಫುಟ್‌ವೇರ್‌ಗಳು ಮಾರಾಟಕ್ಕಿವೆ. ಸ್ಥಳೀಯ, ಭಾರತೀಯ ಮತ್ತು ಎಂಎನ್‌ಸಿ ಬ್ರಾಂಡ್‌ನ ಶೂಗಳು ಇಲ್ಲಿ ಲಭ್ಯ. ಎಂಆರ್‌ಪಿಗಿಂತಲೂ ಆಕರ್ಷಕ ಬೆಲೆಯಲ್ಲಿ ಶೂಗಳನ್ನು ಮಾರಾಟ ಮಾಡಲಾಗುತ್ತಿದೆ. ಶಾಲಾ– ಕಾಲೇಜು, ಆಸ್ಪತ್ರೆ, ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಸಿಬ್ಬಂದಿಗೆ ಸಮವಸ್ತ್ರಕ್ಕೆ ತಕ್ಕಂಥ ಶೂಗಳು, ಸ್ವಚ್ಛತಾ ಕಾರ್ಮಿಕರಿಗೂ ಫುಟ್‌ವೇರ್ ಸಗಟು ಸರಬರಾಜು ಲಭ್ಯವಿದೆ. ಅಲ್ಲದೆ, ವೈದ್ಯರ ಸಲಹೆಯಂತೆ ಆರೋಗ್ಯದ ಸಮಸ್ಯೆ ಇರುವವರು ಬಳಕೆ ಮಾಡುವ ಚಪ್ಪಲಿ ಮತ್ತು ಶೂಗಳು ಮಾರಾಟಕ್ಕಿವೆ. ರಿಯಾಯಿತಿ ಮಾರಾಟ ಮೇ 3ರವರೆಗೆ ಲಭ್ಯವಿದೆ.

ದಕ್ಷ ಟ್ಯಾಲೆಂಟ್ ಸರ್ಚ್ ಎಕ್ಸಾಮಿನೇಷನ್



ಟಾಪರ್‌ಗಳೊಂದಿಗೆ ಗ್ಲೋಬಲ್ ಎಜುಕೇಷನ್ ಟ್ರಸ್ಟ್‌ನ ಅಧ್ಯಕ್ಷ ಬಿ.ಜಯಚಂದ್ರರಾಜು

ಮೈಸೂರು, ಏ.28– ಮೈಸೂರಿನ ದಕ್ಷ ಪದವಿ ಪೂರ್ವ ಕಾಲೇಜು ವತಿಯಿಂದ ರಾಜ್ಯ ಮಟ್ಟದಲ್ಲಿ 10ನೇ ತರಗತಿ ವಿದ್ಯಾರ್ಥಿಗಳಿಗಾಗಿ 'ದಕ್ಷ ಟ್ಯಾಲೆಂಟ್ ಸರ್ಚ್ ಎಕ್ಸಾಮಿನೇಷನ್' (ಡಿಟಿಎಸ್‌ಇ) ನಡೆಸಲಾಯಿತು.

ಶಿಕ್ಷಣ ಮಾರ್ಗದರ್ಶಕರೂ ಆದ ತಜ್ಞ ಸಲಹೆಗಾರ ಪ್ರೊ.ಶಂಕರ್ ಬೆಳ್ಳೂರು ಮಾತನಾಡಿ, 10ನೇ ತರಗತಿ ನಂತರ ಮುಂದೇನು? ವೃತ್ತಿ ಜೀವನದ ಯಶಸ್ಸಿಗೆ ಸರಿಯಾದ ಆಯ್ಕೆಯನ್ನು ಮಾಡುವುದು ಹೇಗೆ? ಎಂಬುದರ ಬಗ್ಗೆ ವಿವರಿಸಿ ದರಲ್ಲದೇ, ಮಕ್ಕಳು ಆತ್ಮವಿಶ್ವಾಸದಿಂದ ಮುನ್ನಡೆಯಲು ಸರಿಯಾದ ಮಾರ್ಗಗಳನ್ನು ಆರಿಸಿಕೊಳ್ಳುವುದರ ಬಗ್ಗೆ ಪೋಷಕರು ಖಚಿತಪಡಿಸಿಕೊಳ್ಳುವುದು ಅತ್ಯವಶ್ಯಕ ಎಂದು ಕಿವಿಮಾತು ಹೇಳಿದರು. ಈ ಸಂದರ್ಭದಲ್ಲಿ ಮೈಸೂರಿನ ಗ್ಲೋಬಲ್ ಎಜುಕೇಶನ್ ಟ್ರಸ್ಟ್ ಒಟ್ಟು 5 ಲಕ್ಷ ರೂ.ಗಳ ವಿದ್ಯಾರ್ಥಿ ವೇತನವನ್ನು ಘೋಷಿಸಿದ್ದು, ಡಿಟಿಎಸ್‌ಇನಲ್ಲಿ ವಿದ್ಯಾರ್ಥಿಗಳು ಪಡೆದ ಅಂಕಗಳ ಆಧಾರದ ಮೇರೆಗೆ ಈ 5 ಲಕ್ಷ ರೂ.ಗಳನ್ನು ಹಂಚಿಕೆ ಮಾಡುವುದಾಗಿ ತಿಳಿಸಿತು. ಟಾಪರ್‌ಗಳಾದ ಭಾರತೀಯ ವಿದ್ಯಾ ಭವನದ ಸಂಜನಾ, ಸೆಂಟ್ ಜೋಸೆಫ್ಸ್ ಸೆಂಟ್ರಲ್ ಶಾಲೆಯ ಯೋಗಾನಂದ ಮತ್ತು ಈಸ್ಟ್ ವೆಸ್ಟ್ ಇಂಟರ್ ನ್ಯಾಷನಲ್ ಸ್ಕೂಲ್‌ನ ನಿಹಾರ್ ಅವರಿಗೆ ಪದಕದೊಂದಿಗೆ ಲ್ಯಾಪ್‌ಟಾಪ್ ಮತ್ತು ಟ್ಯಾಬ್ ಅನ್ನು ಬಹುಮಾನವಾಗಿ ನೀಡಲಾಯಿತು.

ಇಂದು, ನಾಳೆ ಇಂಡಿಯನ್ ಲೈಫ್ ಸ್ಟೈಲ್ ಎಕ್ಸಿಬಿಷನ್

ಮೈಸೂರು,ಏ.28(ಪಿಎಂ)– ಬೆಂಗಳೂರಿನ ಸ್ಟೈಲ್ ಸ್ಟೋರ್ ವತಿಯಿಂದ 'ಇಂಡಿಯನ್ ಲೈಫ್ ಸ್ಟೈಲ್ ಎಕ್ಸಿಬಿಷನ್' ಶೀರ್ಷಿಕೆಯಡಿ ಮೈಸೂರಿನಲ್ಲಿ ಏ.29 ಮತ್ತು 30ರಂದು ಆಭರಣ, ಉಡುಪು ಸೇರಿದಂತೆ ಜೀವನೋಪಯೋಗಿ ಸಾಮಗ್ರಿಗಳ ಪ್ರದರ್ಶನ ಮತ್ತು ಮಾರಾಟ ಮೇಳ ಆಯೋಜಿಸ ಲಾಗಿದೆ ಎಂದು ಮಿಸ್ ಮೈಸೂರು ತನಿಷ್ಕಾ ತಿಳಿಸಿದರು.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಹೋಟೆಲ್ ಸದರ್ನ್ ಸ್ಟಾರ್‌ನಲ್ಲಿ ನಡೆಯುವ ಈ ಪ್ರದರ್ಶನಕ್ಕೆ ಸಾರ್ವಜನಿಕರು ಬೆಳಗ್ಗೆ 10.30ರಿಂದ ರಾತ್ರಿ 8ರವರೆಗೆ ಭೇಟಿ ನೀಡಬಹುದು ಎಂದರು. ಏ.29ರಂದು ಮಧ್ಯಾಹ್ನ 12ಕ್ಕೆ ನಡೆಯುವ ಉದ್ಘಾಟನಾ ಸಮಾರಂಭದಲ್ಲಿ ಆರ್‌ಜೆ ರಶ್ಮಿ, ಸ್ಟೈಲ್ ಸ್ಟೋರ್ ಸಂಸ್ಥಾಪಕ ರವಿ ಸೇರಿದಂತೆ ಇತರ ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದರು.



ಮೈಸೂರಿನ ಆರ್.ಟಿ.ನಗರದ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್‌ನ 'ಬೇಸಿಗೆ ಬಂಡಿ' ಶಿಬಿರದ ವಿದ್ಯಾರ್ಥಿಗಳು ಗುರುವಾರ ವಿಮಾನ ನಿಲ್ದಾಣದ ಬಳಿ ಇರುವ 'ನಿರ್ಮಲ ಧಾಮ'ದಲ್ಲಿ ಗ್ರಾಮೀಣ ಭಾಗದ ಜನಪ್ರಿಯ ಕ್ರೀಡೆಯಾಗಿರುವ 'ಕೆಸರುಗದ್ದೆ ಓಟದ ಜತೆಗೆ ಹಗ್ಗಜಗ್ಗಾಟ' ಆಟವಾಡಿ ಸಂಭ್ರಮಿಸಿದರು. ಜನಪದ ಕ್ರೀಡೆಯಾಗಿರುವ ಕೆಸರು ಗದ್ದೆ ಓಟಕ್ಕೆ ನೈಪುಣ್ಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಆರ್. ರಘು ಚಾಲನೆ ನೀಡಿದರು. ಪ್ರಾಂಶುಪಾಲೆ ಶ್ರೀಮತಿ ಶಿಲ್ಪ ಪ್ರಶಾಂತ್ ಹಾಗೂ ಕ್ರೀಡಾ ತರಬೇತುದಾರ ಶಿಕ್ಷಕರು ಉಪಸ್ಥಿತರಿದ್ದರು. 150 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮಣ್ಣಿನ ಸೊಗಡಿನ ಅನುಭವ ಪಡೆದರು

ಬೆಲೆ ಏರಿಕೆ ಖಂಡಿಸಿ ಮೈಸೂರಲ್ಲಿ ರೈತರ ಪ್ರತಿಭಟನೆ

ಮೈಸೂರು,ಏ.28(ಎಂಟಿವೈ)– ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ರಾಜ್ಯ ರೈತ ಸಂಘದ ಕಾರ್ಯಕರ್ತರು ಮೈಸೂರಲ್ಲಿ ಪ್ರತಿಭಟನೆ ನಡೆಸಿದರು.



ಮೈಸೂರಿನ ಮಹಾತ್ಮಗಾಂಧಿ ವೃತ್ತದಲ್ಲಿ ಗುರುವಾರ ಪ್ರತಿಭಟನೆ ನಡೆಸಿದ ರೈತ ಸಂಘದ ಕಾರ್ಯಕರ್ತರು, ಕೇಂದ್ರ ಸರ್ಕಾರ ಜನರ ಹಿತ ಕಾಯುವಲ್ಲಿ ವಿಫಲವಾಗಿದೆ. ಬೆಲೆ ಏರಿಕೆಯಿಂದಾಗಿ ಸಾರ್ವಜನಿಕರ ಜೀವನ ದುಸ್ತರವಾಗಿದೆ. ಅದರಲ್ಲೂ ರೈತರ ಪಾಡು ಹೇಳತೀರದಾಗಿದೆ. ರೈತರು ಬೆಳೆದ ಬೆಳೆಗೆ ಸೂಕ್ತ ಬೆಲೆಯೇ ಸಿಗುತ್ತಿಲ್ಲ. ದಿನ ಬಳಕೆಯ ವಸ್ತುಗಳ ಬೆಲೆ ಗಗನಕ್ಕೇರುತ್ತಿದೆ. ಪಾಕಿಸ್ತಾನ, ಬಾಂಗ್ಲಾದೇಶದಂತಹ ಹಿಂದುಳಿದ ದೇಶಗಳಲ್ಲಿ ಪೆಟ್ರೋಲ್ ಬೆಲೆ ಕಡಿಮೆ ಇದ್ದರೂ ನಮ್ಮಲ್ಲಿ ದಿನದಿಂದ ದಿನಕ್ಕೆ ಏರಿಕೆಯಾಗುತ್ತಲೇ ಇದೆ. ಇದರಿಂದ ಬಿಜೆಪಿ ಸರ್ಕಾರ ವ್ಯಾಪಾರಸ್ಥರ ಸರ್ಕಾರ ಎಂದು ಸಾಬೀತು ಮಾಡಿದೆ ಎಂದು ಕಿಡಿಕಾರಿದರು.

ರೈತರ ಬೆಳೆಗೆ ವೈಜ್ಞಾನಿಕ ಬೆಲೆ ಸಿಗುತ್ತಿಲ್ಲ. ಬೆಂಬಲ ಬೆಲೆ ಕೇವಲ ನಾಟಕವಾಗಿದೆ. ಭತ್ತ ರಾಗಿ ಸೇರಿದಂತೆ ಬೆಳೆಗಳನ್ನು ಕಟಾವಾದ ಕೂಡಲೇ ಖರೀದಿ ಮಾಡುವುದಿಲ್ಲ. ಖರೀದಿ ಮಾಡಿದ ಬೆಳೆಗೆ ಹಣ ನೀಡಲು ತಿಂಗಳಾನುಗಟ್ಟಲೆ ಸತಾಯಿಸುತ್ತಿದ್ದಾರೆ. ಇದರಿಂದ ರೈತರು ತೊಂದರೆ ಅನುಭವಿಸುತ್ತಿದ್ದಾರೆ. ಮಾರುಕಟ್ಟೆಯಲ್ಲಿ ರೈತರಿಗಿಂತ ಮಧ್ಯವರ್ತಿಗಳೇ ಹೆಚ್ಚು ಲಾಭ ಮಾಡಿಕೊಳ್ಳುತ್ತಿದ್ದಾರೆ. ರಾಜ್ಯ ಹಾಗೂ ಕೇಂದ್ರ ಸರ್ಕಾರದ ದುರಾಡಳಿತದಿಂದ ಇಂತಹ ಸ್ಥಿತಿ ನಿರ್ಮಾಣವಾಗಿದ್ದು, ಕೂಡಲೇ ರೈತರ ಸಮಸ್ಯೆ ಸರಿಪಡಿಸಬೇಕು. ಬೆಲೆ ಏರಿಕೆ ನಿಯಂತ್ರಿಸಿ ಸಾಮಾನ್ಯ ಜನರಿಗೆ ಅನುಕೂಲ ಮಾಡಿಕೊಡಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಎನ್.ಎಸ್.ವರ್ಮ ಜೈನ್, ಪ್ರಧಾನ ಕಾರ್ಯದರ್ಶಿ ಡಾ.ಬಿ.ಎನ್.ಲೋಕೇಶ್, ಕಾರ್ಯದರ್ಶಿ ಪಾಪೇಗೌಡ, ಶಿವರಾಜ್, ಗವಿರಂಗೇಗೌಡ, ಕಿರಂಗೂರು ಪಾಪು ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಮುದ್ರಾ ಯೋಗ, ಧ್ಯಾನ ಶಿಬಿರ

ಮೈಸೂರು,ಏ.28–ಬ್ರಹ್ಮಶ್ರೀ ನಾರಾಯಣಗುರು ಯೋಗ ಮಂದಿರ ಟ್ರಸ್ಟ್ ವತಿಯಿಂದ ಅನಾರೋಗ್ಯ ಸಮಸ್ಯೆ ನಿವಾರಣೆ ಹಾಗೂ ಮನಃ ಶಾಂತಿಗಾಗಿ ಒಂದು ತಿಂಗಳ ಮುದ್ರಾಯೋಗ ಹಾಗೂ ಧ್ಯಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಶಿಬಿರವು ಮೇ 4ರಿಂದ 1 ತಿಂಗಳ ಕಾಲ ಪ್ರತಿದಿನ ಬೆಳಗ್ಗೆ 6.30ರಿಂದ 7.30ರವರೆಗೆ ನಡೆಯಲಿದೆ. 8 ವರ್ಷ ಮೇಲ್ಪಟ್ಟ ಎಲ್ಲಾ ವಯೋಮಾನದವರು ಭಾಗವಹಿಸಬಹುದಾಗಿದೆ. ಶಿಬಿರವು ನಿಮಿಷಾಂಬಾ ನಗರದ ಬ್ರಹ್ಮಶ್ರೀ ನಾರಾಯಣಗುರು ಯೋಗ ಮಂದಿರದಲ್ಲಿ ನಡೆಯಲಿದೆ.

ಹೆಚ್ಚಿನ ವಿವರಗಳಿಗಾಗಿ ಮೊ.944 9696998 ಸಂಪರ್ಕಿಸುವಂತೆ ಟ್ರಸ್ಟ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಅರೆಬರೆ ತಿಳಿದವರಿಂದ ಸಂವಿಧಾನ, ಬುದ್ಧ, ಬಸವಣ್ಣ, ಅಂಬೇಡ್ಕರ್ ಅಣಕಿಸುವ ಕೆಲಸ

ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಬೇಸರ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಹಮ್ಮಿಕೊಂಡಿದ್ದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವವರನ್ನು ಸನ್ಮಾನಿಸಲಾಯಿತು.

ಮೈಸೂರು,ಏ.28(ಪಿಎಂ)–ಪ್ರಸ್ತುತ ಸಂವಿಧಾನ, ಬುದ್ಧ, ಬಸವಣ್ಣ ಮತ್ತು ಅಂಬೇಡ್ಕರ್ ಅವರನ್ನು ಅಣಕಿಸುವ ಕೆಲಸ ನಡೆಯುತ್ತಿದೆ ಎಂದು ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಬೇಸರ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮೈಸೂರು ಶರಣ ಮಂಡಲಿ ವತಿಯಿಂದ ಹಮ್ಮಿಕೊಂಡಿದ್ದ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜಯಂತಿ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ತುಂಬಿದ ಕೊಡ ತುಳುಕುವುದಿಲ್ಲ ಎಂಬ ಗಾದೆ ಮಾತಿದೆ. ಅಂತೆಯೇ ಅರೆಬರೆ ತುಂಬಿದ ಕೊಡದಂತಿರುವ ಜನರು ಇಂದು ಸಂವಿಧಾನ, ಬುದ್ಧ, ಬಸವಣ್ಣ ಮತ್ತು ಅಂಬೇಡ್ಕರ್ ಅವರನ್ನು ಅಣಕಿಸುವ ಕೆಲಸ ಮಾಡುತ್ತಿದ್ದಾರೆ ಎಂದರು.

ಜಾತ್ಯಾತೀತ, ಧರ್ಮ ನಿರಪೇಕ್ಷಿತ ಮತ್ತು ಪ್ರಜಾಪ್ರಭುತ್ವವಾದಿಗಳ ಸಂಖ್ಯೆಯೂ ದೇಶದಲ್ಲಿ ದೊಡ್ಡದಿದ್ದು, ಇಂತಹ ಉದಾತ್ತ ಚಿಂತನೆಯ ದೊಡ್ಡ ಸಮೂಹದ ನಡುವೆ ಕೆಲವೇ ಸಂಖ್ಯೆಯಲ್ಲಿರುವ ಅರೆಬರೆ ತುಂಬಿದ ಕೊಡದಂತಿರುವವರು ಗದ್ದಲ ಎಬ್ಬಿಸಿ ತಮ್ಮ ಕಾರ್ಯ ಸಾಧನೆಗೆ ಮುಂದಾಗಿದ್ದಾರೆ ಎಂದು ಕಿಡಿಕಾರಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮಾತನಾಡಿ, ಅಂಬೇಡ್ಕರ್ ಅವರು ನವಭಾರತ ನಿರ್ಮಾಣಕ್ಕೆ ತಮ್ಮ ಅಮೂಲ್ಯ ಕೊಡುಗೆಗಳನ್ನು ನೀಡಿದ್ದಾರೆ. ಅವರು ಭಾರತ ಮಾತ್ರವಲ್ಲ, ವಿಶ್ವ ನಾಯಕ ಎಂದು ಬಣ್ಣಿಸಿದರು.

ಇದೇ ವೇಳೆ ರಘುರಾಂ ವಾಜಪೇಯಿ (ಸಂಸ್ಕೃತಿ ಕ್ಷೇತ್ರ), ಡಾ.ಎಂ.ಶಿವಕುಮಾರ್ (ವೈದ್ಯಕೀಯ ಕ್ಷೇತ್ರ), ಕೆ.ಎಸ್.ಶಿವರಾಮು (ಸಮಾಜ ಸೇವಾ ಕ್ಷೇತ್ರ), ಹೇಮಾವತಿ (ಸಾಕ್ಷರತೆ), ಟಿ.ಎಸ್.ಅಮೃತ್ ಶರ್ಮ (ಸಾರ್ವಜನಿಕ ಕ್ಷೇತ್ರ) ಅವರನ್ನು ಸನ್ಮಾನಿಸಲಾಯಿತು. ರಾಜ್ಯ ಸರ್ಕಾರಿ ನೌಕರರ ಸಂಘದ ನಿಕಟಪೂರ್ವ ರಾಜ್ಯಾಧ್ಯಕ್ಷ ಹೆಚ್.ಕೆ.ರಾಮು, ನಂಜನಗೂಡು ತಾಲೂಕು ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಮಹದೇವಪ್ಪ, ಮಂಡಲಿ ಅಧ್ಯಕ್ಷ ಮೂಗೂರು ನಂಜುಂಡಸ್ವಾಮಿ ಮತ್ತಿತರರು ಹಾಜರಿದ್ದರು.

ಜಿಗ್ನೇಶ್ ಮೇವಾನಿ ಬಂಧನ ವಿರೋಧಿಸಿ ದಸಂಸ ಪ್ರತಿಭಟನೆ



ಮೈಸೂರು, ಏ.28(ಎಂಟಿವೈ)– ಪ್ರಗತಿಪರ ಹೋರಾಟಗಾರ ಜಿಗ್ನೇಶ್ ಮೇವಾನಿ ಬಂಧನ ಖಂಡಿಸಿ, ಕೂಡಲೇ ಅವರನ್ನು ಬಿಡುಗಡೆ ಮಾಡುವಂತೆ ಒತ್ತಾಯಿಸಿ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಡಿಸಿ ಕಚೇರಿ ಬಳಿ ಗುರುವಾರ ಪ್ರತಿಭಟನೆ ನಡೆಸಿದ ದಸಂಸ ಕಾರ್ಯಕರ್ತರು ಮೇವಾನಿ ಬಂಧನ ಖಂಡಿಸಿ ಘೋಷಣೆಗಳನ್ನು ಕೂಗಿದರು. ಜಿಗ್ನೇಶ್ ಮೇವಾನಿ ಅವರ ಬಂಧನ ಅಭಿವ್ಯಕ್ತಿ ಸ್ವಾತಂತ್ರ್ಯದ ಬಂಧನವಾಗಿದೆ. ದೇಶದಲ್ಲಿ ಶಾಂತಿ ಸೌಹಾರ್ದತೆ ಕದಡುತ್ತಾ ಕೋಮುಗಲಭೆ ಸೃಷ್ಟಿಸುವ ಗಲಭೆಕೋರರನ್ನು ಹತ್ತಿಕ್ಕದೇ ಕೋಮು ಸೌಹಾರ್ದತೆಗೆ ಮನವಿ ಮಾಡುವ ಪ್ರಗತಿಪರ ಹೋರಾಟಗಾರ ಜಿಗ್ನೇಶ್ ಮೇವಾನಿಯವರ ಬಂಧಿಸಿರುವುದು ಖಂಡನೀಯ. ಭಾರತದಲ್ಲಿ ಪ್ರಜಾಪ್ರಭುತ್ವದ ಕತ್ತು ಹಿಸುಕುವ ಇಂತಹ ಕೃತ್ಯಗಳಿಗೆ ಇತಿಶ್ರೀ ಹಾಡಿ ಸಂವಿಧಾನಾತ್ಮಕವಾಗಿ ಹಕ್ಕುಗಳನ್ನು ಎತ್ತಿಹಿಡಿಯಬೇಕು. ಜಿಗ್ನೇಶ್ ಮೇವಾನಿಯವರ ವಿರುದ್ಧ ದಾಖಲಾಗಿರುವ ಪ್ರಕರಣಗಳನ್ನು ವಜಾಗೊಳಿಸಿ ಬಿಡುಗಡೆ ಮಾಡುವಂತೆ ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ದಲಿತ ಸಂಘರ್ಷ ಸಮಿತಿ ಸಂಚಾಲಕ ಚೋರನಹಳ್ಳಿ ಶಿವಣ್ಣ, ಕೆ.ವಿ.ದೇವೇಂದ್ರ, ಕಿರಂಗೂರು ಸ್ವಾಮಿ, ಯಡದೊರೆ ಮಹದೇವಯ್ಯ, ಹಾರೋಹಳ್ಳಿ ನಟರಾಜ್, ಶಿವಮೂರ್ತಿ ಶಂಕರಪುರ, ಸಣ್ಣಯ್ಯ ಲಕ್ಕೂರು ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಸಂಗೀತ ವಿವಿ ನೌಕರರ ಪ್ರತಿಭಟನೆಗೆ ಆಮ್ ಆದ್ಮಿ ಬೆಂಬಲ

ಮೈಸೂರು, ಏ.28(ಎಂಟಿವೈ)– ವಜಾಗೊಳಿಸಿರುವ ತಮ್ಮನ್ನು ಮರು ನೇಮಕ ಮಾಡಿಕೊಳ್ಳುವಂತೆ ಆಗ್ರಹಿಸಿ ಕಳೆದ 2 ತಿಂಗಳಿಂದ ಪ್ರತಿಭಟನೆ ನಡೆಸುತ್ತಿರುವ ಸಂಗೀತ ವಿವಿ ನೌಕರರ ಪ್ರತಿಭಟನೆಗೆ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಪಾಲ್ಗೊಂಡು ಬೆಂಬಲ ಸೂಚಿಸಿದರು.



ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದ ಮುಂದೆ ವಜಾಗೊಂಡಿರುವ ನೌಕರರು ನಡೆಸುತ್ತಿರುವ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು, ಕೂಡಲೇ ವಜಾಗೊಳಿಸಿರುವ ಬೋಧಕೇತರ ಸಿಬ್ಬಂದಿಯನ್ನು ಮರು ನೇಮಕ ಮಾಡಿಕೊಳ್ಳಬೇಕು. ಅಲ್ಲದೆ, ಘಟನೆ ಸಂಬಂಧ ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು. ಬಾಕಿ ಇರುವ 13 ತಿಂಗಳ ಬಾಕಿ ವೇತನ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದರು.

ಆಮ್ ಆದ್ಮಿ ಪಕ್ಷದ ಜಿಲ್ಲಾಧ್ಯಕ್ಷೆ ಮಾಲವಿಕ ಗುಬ್ಬಿವಾಣಿ ಮಾತನಾಡಿ, ಕಳೆದ 2 ತಿಂಗಳಿನಿಂದ ವಿವಿ ಮುಂಭಾಗ ನೌಕರರು ಪ್ರತಿಭಟನೆ ನಡೆಸುತ್ತಿದ್ದರೂ ಜನಪ್ರತಿನಿಧಿಗಳಾಗಲೀ ಅಥವಾ ಹಿರಿಯ ಅಧಿಕಾರಿಗಳಾಗಲೀ ನೌಕರರಿಗೆ ನ್ಯಾಯ ಕೊಡಿಸುವ ಪ್ರಯತ್ನ ಮಾಡಿಲ್ಲ. ನೇಮಕಾತಿ ಪ್ರಕ್ರಿಯೆಯಲ್ಲಿ ಲೋಪವಾಗಿದೆ ಎಂಬ ಕಾರಣಕ್ಕೆ ಹಲವು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿಯನ್ನು ಇದ್ದಕ್ಕಿದ್ದಂತೆ ವಜಾ ಮಾಡಲಾಗಿದೆ ಎಂದು ಆರೋಪಿಸಿದರು. ನೇಮಕಾತಿ ಪ್ರಕ್ರಿಯೆಯಲ್ಲಿ ದೋಷವಿದ್ದರೆ, ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಕೆಲಸ ಮಾಡಿಸಿಕೊಂಡು ಸಂಬಳ ಕೊಡದೇ ಅನ್ಯಾಯ ಮಾಡುತ್ತಿದ್ದಾರೆ. ನ್ಯಾಯಕ್ಕಾಗಿ 2 ತಿಂಗಳಿಂದ ಪ್ರತಿಭಟನೆ ನಡೆಸುತ್ತಿದ್ದರೂ ಆಡಳಿತ ಮಂಡಳಿ ಜಾಣ ಕುರುಡು ತೋರುತ್ತಿರುವುದು ಖಂಡನೀಯ. ಸರ್ಕಾರ ಶೀಘ್ರವೇ ಸಮಸ್ಯೆಯನ್ನು ಇತ್ಯರ್ಥಪಡಿಸಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಆಮ್ ಆದ್ಮಿಯ ಜಿಲ್ಲಾ ಮಾಧ್ಯಮ ಉಸ್ತುವಾರಿ ಜಿ.ಆರ್.ವಿದ್ಯಾರಣ್ಯ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.



ಮೈಸೂರು ವಿಜಯನಗರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಆಗಿ ಅಧಿಕಾರ ಸ್ವೀಕರಿಸಿದ ರವಿಶಂಕರ್ ಅವರನ್ನು ಮೈಸೂರು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಕೆ.ಆರ್. ಕ್ಷೇತ್ರದ ಬಿಜೆಪಿ ಉಪಾಧ್ಯಕ್ಷ ಸಂತೋಷ್ ಶಂಭು, ಮೈಸೂರು ಟಾರ್ಪಾಲಿನ್ಸ್ ಮಾಲೀಕ ಪ್ರದೀಪ್ ಸಿಂಗ್, ಆಶ್ರಯ ಸಮಿತಿ ಸದಸ್ಯ ಹೇಮಂತ್ ಕುಮಾರ್, ಕೆ.ಆರ್ ಯುವ ಮೋರ್ಚಾ ಅಧ್ಯಕ್ಷ ಮನು ಶೈವ್ ಅಭಿನಂದಿಸಿದರು.

ಪರಿಶಿಷ್ಟ ಪಂಗಡಕ್ಕೆ ಶೇ.7.5 ಮೀಸಲಾತಿ: ಡಿಸಿಗೆ ಮನವಿ

ಮೈಸೂರು,ಏ.28– ಕರ್ನಾಟಕ ರಾಜ್ಯದಲ್ಲಿ 2011 ರ ಜನಗಣತಿಯ ಅಂಕಿ ಅಂಶಗಳ ಪ್ರಕಾರ ಪರಿಶಿಷ್ಟ ಪಂಗಡದವರ ಜನಸಂಖ್ಯೆ 42,48,987 ಇದ್ದು ರಾಜ್ಯದ ಒಟ್ಟಾರೆ ಜನಸಂಖ್ಯೆಯಲ್ಲಿ ಇವರ ಪ್ರಮಾಣ 6.95% ರಷ್ಟಿದೆ. ಜನಗಣತಿ ನಡೆದು 8 ವರ್ಷಗಳು ಕಳೆದಿರುವುದರಿಂದ ಈಗ ಈ ಜನಸಂಖ್ಯೆಯ ಪ್ರಮಾಣವು ಶೇ.7ಕ್ಕೂ ಹೆಚ್ಚು ಇದ್ದು, ಪರಿಶಿಷ್ಟ ಪಂಗಡದವರಿಗೆ ಅನೇಕ ದಶಕಗಳಿಂದ ಅನ್ಯಾಯವಾಗಿದೆ. ಅದ್ದರಿಂದ ಪರಿಶಿಷ್ಟ ಪಂಗಡದವರಿಗೆ ಕರ್ನಾಟಕ ರಾಜ್ಯದಲ್ಲಿ ನಿಗದಿಪಡಿಸಿರುವ ಮೀಸಲಾತಿ ಪ್ರಮಾಣ ಶೇ.3ರಿಂದ ಶೇ.7.5ಕ್ಕೆ ಹೆಚ್ಚಿಸಬೇಕು ಎಂದು ಒತ್ತಾಯಿಸಿ ವಾಲ್ಮೀಕಿ ನಾಯಕರ ಧ್ವನಿ ಗುರುವಾರ ಮೈಸೂರು ಜಿಲ್ಲಾಧಿಕಾರಿ ಗಳಿಗೆ ಮನವಿ ಸಲ್ಲಿಸಿದರು. ರಾಜ್ಯ ಸರ್ಕಾರ ಪರಿಶಿಷ್ಟ ಪಂಗಡದವರಿಗೆ ಶೇ.7.5 ರಷ್ಟು ಮೀಸಲಾತಿ ನೀಡುವುದಾಗಿ ಭರವಸೆ ನೀಡಿತ್ತು. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಎಚ್ಚೆತ್ತು ಕೂಡಲೇ ಪರಿಶಿಷ್ಟ ಪಂಗಡದವರಿಗೆ ಮೀಸಲಾತಿ ಘೋಷಣೆ ಮಾಡಬೇಕು ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಈ ವೇಳೆ ವಾಲ್ಮೀಕಿ ನಾಯಕರ ಧ್ವನಿಯ ಮುಖಂಡರಾದ ಲೋಕೇಶ್, ಜಯಸಿಂಹ, ಮಹೇಶ್ ಇಟ್ಟಿಗೆಗೂಡು, ಯೋಗೇಶ್, ಡಿ.ಮಾದೇಶ, ಶಿವು, ರಮ್ಮನಹಳ್ಳಿ, ಯೋಗೇಶ್ ಇತರರು ಹಾಜರಿದ್ದರು.



ನಾಳೆ ಡಾ.ರಾಜ್‌ಕುಮಾರ್ ಸಂಗೀತ ಸಂಜೆ

ಮೈಸೂರು,ಏ.28(ಪಿಎಂ)– ಮಹತೀ ಮ್ಯೂಸಿಕಲ್ ಗ್ರೂಪ್ ವತಿಯಿಂದ ಏ.30ರಂದು ಡಾ.ರಾಜ್‌ಕುಮಾರ್ ಸಂಗೀತ ಸಂಜೆ ಗಾಯನ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಗ್ರೂಪ್‌ನ ಗಾಯಕ ಅರುಣಾಚಲವ್ ತಿಳಿಸಿದರು. ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 4ರಿಂದ 9ರವರೆಗೆ ಮೈಸೂರಿನ ನಾದಬ್ರಹ್ಮ ಸಂಗೀತ ಸಭಾದಲ್ಲಿ ಕಾರ್ಯಕ್ರಮ ನಡೆಯಲಿದೆ. ಚಲನಚಿತ್ರ ನಿರ್ಮಾಪಕ ಎಸ್.ಎ. ಶ್ರೀನಿವಾಸ್ ಉದ್ಘಾಟಿಸಲಿದ್ದು, ಸಂಧ್ಯಾ ಸುರಕ್ಷಾ ಟ್ರಸ್ಟ್‌ನ ಟ್ರಸ್ಟಿ ಡಾ.ಬಿ.ಆರ್.ನಟರಾಜ ಜೋಯಿಸ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು. ಅತಿಥಿಗಳಾಗಿ ವಿಪ್ರ ಮುಖಂಡ ಡಾ.ರಘುರಾಮ ವಾಜಪೇಯಿ, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ಪಾಲ್ಗೊಳ್ಳಲಿದ್ದು, ತಂಡದ ಗಾಯಕರು ಚಲನಚಿತ್ರ ಗೀತೆಗಳನ್ನು ಸಾದರಪಡಿಸಲಿದ್ದಾರೆ. ಕಾರ್ಯಕ್ರಮ ವೀಕ್ಷಿಸಲು ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ ಎಂದರು. ಗ್ರೂಪ್‌ನ ಗಾಯಕರಾದ ಎಂ.ವಿ. ಗೋವಿಂದರಾಜು, ಪೂರ್ಣಿಮಾ ಲೋಕೇಶ್ ಮತ್ತಿತರರು ಗೋಷ್ಠಿಯಲ್ಲಿದ್ದರು.



ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

29.04.2022 ಶುಕ್ರವಾರ, ಮಳೆ ನಕ್ಷತ್ರ : ಭರಣಿ 27.04.2022 ರಿಂದ 10.05.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ
ತಿಥಿ: ಚತುರ್ದಶಿ, ನಕ್ಷತ್ರ: ರೇವತಿ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಮೈಸೂರು ಉತ್ಸವ :** ಮುಖ್ಯ ಅತಿಥಿಗಳು : ಶಾಸಕರಾದ ಎಸ್.ಎ. ರಾಮದಾಸ್, ಎಲ್. ನಾಗೇಂದ್ರ, ಸ್ಥಳ: ಜೆಎಸ್‌ಎಸ್ ಮೈದಾನ, ದೊಡ್ಡಕೆರೆ ಮೈದಾನದ ಪಕ್ಕ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20ಗೀತಾರಾಧನ, 6.35 ಅಮೃತ ಸ್ವಾತಂತ್ರ್ಯ ಮಾಲಿಕೆ 'ಆಧಾರ ಶಿಲೆ' ಮೈಸೂರು ಸುತ್ತಲಿನ ಪ್ರಾಗಿತಿಹಾಸ ತಾಣಗಳ ಪರಿಚಯ – ಡಾ. ಎಸ್.ಜಿ. ರಾಮದಾಸ ರೆಡ್ಡಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ– ಕೆ. ಶ್ರೇಯಾ ಮತ್ತು ಎ.ಎಸ್.ನಾಗಲಕ್ಷ್ಮಿ, ವ್ಯಾಖ್ಯಾನ– ಡಾ.ಬಿ.ವಿ.ವಸಂತಕುಮಾರ್, 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, ಭಾಗವಹಿಸುವ ತಜ್ಞರು– ಡಾ. ಲೋಕೇಶ್ ಹೆಚ್.ಎಂ., 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳವಳಿಯ ಪಯಣ–ಆಕಾಶವಾಣಿಯೊಂದಿಗೆ", 10.05 ಖೇಲೋ ಇಂಡಿಯಾ ಯೂನಿವರ್ಸಿಟಿ ಕ್ರೀಡಾಕೂಟದ ಗುರುವಾರದ ಆಟಗಳ ಅವತರಣಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ–ಬಾಂಬೆ ಜಯಶ್ರೀ, 12.45 ಕಾದಂಬರಿ ವಿಹಾರ, ಪ್ರಸ್ತುತಿ– ಉಮೇಶ್ ಎಸ್.ಎಸ್., 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರಕುಮಾರ್, 3.00 ಎ.ಎನ್. ಕಿಶನ್ – ವೀಣಾವಾದನ, 4.00 ಮಹಿಳಾರಂಗ–ಸಖೀ ಪದ, ಪ್ರಸ್ತುತಿ– ಕೆ.ಬಿ. ಮೀನಾ, 6.50 ಕೃಷಿರಂಗ–ಕಿಸಾನ್‌ವಾಣಿ, ಸಾವಯವ ಕೃಷಿಯಲ್ಲಿನ ಅನುಭವ ಕುರಿತಂತೆ ಪಿ. ಹೇಮಂತ್ ಕುಮಾರ್ ಅವರೊಡನೆ ಸಂದರ್ಶನ, 9.00 Talk in English "Tentacles of Negativity" -Talk by Dr. B.N. Raveesh, 10.30 ಸವಿನೆನಪು

ಬಾಲಕನಿಗೆ ಯಶಸ್ವಿ ಲಿವರ್ ಟ್ರಾನ್ಸ್‌ಪ್ಲಾಂಟೇಶನ್

ಯಶಸ್ವಿ 50 ಶಸ್ತ್ರಚಿಕಿತ್ಸೆ: ಅಪೋಲೊ ಬಿಜಿಎಸ್ ಆಸ್ಪತ್ರೆ ಹೆಗ್ಗಳಿಕೆ

ಮೈಸೂರು, ಏ.28– ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆ, ಮೊದಲ ಪೀಡಿಯಾಟ್ರಿಕ್ ಮತ್ತು ಸ್ಪ್ಲಿಟ್ ಲಿವರ್ ಟ್ರಾನ್ಸ್‌ಪ್ಲಾಂಟೇಶನ್ ಅನ್ನು ಯಶಸ್ವಿಯಾಗಿ ನೆರವೇರಿಸಿದೆ.

ನಗರದಲ್ಲಿ ಇದೇ ಮೊದಲ ಬಾರಿಗೆ ಮಕ್ಕಳ ಯಕೃತ್ತಿನ ಕಸಿ ಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಿ ಸಾಧಿಸಿರುವ ಕೀರ್ತಿಗೆ ಅಪೋಲೊ ಬಿಜಿಎಸ್ ಆಸ್ಪತ್ರೆಯ ಶಸ್ತ್ರಚಿಕಿತ್ಸಾ ಕಸಿ ತಂಡ ಪಾತ್ರವಾಗಿದೆ. ಪೂರ್ಣ ಪ್ರಮಾಣದ ಯಕೃತ್ತು ವೈಫಲ್ಯದಿಂದ ಬಳಲುತ್ತಿದ್ದ 9 ವರ್ಷದ ಬಾಲಕನಿಗೆ ಯಶಸ್ವೀ ಕಸಿ ಚಿಕಿತ್ಸೆ ನೀಡುವ ಮೂಲಕ ಬಾಲಕನಿಗೆ ಮರುಜೀವ ನೀಡಿರುವ ತಂಡ, ಈ ಮೂಲಕ ದೀರ್ಘಕಾಲೀನ ಯಕೃತ್ತಿನ ಕಾಯಿಲೆ ರೋಗಿಗಳಿಗೆ ಭರವಸೆಯ ಕಿರಣ ಮೂಡಿಸಿದೆ.



ಯಶಸ್ವಿ ಶಸ್ತ್ರಚಿಕಿತ್ಸೆ ನಂತರ ಕೇಕ್ ಕತ್ತರಿಸಿ ಸಂಭ್ರಮಿಸಿದ ವೈದ್ಯರು, ಸಿಬ್ಬಂದಿವರ್ಗ

ಮಕ್ಕಳ ಮೊದಲ ಯಕೃತ್ತು ಕಸಿ ಮಾತ್ರವಲ್ಲದೆ ತೀವ್ರವಾದ ಪಿತ್ತಜನಕಾಂಗದ ವೈಫಲ್ಯಕ್ಕೆ ನಡೆಸಿದ ಹಾಗೂ ಒಬ್ಬರೇ ದಾನಿಯಿಂದ ಎರಡು ಜೀವಗಳನ್ನು ಉಳಿಸಿದ ಮೊದಲ ವಿಭಜಿತ ಯಕೃತ್ತಿನ ಕಸಿ ಎನ್ನುವುದು ವಿಶೇಷ. ಈ ಹೆಗ್ಗಳಿಕೆಯೊಂದಿಗೆ ಅಪೋಲೊ ಬಿಜಿಎಸ್ ಆಸ್ಪತ್ರೆ, ಈವರೆಗೆ 50 ಯಕೃತ್ತು ಕಸಿಯನ್ನು ಯಶಸ್ವಿಯಾಗಿ ಪೂರೈಸಿದೆ. ಮಕ್ಕಳ ಗ್ಯಾಸ್ಟ್ರೋಎಂಟರಾಲಜಿಸ್ಟ್ ಡಾ.ಅತಿರಾ ರವೀಂದ್ರನಾಥ್, ಲಿವರ್ ಕಸಿ ಶಸ್ತ್ರಚಿಕಿತ್ಸಕರಾದ ಡಾ.ಯಶವಂತ್ ಕುಮಾರ್, ಡಾ.ಸುರೇಶ್ ರಾಘವಯ್ಯ, ಡಾ.ಜಯಂತ್ ರೆಡ್ಡಿ, ಡಾ.ರಾಜೇಗೌಡ, ಡಾ.ಸಂಜಯ್ ಗೋವಿಲ್, ಕಸಿ ಅರಿವಳಿಕೆ ತಜ್ಞರಾದ ಡಾ.ನಾಗೇಶ್ ಡಾ.ಅನಿಂದಿತಾ ತಂಡ, ಬಾಲಕನಿಗೆ ಪುನರ್ಜನ್ಮ ನೀಡಿದೆ.

ಯಕೃತ್ತು ಕಸಿಗೊಳಗಾದ ಬಾಲಕ ಕೆಲ ದಿನಗಳ ಹಿಂದೆ ಜಾಂಡೀಸ್ ಕಾರಣದಿಂದ ಆಸ್ಪತ್ರೆಗೆ ದಾಖಲಾಗಿದ್ದ. ವೈದ್ಯಕೀಯ ಪರೀಕ್ಷೆಗಳನ್ನು ನಡೆಸಿದಾಗ ಆತನಿಗೆ ಯಕೃತ್ತು ವೈಫಲ್ಯವಿರುವುದು ಕಂಡು ಬಂದಿತ್ತಲ್ಲದೆ ತುರ್ತು ಯಕೃತ್ತಿನ ಕಸಿ ಅಗತ್ಯವಿತ್ತು. ಈ ವಿಚಾರವನ್ನು ಕುಟುಂಬದವರಿಗೆ ತಿಳಿಸಿ ಬಾಲಕನನ್ನು ರಾಜ್ಯ ಕಸಿ ಕಾರ್ಯಕ್ರಮ ಸುಪ್ರಾ–ತುರ್ತು ವಿಭಾಗದ ಅಡಿಯಲ್ಲಿ ನೋಂದಾಯಿಸಲಾಯಿತು. ಈ ನಡುವೆ ಆತನ ಸ್ಥಿತಿ ಮತ್ತಷ್ಟು ಗಂಭೀರವಾಗಿ ಕೋಮಾಕ್ಕೆ ಜಾರಿದ್ದ. ಜೀವನ್ಮರಣ ಸ್ಥಿತಿಯಲ್ಲಿದ್ದ ಬಾಲಕನಿಗೆ ಅದೃಷ್ಟವಶಾತ್ ಆತನಿಗೆ ಹೊಂದಾಣಿಕೆಯಾಗುವ ಅಂಗಾಂಗ ಸಿಕ್ಕಿತು. ಕೂಡಲೇ ಕ್ರಮ ವಹಿಸಿ ಮಗುವಿಗೆ ಯಕೃತ್ತಿನ ಒಂದು ಭಾಗವಷ್ಟೇ ಸಾಕಾಗಿತ್ತಾದ್ದರಿಂದ ವಿಭಜಿತ ಯಕೃತ್ತಿನ ಕಸಿ ಮಾಡಲಾಯಿತು. ಉಳಿದರ್ಧ ಯಕೃತ್ತನ್ನು ಮತ್ತೋರ್ವ ವಯಸ್ಕ ರೋಗಿಗೆ ಕಸಿ ಮಾಡಲಾಯಿತು. ಶಸ್ತ್ರಚಿಕಿತ್ಸೆ ನಂತರ ಬಾಲಕನು ಕೋಮಾದಿಂದ ಹೊರಬಂದು ಚೇತರಿಸಿಕೊಳ್ಳುತ್ತಿದ್ದಾನೆ ಎಂದು ಆಸ್ಪತ್ರೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಈ ಬಗ್ಗೆ ಆಸ್ಪತ್ರೆಯ ಉಪಾಧ್ಯಕ್ಷರೂ ಆದ ಘಟಕದ ಮುಖ್ಯಸ್ಥ ಭರತೀಶ ರೆಡ್ಡಿ ಮಾತನಾಡಿ, ನಾವು ಪ್ರಪಂಚದ ಹೆಸರಾಂತ ಸಂಸ್ಥೆಗಳಿಂದ ಅನುಭವಗಳನ್ನು ಪಡೆದ ಹೆಚ್ಚು ನುರಿತ ಕಸಿ ತಜ್ಞರ ತಂಡವನ್ನು ಹೊಂದಿದ್ದು, ಪ್ರತಿದಿನ ಶಸ್ತ್ರಚಿಕಿತ್ಸೆಗಳನ್ನು ನಡೆಸಿ ಉತ್ತಮ ಫಲಿತಾಂಶ ನೀಡಲಾಗುತ್ತಿದೆ. ಕಳೆದೊಂದು ದಶಕದಲ್ಲಿ ಅಂಗಾಂಗ ಕಸಿಯಲ್ಲಿ ಗಮನಾರ್ಹ ಸುಧಾರಣೆಗೆ ಕಾರಣವಾಗಿರುವ ಈ ಎಲ್ಲ ವೈದ್ಯರ ಸಮರ್ಪಣೆ ಮತ್ತು ಸಮಯೋಚಿತ ಸಮನ್ವಯವನ್ನು ಶ್ಲಾಘಿಸುತ್ತೇನೆ ಎಂದಿದ್ದಾರೆ. ಆಸ್ಪತ್ರೆಯ ಗ್ಯಾಸ್ಟ್ರೋಎಂಟರಾಲಜಿಸ್ಟ್ ಮತ್ತು ಇನ್ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೋಸೈನ್ಸ್‌ನ ಮುಖ್ಯಸ್ಥ ಡಾ.ರಾಜ್‌ಕುಮಾರ್ ಪಿ.ವಾಧ್ವಾ ಅವರೂ ವೈದ್ಯ ತಂಡದ ಸಾಧನೆಯನ್ನು ಪ್ರಶಂಸಿಸಿದ್ದಾರೆ.

ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆಗೆ 2017ರಲ್ಲಿ ಲಿವರ್ ಟ್ರಾನ್ಸ್‌ಪ್ಲಾಂಟ್ ಪರವಾನಗಿ ಹಾಗೂ 2020ರಲ್ಲಿ ಮಲ್ಟಿ ಆರ್ಗನ್ ಟ್ರಾನ್ಸ್‌ಪ್ಲಾಂಟ್ ಪರವಾನಗಿ ಸಿಕ್ಕಿದ್ದು, ಈ ಭಾಗದಲ್ಲಿ ಅಂಗ ಕಸಿ ಕೇಂದ್ರ (OTC) ಪರವಾನಗಿ ಪಡೆದ ಮೊದಲ ಸಂಸ್ಥೆ ಎಂಬ ಹೆಗ್ಗಳಿಕೆ ಹೊಂದಿದೆ.

ನಾಳೆ ಅಂಬೇಡ್ಕರ್ ದೃಷ್ಟಿಯಲ್ಲಿ ಸಮಾನತೆ–ಸ್ವಾಭಿಮಾನ–ಸ್ವಾವಲಂಬನೆ ಕುರಿತ ಉಪನ್ಯಾಸ

ಮೈಸೂರು,ಏ.28(ಪಿಎಂ)– ಸಮಾನತೆ–ಸ್ವಾಭಿಮಾನ–ಸ್ವಾವಲಂಬನೆ ಪ್ರತಿಷ್ಠಾನ ವತಿಯಿಂದ ಏ.30 ರಂದು ಬೆಳಗ್ಗೆ 11ಕ್ಕೆ ಭಾರತರತ್ನ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ 131ನೇ ಜನ್ಮದಿನೋತ್ಸವ ಪ್ರಯುಕ್ತ 'ಡಾ.ಅಂಬೇಡ್ಕರ್ ದೃಷ್ಟಿಯಲ್ಲಿ ಸಮಾನತೆ–ಸ್ವಾಭಿಮಾನ–ಸ್ವಾವಲಂಬನೆ' ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿದೆ.



ಮೈಸೂರು ವಿವಿಯ ಮಾನಸಗಂಗೋತ್ರಿಯ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ವಿಶ್ವಜ್ಞಾನಿ ಸಭಾಂಗಣದಲ್ಲಿ ಏರ್ಪಡಿಸಿರುವ ಉಪನ್ಯಾಸ ಕಾರ್ಯಕ್ರಮವನ್ನು ಸಂಸದ ವಿ.ಶ್ರೀನಿವಾಸ ಪ್ರಸಾದ್ ಉದ್ಘಾಟಿಸಲಿದ್ದಾರೆ. ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕ ಪ್ರೊ.ಎಂ. ಉಮಾಪತಿ ಉಪನ್ಯಾಸ ನೀಡಲಿದ್ದಾರೆ. ಮೈಸೂರು ವಿವಿ ಪ್ರಾಧ್ಯಾಪಕ ಪ್ರೊ.ಸಿ.ಬಸವರಾಜು ಪ್ರಾಸ್ತಾವಿಕ ಭಾಷಣ ಮಾಡಲಿದ್ದು, ನಿವೃತ್ತ ಪ್ರಾಧ್ಯಾಪಕ ಪ್ರೊ.ನೀಲಗಿರಿ ತಳವಾರ ಅಧ್ಯಕ್ಷತೆ ವಹಿಸಲಿದ್ದಾರೆ.

288ನೆಯ ಶಿವಾನುಭವ ದಾಸೋಹ ಉಪನ್ಯಾಸ

ಮೈಸೂರು,ಏ.28–ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ಆಶ್ರಯದಲ್ಲಿ ಪ್ರತಿ ತಿಂಗಳ ಕೊನೆಯ ಶನಿವಾರದಂದು ನಡೆಯುವ ಶಿವಾನುಭವ ದಾಸೋಹ ಮಾಲಿಕೆಯ 288ನೆಯ ಕಾರ್ಯಕ್ರಮವು ಏ.30ರಂದು ಸಂಜೆ 6 ಗಂಟೆಗೆ ಜೆಎಸ್ಎಸ್ ಆಸ್ಪತ್ರೆ ಆವರಣದಲ್ಲಿರುವ ರಾಜೇಂದ್ರ ಭವನದಲ್ಲಿ ನಡೆಯಲಿದೆ. ಕಾರ್ಯಕ್ರಮವು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಸಾನ್ನಿಧ್ಯದಲ್ಲಿ ನಡೆಯಲಿದೆ.

ನಕ್ಕರೆ ಅದೇ ಸ್ವರ್ಗ

ರಾಮು : "ಕೆಲಸಕ್ಕೆ ಅರ್ಜಿ ಹಾಕಿ ಸಂದರ್ಶನಕ್ಕೆ ಹೋದ"
ಸಂದರ್ಶಕ : "ನೀನ್ಯಾಕೆ ಹಿಂದಿನ ಕೆಲಸ ಬಿಟ್ಟೆ ?"
ರಾಮು : "ನನ್ನ ಕಂಪನಿ ಆಫೀಸನ್ನು ಸ್ಥಳಾಂತರಿಸಿತು. ಆದರೆ ನನಗೆ ಹೊಸ ವಿಳಾಸವನ್ನೇ ತಿಳಿಸಲಿಲ್ಲ?!"

ಮೈಸೂರು ಮಿತ್ರ
ಶುಕ್ರವಾರ, 29 ಏಪ್ರಿಲ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ನಿಖರವಾಗಿ ತಯಾರಿಸಿದ ಯೋಜನೆಯೇ ಯಶಸ್ಸಿನ ಮಹಲಿಗೆ ದಾರಿ
–ಲಿಯೋ ಟಾಲ್‌ಸ್ಟಾಯ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಮಕ್ಕಳಿರೋ ಮನೆ ಚೆಂದ, ಮರುಗ ಇರೋ ತೋಟ ಚೆಂದ

ನಿಮ್ಮ ಪತ್ರಗಳು

ಗ್ರಾಮಗಳ ರಸ್ತೆ ದುರಸ್ತಿಪಡಿಸಿ



ಮಾನ್ಯರೆ,

ಕೆ.ಆರ್.ನಗರ ತಾಲೂಕು ಸಾಲಿಗ್ರಾಮ ಹೋಬಳಿ ಶಿಗವಾಳು ಗ್ರಾಮ ಪಂಚಾಯಿತಿಗೆ ಸೇರಿದ ಮನುಗನಹಳ್ಳಿ, ಬೆಟ್ಟಳ್ಳಿ, ಕುಲುಮೆ, ಹೊಸೂರು ಗ್ರಾಮಗಳು ತೀರಾ ಹಿಂದುಳಿದಿದ್ದು, ರಸ್ತೆ ದುರಸ್ತಿಯಾಗಿ ಸುಮಾರು 15 ರಿಂದ 20 ವರ್ಷ ಆಗಿದೆ. ಇಲ್ಲಿಯವರೆಗೂ ತಾತ್ಕಾಲಿಕ ದುರಸ್ತಿಯಾಗಲಿ, ಡಾಂಬರೀಕರಣವಾಗಲೀ ಯಾವುದೂ ಆಗಿಲ್ಲ. ಮಳೆ ಬಂದರೆ ರಸ್ತೆ ಯಾವುದು, ಗುಂಡಿ ಯಾವುದು ಕಾಣುವುದಿಲ್ಲ. ಇದು ಹಾಸನ–ಮೈಸೂರು ಜಿಲ್ಲೆ ಗಡಿ ಭಾಗವಾಗಿರುವುದರಿಂದ ಈ ಹಳ್ಳಿಗಳು ಯಾವುದೇ ಅಭಿವೃದ್ಧಿ ಕಂಡಿಲ್ಲ. ಜಿಲ್ಲಾಧಿಕಾರಿಗಳಾಗಲೀ, ತಾಲೂಕು ಅಧಿಕಾರಿಗಳಾಗಲೀ ಯಾರೂ ಕೂಡ ಇತ್ತ ಗಮನಹರಿಸುತ್ತಿಲ್ಲ. ಈ ರಸ್ತೆಯಲ್ಲಿ ಸಾವು ನೋವುಗಳು ಸಂಭವಿಸುತ್ತಿವೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು, ಜನಪ್ರತಿನಿಧಿಗಳು ಇತ್ತ ಗಮನಹರಿಸಿ ರಸ್ತೆ ಅಭಿವೃದ್ಧಿ ಮಾಡಬೇಕಾಗಿ ಮನವಿ.

–ಮನುಗನಹಳ್ಳಿ ಗ್ರಾಮಸ್ಥರು, ಕೆ.ಆರ್.ನಗರ ತಾ.

ಸಂಚಾರಿ ಪೊಲೀಸರು ಕೂಡಲೇ ಕ್ರಮ ಕೈಗೊಳ್ಳಬೇಕಿದೆ

ಮಾನ್ಯರೆ,



ಗೂಡ್ಸ್ ಆಟೋ ಮತ್ತು ಇನ್ನಿತರೆ ಗೂಡ್ಸ್ ವಾಹನಗಳ ಅವೈಜ್ಞಾನಿಕ ಬಾಡಿಲೈನ್‌ನಿಂದಾಗಿ ಇತರೆ ವಾಹನ ಚಾಲಕರು ಸಾಕಷ್ಟು ಸಮಸ್ಯೆ ಎದುರಿಸಬೇಕಾಗಿ ಬಂದಿದೆ. ಇಂತಹ ವಾಹನಗಳ ಬಾಡಿ, ಅದರ ಕ್ಯಾಬಿನ್‌ನಿಂದ ಹೊರಚಾಚಿದ್ದು, ಅವುಗಳ ಸೈಡ್ ಮಿರರ್ ಬಾಡಿಯ ಒಳಗಡೆ ಬರುವುದರಿಂದ ಸಾಮಾನ್ಯವಾಗಿ ಇವುಗಳ ಹಿಂದೆ ಬರುವ ವಾಹನಗಳು ಇವುಗಳನ್ನು ದಾಟಿ ಮುಂದೆ ಹೋಗಲು ಹರಸಾಹಸ ಪಡಬೇಕಿದೆ. ಅಲ್ಲದೆ, ಸ್ವತಃ ಅದರ ಚಾಲಕನಿಗೆ ತನ್ನ ಹಿಂದೆ ಬರುವ ವಾಹನದ ಪರಿವೆಯೇ ಇರುವುದಿಲ್ಲ. ಸರಕು ತುಂಬಿದ್ದರಂತೂ ಅವುಗಳು ಸಾಗಿದ್ದೇ ಹಾದಿ. ಹಿಂದೆ ಬರುವ ವಾಹನಗಳು ಹರಸಾಹಸಪಟ್ಟು ಮುಂದೆ ಸಾಗಬೇಕಿದೆ. ಕಂಪನಿಯಿಂದ ಸಂಚಾರಿ ನಿಯಮಾವಳಿಯಂತೆಯೇ ಬಾಡಿ ಅಳವಡಿಸಿದ್ದರೂ, ವ್ಯವಹಾರಿಕ ದೃಷ್ಟಿಯಿಂದ ಅವುಗಳ ಖರೀದಿಸಿದ ಗ್ರಾಹಕರು, ಬಾಡಿಯನ್ನು ಎತ್ತರಕ್ಕೆ ವಿಸ್ತರಿಸುವುದರಿಂದ ಅವುಗಳ ಆಕಾರ ಸಹ ಬದಲಾಗಿ ಸಂಚಾರ ನಿಯಮಾವಳಿಗಳ ಉಲ್ಲಂಘನೆ ಆಗುವುದರೊಂದಿಗೆ ಇನ್ನಿತರ ವಾಹನ ಚಾಲಕರಿಗೆ ಅಪಾಯ ತಂದೊಡ್ಡುವ ಸಾಧ್ಯತೆ ಹೆಚ್ಚಿದೆ. ಇದರ ಬಗ್ಗೆ ಸಂಚಾರಿ ಪೊಲೀಸರು ಕೂಡಲೇ ಗಮನ ಹರಿಸಬೇಕಿದೆ.

–ನಾಗೇಂದ್ರ, ಒಂಟಿಕೊಪ್ಪಲ್, ಮೈಸೂರು.

ಮಕ್ಕಳಿಗೆ ಅಪಾಯದ ಅರಿವು ಮೂಡಿಸಿ

ಮಾನ್ಯರೆ,

ಮಸಗೆ ಗ್ರಾಮದಲ್ಲಿ ಆಟವಾಡುತ್ತಾ ಖಾಲಿ ಐಸ್‌ಕ್ರೀಂ ಬಾಕ್ಸ್‌ನಲ್ಲಿ ಅಡಗಿಕೊಳ್ಳಲು ಹೋಗಿ ಉಸಿರುಗಟ್ಟಿ ಮಕ್ಕಳಾದ ಭಾಗ್ಯ ಮತ್ತು ಕಾವ್ಯ ಮೃತ ಪಟ್ಟಿದ್ದಾರೆ. ಇದು ಅತ್ಯಂತ ನೋವಿನ ಸಂಗತಿಯಾಗಿದೆ. ಈಗ ಮಕ್ಕಳಿಗೆ ಬೇಸಿಗೆಯ ರಜಾ ಇರುವುದರಿಂದ ಹೆಚ್ಚಾಗಿ ಮನೆಯಿಂದ ಹೊರಗೆ ಆಟವಾಡುತ್ತಾ ಕಾಲ ಕಳೆಯುತ್ತಾರೆ. ಈ ಸಮಯದಲ್ಲಿ ಪೋಷಕರು ಹಾಗೂ ಶಿಕ್ಷಕರು ಅಪಾಯದ ಅರಿವನ್ನು ಮಕ್ಕಳಲ್ಲಿ ಮೂಡಿಸಬೇಕು.

ಉದಾಹರಣೆಗೆ ಜೋಕಾಲಿ ಆಡುವಾಗ, ರಸ್ತೆಯಲ್ಲಿ ತೆರೆದ ಮ್ಯಾನ್‌ಹೋಲ್ ಇದ್ದಾಗ, ತೋಟದ ನೆಲಬಾವಿ, ರಸ್ತೆಯಲ್ಲಿ ಎಲೆಕ್ಟ್ರಿಕ್ ವೈರ್ ಬಿದ್ದಿದ್ದಾಗ, ಆಕಸ್ಮಿಕವಾಗಿ ರಸ್ತೆ ಅಪಘಾತ, ಮಕ್ಕಳ ಅಪಹರಣ, ನದಿಯ ಬಳಿ ಆಕಸ್ಮಿಕವಾಗಿ ಜಾರಿ ಬೀಳುವುದು, ಇಂತಹ ಸನ್ನಿವೇಶಗಳಿಂದ ಪಾರಾಗಲು ಹಾಗೂ ಅಪಾಯದ ಮುನ್ಸೂಚನೆಯನ್ನು ಮಕ್ಕಳಿಗೆ ತಿಳಿಸಬೇಕು.

ಇಂತಹ ಸಂದರ್ಭದಲ್ಲಿ ಮಕ್ಕಳು ಸಾಹಸ ಪ್ರವೃತ್ತಿವುಳ್ಳವರಾಗಿದ್ದರೆ ಜೀವ ಉಳಿಯುವ ಸಾಧ್ಯತೆ ಇರುತ್ತದೆ.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

ಸರ್ಕಾರಿ ಬಸ್‌ಗಳಲ್ಲಿ ರಾಜಕಾರಣಿಗಳಿಗೇಕೆ ಮೀಸಲಾತಿ?

ಮಾನ್ಯರೆ,


ಗ್ರೀಕ್ ತತ್ವಜ್ಞಾನಿ ಪ್ಲೇಟೊನ ರಾಜಕೀಯ ಸಿದ್ಧಾಂತದ ಪ್ರಕಾರ "ರಾಜನಾದವನು ತತ್ವಜ್ಞಾನಿಯಾಗಿರಬೇಕು ಅಥವಾ ತತ್ವಜ್ಞಾನಿ ರಾಜನಾಗಿರಬೇಕು". ಈ ಪ್ರತಿಪಾದನೆ ಸರ್ವಕಾಲಕ್ಕೂ ಸಲ್ಲುವ ರಾಜಕೀಯ ಸಿದ್ಧಾಂತವಾಗಿದೆ. ಎಲ್ಲಾ ವಿಷಯಗಳ ಬಗೆಗಿನ ಜ್ಞಾನವನ್ನು ಹೊಂದಿರುವ ವ್ಯಕ್ತಿಗಳು ರಾಜಕೀಯದಲ್ಲಿ ಸಕ್ರಿಯವಾಗಿದ್ದರೆ ರಾಜ್ಯ ಮತ್ತು ಪ್ರಜೆಗಳ ಕಲ್ಯಾಣ ಸಾಧ್ಯವಾಗಿ "ವೆಲ್‌ಫೇರ್ ಸ್ಟೇಟ್" ನಿರ್ಮಿಸಲು ಸಾಧ್ಯವಾಗುತ್ತದೆ.

ಪ್ರಸ್ತುತ ಸನ್ನಿವೇಶದಲ್ಲಿ ಬೆರಳೆಣಿಕೆಯಷ್ಟು ಮಾತ್ರ ಸಂವೇದನಾಶೀಲ ರಾಜಕಾರಣಿಗಳನ್ನು ಕಾಣಲು ಸಾಧ್ಯ. ಇಂದಿನ ರಾಜಕಾರಣಿಗಳು ಅಧಿಕಾರಕ್ಕೆ ಬಂದ ನಂತರ ತಮ್ಮ ಅಭಿವೃದ್ಧಿಯ ಕಡೆಗೆ ಗಮನಹರಿಸುತ್ತಾರೆಯೇ ಹೊರತು ಪ್ರಜೆಗಳ ಬಗ್ಗೆ ಚಿಂತಿಸುವುದಿಲ್ಲ.

ಸರ್ಕಾರಿ ಬಸ್‌ಗಳಲ್ಲಿ ವಿಧಾನಸಭೆ ಮತ್ತು ಲೋಕಸಭಾ ಸದಸ್ಯರಿಗೆ ಕೆಲವು ಸೀಟುಗಳನ್ನು ಮೀಸಲಿಡಲಾಗಿರುತ್ತದೆ. ಆದರೆ ಯಾವುದೇ ರಾಜಕಾರಣಿ ಇಂದಿನ ದಿನಗಳಲ್ಲಿ ಬಸ್‌ನಲ್ಲಿ ಸಂಚರಿಸುವುದು ಅತೀ ವಿರಳ ಹಾಗೂ ಇಂತಹ ಮೀಸಲಾತಿಗಳನ್ನು ಅವರ ಅನುಯಾಯಿಗಳು ದುರುಪಯೋಗ ಪಡಿಸಿಕೊಳ್ಳುತ್ತಾರೆ.

ಇದರಿಂದ ಸರ್ಕಾರ ಮತ್ತು ಪ್ರಜೆಗಳಿಗೆ ಯಾವುದೇ ಲಾಭವಿಲ್ಲ. ಈ ಯೋಜನೆಗಳನ್ನು ರದ್ದುಪಡಿಸುವುದರಿಂದ ಸರ್ಕಾರದ ಬೊಕ್ಕಸದ ವೆಚ್ಚ ಕಡಿಮೆ ಮಾಡಬಹುದು. ಹಿಂದೆ ಲಾಲ್ ಬಹದ್ದೂರ್ ಶಾಸ್ತ್ರಿ, ಅಟಲ್ ಬಿಹಾರಿ ವಾಜಪೇಯಿ, ಜಯಪ್ರಕಾಶ್ ನಾರಾಯಣ್, ಜಾರ್ಜ್ ಫರ್ನಾಂಡಿಸ್‌ರಂತಹ ಪ್ರಾಮಾಣಿಕ ನಾಯಕರು ಸರ್ಕಾರದ ಸೌಲಭ್ಯವನ್ನು ಪಡೆಯಲು ಅರ್ಹರಾಗಿದ್ದರು.


ದಿವಂಗತ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿಯವರಿಗೆ ಪ್ರಧಾನಿಯಾದ ಸಮಯದಲ್ಲಿ ಬರುತ್ತಿದ್ದ ಸಂಬಳ 50ರೂಗಳು, ಒಮ್ಮೆ ಅವರ ಪತ್ನಿ ಲಲಿತ ಶಾಸ್ತ್ರಿಯವರು, ಲಾಲ್ ಬಹದ್ದೂರ್ ಶಾಸ್ತ್ರಿಯವರಿಗೆ ಉಳಿತಾಯದ ಸ್ವಲ್ಪ ಹಣವನ್ನು ಹಿಂತಿರುಗಿಸಿದರೆ, ಈ ಕುರಿತು ವಿಚಾರಿಸಿದ ಲಾಲ್ ಬಹದ್ದೂರ್ ಶಾಸ್ತ್ರಿ ತಮ್ಮ ಪತ್ನಿ ತಿಂಗಳ ಸಂಬಳದಲ್ಲಿ ಹಣ ಉಳಿತಾಯ ಮಾಡಿರುವುದನ್ನು ಕಂಡು ತಮ್ಮ ಸಂಸಾರ ನಿಭಾಯಿಸಲು 40 ರೂಪಾಯಿಗಳು ಸಾಕೆಂದು 50ರೂಗಳ ಸಂಬಳವನ್ನು 40ರೂಗಳಿಗೆ ಕಡಿಮೆ ಮಾಡಿಸಿಕೊಂಡರು. ಇಂತಹ ರಾಜಕಾರಣಿ ಮತ್ತೆ ಹುಟ್ಟಲು ಸಾಧ್ಯವೇ? ಇಂದು ಬಹುತೇಕ ರಾಜಕಾರಣಿಗಳು ದುರಾಸೆ, ಸ್ವಾರ್ಥಪರರು. ಸರ್ಕಾರಿ ಬಸ್‌ಗಳಲ್ಲಿನ ನಾಯಕರುಗಳ ಮೀಸಲಾತಿಯನ್ನು ಮಕ್ಕಳು, ಹೆಂಗಸರು, ವೃದ್ಧರು, ಅಂಗವಿಕಲರಿಗೆ ದೊರಕುವಂತೆ ಮಾಡಿದರೆ ಉತ್ತಮ. –ರಾ. ಸುಮಾ ಭಟ್, ಚಿಕ್ಕಮಗಳೂರು.



ಕೆಬಿಜೆಯವರ

ಭೂಮಂತ್ರ... ಭೂಮಂತ್ರ... ಭೂಮಂತ್ರ...

ಸರ್ಕಾರಕ್ಕೆ "ಮಾನವೀಯ ಮುಖವಿರಬೇಕು": ಡಾ.ಮನಮೋಹನ್ ಸಿಂಗ್ ಅವರನ್ನು ಕೇಳಿ



ಡಾ. ಮನಮೋಹನ್ ಸಿಂಗ್



ಸಾಂದರ್ಭಿಕ ಚಿತ್ರ

ಕೆಲವು ದಿನಗಳ ಹಿಂದೆ **ನ್ಯೂಸ್ ಟ್ರಯಲ್** ಪತ್ರಿಕೆಯಲ್ಲಿ, ಪತ್ರಿಕೋದ್ಯಮ ಪರಿಭಾಷೆಯಲ್ಲಿ ಸಾಮಾನ್ಯವಾಗಿ ಬಳಕೆಯಲ್ಲಿರುವ, ಮನ ಮಿಡಿಯುವಂತಹ "ಒರಿಸ್ಸಾ ಹೈಕೋರ್ಟ್‌ನಿಂದ ವಿಕಲಚೇತನ ಶಿಕ್ಷಕನ ಮರು ನೇಮಕಕ್ಕೆ ಆದೇಶ" ಎಂಬ ಶೀರ್ಷಿಕೆಯಡಿಯ ವರದಿಯೊಂದನ್ನು ಓದಿದೆ.

ಆ ಶಿಕ್ಷಕನ ಹೆಸರು ಸಂತೋಷ್ ಕುಮಾರ್ ಪಾಡಿ. ಅವರು ಹಿಂದೆ ಕೊಕೊಡಗುಡ ಎಂಬಲ್ಲಿನ ಶಾಲೆಯಲ್ಲಿ ಮೂರು ವರ್ಷಗಳ ಕಾಲ ಸಹಾಯಕರಾಗಿ (ಶಿಕ್ಷಾ ಸಹಾಯಕ) ಕೆಲಸ ಮಾಡಿದ್ದರು. ಈ ಶಾಲೆ ಒರಿಸ್ಸಾದ ನಬರಂಗಪುರ್ ಎಂಬ ಜಿಲ್ಲೆಯಲ್ಲಿದೆ.

ಪಾಡಿಯವರು ನಂತರ ಅದೇ ಶಾಲೆಯಲ್ಲಿ ಕಿರಿಯ ಶಿಕ್ಷಕರಾಗಿ 28.04.2014 ರಿಂದ ನಿಯುಕ್ತಿ ಹೊಂದುತ್ತಾರೆ. ಆದರೆ ಪಾಡಿಯವರನ್ನು, ದಿನಾಂಕ 05.02.2018 ರಂದು ಸೇವೆಯಿಂದ ತೆಗೆದು ಹಾಕಲಾಗುತ್ತದೆ. ಆಗ ತಮ್ಮ ವಜಾ ಆದೇಶವನ್ನು ಪ್ರಶ್ನಿಸಿ ಪಾಡಿ, ಹೈಕೋರ್ಟ್ ಮೊರೆ ಹೋಗುತ್ತಾರೆ.

ಒರಿಸ್ಸಾ ಹೈಕೋರ್ಟ್ ದಿನಾಂಕ 05.04.2022 ರಂದು ಒಂದು ಆದೇಶ ಹೊರಡಿಸಿ, ಅರ್ಜಿದಾರರನ್ನು ಕೆಲಸದಿಂದ ವಜಾಗೊಳಿಸಿದ್ದು ಕಾನೂನಿನ ದೃಷ್ಟಿಯಲ್ಲಿ ಸಮರ್ಥನೀಯವಲ್ಲ ಎಂದು ಹೇಳಿ ವಜಾ ಆದೇಶವನ್ನು ರದ್ದುಗೊಳಿಸಿತು.

ನ್ಯಾಯಮೂರ್ತಿ ಎಸ್.ಕೆ. ಮಿಶ್ರಾ ನೀಡಿದ ಈ ತೀರ್ಪು ಅತ್ಯಂತ ಕನಿಕರದಿಂದ ಕೂಡಿದ್ದಾಗಿತ್ತು. ನ್ಯಾಯಮೂರ್ತಿಗಳು ಅರ್ಜಿದಾರ ಶಿಕ್ಷಕನ ಮರು ನೇಮಕಕ್ಕೆ ಆದೇಶ ನೀಡುವುದರ ಜೊತೆಗೆ, ಅವರ ಹಿಂದಿನ ಎಲ್ಲಾ ವೇತನ ಬಾಕಿಯನ್ನು (ಪೂರ್ವ ವೇತನ ಬಾಕಿ) ಹಾಗೂ ಇತರ ಎಲ್ಲಾ ರೀತಿಯ ಸೇವಾ ಸೌಕರ್ಯಗಳನ್ನು ಅವರು ವಜಾಗೊಂಡ ದಿನದಿಂದ ಅನ್ವಯವಾಗುವಂತೆ ನೀಡುವಂತೆಯೂ ಆದೇಶ ನೀಡಿದರು. ಎಲ್ಲಕ್ಕಿಂತ ಮುಖ್ಯವಾಗಿ, ತಮ್ಮ ತೀರ್ಪನ್ನು ನಾಲ್ಕು ವಾರಗಳ ಒಳಗಾಗಿ ಜಾರಿಗೊಳಿಸುವಂತೆ ನ್ಯಾಯಮೂರ್ತಿಗಳು ಆದೇಶಿಸಿದ್ದರು.

ಈ ರೀತಿ ಕಾಲ ಮಿತಿಯೊಳಗೆ ಹಿಂದಿನ ಸೇವಾ ಬಾಕಿ ಪಾವತಿ ಮಾಡಬೇಕೆಂಬ ಆದೇಶವನ್ನು ನಿರ್ದಿಷ್ಟವಾಗಿ ನೀಡಿದ್ದರ ಉದ್ದೇಶ ಏನಿರಬಹುದು? ನಮಗೆಲ್ಲಾ ಗೊತ್ತಿರುವ ಹಾಗೆ, ಅಧಿಕಾರಿ ವರ್ಗದವರು ಒಂದಲ್ಲ ಒಂದು ಕಾರಣ ನೀಡಿ, ಇಂತಹ ಆದೇಶಗಳ ಜಾರಿಯನ್ನು ವಿಳಂಬಗೊಳಿಸುವ ಧೋರಣೆ ಹೊಂದಿದ್ದಾರೆ. ಇದನ್ನು ನಾವು ಆಡಳಿತ ಯಂತ್ರದ "ಕೆಂಪು ಪಟ್ಟಿ ಪದ್ಧತಿ" ಎಂದು ಕರೆಯುತ್ತೇವೆ. ಘನತೆವೆತ್ತ ಹಾಗೂ ಸಹೃದಯಿ ನ್ಯಾಯಮೂರ್ತಿಗಳಿಗೆ, ಫಲಾನುಭವಿ ವಿಕಲಚೇತನರಾಗಿದ್ದರೂ ಸಹ, ಅಂತಃಕರಣ ಇಲ್ಲದ ಅಧಿಕಾರಸ್ಥರ ವಿಳಂಬ ನೀತಿ, ಮೊಂಡು ಧೋರಣೆ ಹಾಗೂ ಯೋಚನಾಲಹರಿ ಯಾವ ರೀತಿಯಲ್ಲಿ ಇರುತ್ತದೆ ಎಂಬುದು ತಿಳಿದಿತ್ತು.

ಸದರಿ ಶಾಲೆಯ ಆಡಳಿತ ಮಂಡಳಿಯವರು, ಕೋರ್ಟಿನಲ್ಲಿ ಆಕ್ಷೇಪ ವ್ಯಕ್ತಪಡಿಸಿ, **ಸದರಿ ಶಿಕ್ಷಕರು ಸಲ್ಲಿಸಿದ್ದ ಅಂಗವೈಕಲ್ಯ ಪ್ರಮಾಣ ಪತ್ರ ನಿಗದಿತ ನಮೂನೆಯಲ್ಲಿ ಇರಲಿಲ್ಲ ಎಂದು ತಗಾದೆ ತೆಗೆದರು**. ಆದರೆ, ಆ ಪ್ರಮಾಣ ಪತ್ರದಲ್ಲಿದ್ದ ಅಂಶಗಳು ಸರಿಯಾಗಿದ್ದವು ಎಂದು ರುಜುವಾತಾಗಿತ್ತು ಎಂಬ ಅಂಶವನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. **"ಬರೀ ತಾಂತ್ರಿಕ ದೋಷವೊಂದರಿಂದ ಅರ್ಜಿದಾರರಿಗೆ ನೀಡಬೇಕಾದ ಸವಲತ್ತುಗಳಿಗೆ ತಡೆಯಾಗಬಾರದು"** ಎಂದು ಕರುಣಾಳು ನ್ಯಾಯಮೂರ್ತಿಗಳು ತಮ್ಮ ತೀರ್ಪಿನಲ್ಲಿ ಉಲ್ಲೇಖಿಸಿದ್ದರು.

ಅರ್ಜಿದಾರ ಸಂತೋಷ್ ಕುಮಾರ್ ಪಾಡಿಯವರ ಕಷ್ಟಗಳಿಗೆ ವಿಕಲಚೇತನ ಇಲಾಖೆಯ ಆಯುಕ್ತರೇ ಕಾರಣರಾಗಿದ್ದರು. ಇಂತಹ ಅಧಿಕಾರಿಯ ಕೈಕೆಳಗೆ ಅದೆಷ್ಟು ವಿಕಲಚೇತನರು ಸಂಕಷ್ಟ ಅನುಭವಿಸಿರಬಹುದು ಎಂಬುದು ಆಶ್ಚರ್ಯಕರ ಸಂಗತಿ.

ಗೌರವಾನ್ವಿತ ನ್ಯಾಯಮೂರ್ತಿಗಳು, ಅದೆಷ್ಟು ಸಭ್ಯ ಹಾಗೂ ಮಾನವೀಯತೆಯ ಪ್ರತಿಬಿಂಬವಾಗಿದ್ದರೆಂದರೆ, "ತಮ್ಮ ಅಂಗವೈಕಲ್ಯತೆಗೆ ಸದರಿ ಶಿಕ್ಷಕರು ಕಾರಣವಲ್ಲ" ಎಂದು ಹೇಳಿದ್ದಾರೆ. ಪಾಡಿಯವರು ವೈದ್ಯಕೀಯ ಮಂಡಳಿಯಿಂದ ಎರಡು ಬಾರಿ ಪರೀಕ್ಷೆಗೆ ಒಳಗಾಗಿದ್ದರು. ಈ ಎರಡೂ ಸಂದರ್ಭದಲ್ಲಿಯೂ ಅವರ ಅಂಗವೈಕಲ್ಯತೆ ವಾಸ್ತವ ಎಂಬುದು ಸಾಬೀತಾಗಿದೆ.

ಗೌರವಾನ್ವಿತ ನ್ಯಾಯಮೂರ್ತಿಗಳಾದ ಎಸ್.ಕೆ.ಮಿಶ್ರಾ ಅವರು ಹೇಳಿರುವ ಮಾತುಗಳು ಎಲ್ಲಾ ಸರ್ಕಾರಿ ನೌಕರರ, ಚುನಾಯಿತ ಪ್ರತಿನಿಧಿಗಳ ಹಾಗೂ ಮೇಲಾಗಿ ಮಂತ್ರಿಗಳ ಕಣ್ಣು ತೆರೆಸಬೇಕು.

ಪತ್ರಿಕಾ ವರದಿಯಲ್ಲಿ ತಿಳಿಸಿರುವ ಹಾಗೆ, ಗೌರವಾನ್ವಿತ ನ್ಯಾಯಮೂರ್ತಿ ಮಿಶ್ರ ಅವರು "ಸರ್ಕಾರ ಒಂದು ಮಾದರಿ ಉದ್ಯೋಗದಾತ ಹಾಗೂ ಅದು ಇಚ್ಛಾನುಸಾರವಾದ ಮತ್ತು ಕಾನೂನಿಗೆ ವಿರುದ್ಧವಾದ ಕ್ರಮಗಳನ್ನು ಕೈಗೊಳ್ಳಬಾರದು" ಎಂಬುದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕೆಂದು ಕಿವಿಮಾತು ಹೇಳಿದ್ದಾರೆ.

ಈ ವರದಿಯನ್ನು ಓದುತ್ತಿದ್ದ ಹಾಗೆ, ನಮ್ಮ ಮಾಜಿ ಪ್ರಧಾನ ಮಂತ್ರಿ ಡಾ.ಮನಮೋಹನ ಸಿಂಗ್ ಅವರು ಪ್ರಧಾನಮಂತ್ರಿಗಳಾಗಿ ಹೇಳಿದ ಮಾತುಗಳು ನನ್ನ ಜ್ಞಾಪಕಕ್ಕೆ ಬಂತು. ಅವರು **"ನನ್ನ ಸರ್ಕಾರವು ಮಾನವೀಯ ಮುಖವನ್ನು ಹೊಂದಿರುತ್ತದೆ"** ಎಂದು ಹೇಳಿದ್ದರು.

ಮೇಲೆ ಹೇಳಲಾದ ವಿಭಿನ್ನ ರೀತಿಯ ವಿಕಲಚೇತನ ಶಿಕ್ಷಕರ ಬಗೆಗಿನ ವರದಿ ಸ್ಪಷ್ಟವಾಗಿ ನ್ಯಾಯಾಂಗದ ಮಾನವೀಯ ಮುಖವನ್ನು ಪ್ರತಿಬಿಂಬಿಸುತ್ತದೆ. ಆದರೆ, ಅಂದಿನ ಪ್ರಧಾನ ಮಂತ್ರಿಗಳು ಭರವಸೆ ನೀಡಿದ್ದ **"ಸರ್ಕಾರದಲ್ಲಿ ಮಾನವೀಯ ಮುಖ"**ವನ್ನು ಪಾಡಿಗೆ ಕೆಲಸ ಕೊಟ್ಟಿದ್ದರಲ್ಲಿ ಕಾಣುತ್ತೇವೆ.

ಸಂತೋಷ ಕುಮಾರ ಪಾಡಿಯವರು ಶಿಕ್ಷಕರಾಗಿ ಸದರಿ ಶಾಲೆಯಲ್ಲಿ ಕಾರ್ಯನಿರ್ವಹಿಸಿದ ಘಟನಾವಳಿ ಆಸಕ್ತಿ ಕೆರಳಿಸುತ್ತದೆ. ಸದರಿ ಶಾಲೆಯಲ್ಲಿ ಶಿಕ್ಷಕ ಸಹಾಯಕರಾಗಿ ಅವರು ದಿನಾಂಕ 29.04.2011 ರಂದು ಕೆಲಸಕ್ಕೆ ಸೇರಿದರು. ಆಗ ಆಡಳಿತದಲ್ಲಿ 'ಮಾನವೀಯ ಮುಖ' ಇರಬೇಕೆಂದು ಪ್ರತಿಪಾದಿಸುತ್ತಿದ್ದ ಡಾ.ಮನಮೋಹನ್ ಸಿಂಗ್ ಅಧಿಕಾರದಲ್ಲಿದ್ದರು. ಆ ಮಾನವೀಯ ಮುಖದ ಪ್ರತಿಪಾದನೆ ಏಪ್ರಿಲ್ 28, 2014 ರವರೆಗೆ ಜೀವಂತವಾಗಿತ್ತು (ಆಗಲೂ ಡಾ.ಮನಮೋಹನ್ ಸಿಂಗ್ ಅವರೇ ಪ್ರಧಾನಮಂತ್ರಿಯಾಗಿದ್ದರು). ಆಗಲೇ ಅದೇ ಶಾಲೆಯಲ್ಲಿ ಪಾಡಿಯವರು ಕಿರಿಯ ಶಿಕ್ಷಕರಾಗಿ ಕೆಲಸಕ್ಕೆ ಸೇರಿದ್ದರು.

ಆದಾಗ್ಯೂ, ವಿರೋಧಾಭಾಸ ಅನ್ನುವ ರೀತಿಯಲ್ಲಿ, ಪಾಡಿಯವರನ್ನು 05.02.2018 ರಂದು ಕೆಲಸದಿಂದ ತೆಗೆದು ಹಾಕಲಾಯಿತು. ಈ ಸಮಯದಲ್ಲಿ ನರೇಂದ್ರ ಮೋದಿಯವರು ಪ್ರಧಾನಮಂತ್ರಿಗಳಾಗಿದ್ದರು (ಈಗಲೂ ಸಹ). ಪ್ರಾಯಶಃ, ಅಧಿಕಾರಿ ವರ್ಗದವರು "ಮಾನವೀಯ ಮುಖದ ಪರಿಕಲ್ಪನೆಯು ಡಾ.ಮನಮೋಹನ್ ಸಿಂಗ್ ಅವರ ಅಧಿಕಾರದ ಅವಧಿಗೆ ಮಾತ್ರ ಸೀಮಿತವಾಗಿದೆ" ಎಂದು ಭಾವಿಸಿರಬಹುದು ಹಾಗೂ ನರೇಂದ್ರ ಮೋದಿ ನೇತೃತ್ವದ ಸರ್ಕಾರಕ್ಕೆ ಈ ಪರಿಕಲ್ಪನೆ ಅನ್ವಯಿಸುವುದಿಲ್ಲ ಎಂದು ಅರ್ಥೈಸಿರಲೂಬಹುದು.

ಆದರೂ, ಪಾಡಿಯವರ ಪಾಲಿನ ಅದೃಷ್ಟ ಅನ್ನುವ ರೀತಿಯಲ್ಲಿ, "ಆಡಳಿತದಲ್ಲಿ ಮಾನವೀಯ ಮುಖ" ತತ್ವವನ್ನು ಎತ್ತಿ ಹಿಡಿಯಲು ಗೌರವಾನ್ವಿತ ನ್ಯಾಯಮೂರ್ತಿ ಎಸ್.ಕೆ.ಮಿಶ್ರ ಇದ್ದರು. ಇಂತಹ ಘಟನೆಗಳಲ್ಲಿ ಗೊತ್ತಿದ್ದೋ, ಗೊತ್ತಿಲ್ಲದೆಯೋ ಭ್ರಷ್ಟಾಚಾರ ಅಥವಾ ಸೇಡಿನ ಮನೋಭಾವದಿಂದ ಕರ್ತವ್ಯ ಲೋಪವೆಸಗಿದರೂ ಅಧಿಕಾರಿ ವರ್ಗದವರಿಗೆ ನ್ಯಾಯಾಂಗದ ರಕ್ಷಣೆ ಪಡೆಯಲು ಅವಕಾಶ ಇರುವುದು ನಮ್ಮಲ್ಲಿ ಅತ್ಯಂತ ಗಂಭೀರವಾದ ಪ್ರಶ್ನೆ ಉದ್ಭವಿಸಲು ಕಾರಣವಾಗಿದೆ. ಇದು ಸರಿಯೇ?

ಯಾವುದೇ ಪ್ರಜೆ, ಸರ್ಕಾರದ ಅಧಿಕಾರಿ ತನ್ನ ಜೊತೆ ಅನುಚಿತವಾಗಿ ಅಥವಾ ಕಾನೂನಿಗೆ ವಿರುದ್ಧವಾಗಿ ವರ್ತಿಸಿದ್ದಾನೆ ಎಂದು ತಿಳಿದ ಮೇಲೆ, ಇದರಿಂದ ಕೆರಳಿ, ಅಪಶಬ್ದಗಳಿಂದ ಇಲ್ಲವೇ ಪ್ರತಿರೋಧದಿಂದ ಆತನೊಂದಿಗೆ ವರ್ತಿಸಿದಾಗ, ಅಂತಹ ಸಂದರ್ಭಗಳಲ್ಲಿ ಅಧಿಕಾರಿಗಳಿಗೆ ಕಾನೂನಿನ ಅಡಿಯಲ್ಲಿ ರಕ್ಷಣೆ ಸಿಗುತ್ತದೆ. ಅಧಿಕಾರಿಯು ಬಲಿಪಶು ಮಾಡಿದ ನಾಗರಿಕನ ವಿರುದ್ಧ 'ತನ್ನ ಕರ್ತವ್ಯ ನಿರ್ವಹಿಸಲು ಅಡ್ಡಿ ಉಂಟು ಮಾಡಿದ್ದಾನೆ' ಎಂಬ ಕಾರಣ ನೀಡಿ ಪೊಲೀಸರಿಗೆ ದೂರು ನೀಡಬಹುದು.

ಕುತೂಹಲಕಾರಿ ಸಂಗತಿಯೆಂದರೆ ಡೆಕ್ಕನ್ ಹೆರಾಲ್ಡ್ ದಿನಪತ್ರಿಕೆಯ 21.4.2022ರ ಸಂಚಿಕೆಯಲ್ಲಿ, ಒಂದು ವರದಿ ಪ್ರಕಟವಾಗಿದೆ. ಅದೇನೆಂದರೆ ಮಂಗಳೂರಿನ ಸ್ಥಳೀಯ ನ್ಯಾಯಾಲಯವೊಂದು ಸುಳ್ಯ ತಾಲೂಕಿನ ಸಾಯಿ ಗಿರಿಧರ್ ರೈ ಎಂಬ ರೈತನಿಗೆ, ಸರ್ಕಾರಿ ಅಧಿಕಾರಿಗೆ ಬೆದರಿಕೆ ಹಾಕುವ ಮೂಲಕ ಅವನ ಕರ್ತವ್ಯ ನಿರ್ವಹಣೆಗೆ ಅಡ್ಡಿಪಡಿಸಿದರು ಎಂಬ ಆರೋಪಕ್ಕಾಗಿ ಎರಡು ವರ್ಷಗಳ ಸಾಮಾನ್ಯ ಶಿಕ್ಷೆಯನ್ನು ವಿಧಿಸಿರುವ ಬಗ್ಗೆ (ಭಾರತೀಯ ದಂಡ ಸಂಹಿತೆಯ ಕಲಮು 353ರ ಅಡಿಯಲ್ಲಿ).

ಸದರಿ ಆರೋಪಿ ರೈತನಿಗೆ ಶಿಕ್ಷೆ ನೀಡಿರುವ ಕಾರಣ; ಅವರು ಅಗಾಗ ಉಂಟಾಗುತ್ತಿದ್ದ ವಿದ್ಯುತ್ ವ್ಯತ್ಯಯ ಹಾಗೂ ಲೋ ವೋಲ್ಟೇಜ್ ವಿರುದ್ಧ ಅಂದಿನ ಇಂಧನ ಸಚಿವ ಡಿ.ಕೆ.ಶಿವಕುಮಾರ್ ಅವರಲ್ಲಿ ತಮ್ಮ ಅಸಮಾಧಾನವನ್ನು ದೂರವಾಣಿ ಮೂಲಕ ವ್ಯಕ್ತಪಡಿಸಿದ್ದರು. ಸರ್ಕಾರಿ ನೌಕರರು ಹಾಗೂ ಮಂತ್ರಿಗಳ ವಿಚಾರದಲ್ಲಿ ಎಚ್ಚರದಿಂದಿರಿ.

ಸರ್ಕಾರಿ ಅಧಿಕಾರಿ, ತನ್ನ ನಿರ್ಧಾರ ಅಥವಾ ಕ್ರಿಯೆಯಲ್ಲಿ ತಪ್ಪು ಮಾಡಿದರೆ, ಅದನ್ನು ಅವರು ಸದುದ್ದೇಶದಿಂದ ಕೂಡಿದ ತಪ್ಪು ಎಂಬ ವಾದ ಮುಂದಿಟ್ಟು ಕಾನೂನಿನ ಅಡಿಯಲ್ಲಿ ರಕ್ಷಣೆ ಪಡೆಯುತ್ತಾರೆ.

ಇದು ನನಗೆ ವಿಧಾನಸೌಧದ ಮುಖ್ಯ ದ್ವಾರದಲ್ಲಿ ಶಿಲೆಯಲ್ಲಿ ಕೆತ್ತಿರುವ **"ಸರ್ಕಾರದ ಕೆಲಸ ದೇವರ ಕೆಲಸ"** (Government's Work is God's Work) ಉನ್ನತವಾದ ಘೋಷವಾಕ್ಯವನ್ನು ನೆನಪಿಗೆ ತರುತ್ತದೆ. ನಿಜವಾಗಲು?

ಬಾಲಂಗೋಚಿ : ಡೆಕ್ಕನ್ ಹೆರಾಲ್ಡ್ ದಿನಪತ್ರಿಕೆಯಲ್ಲಿ ಪ್ರಕಟವಾದ ಇನ್ನೊಂದು ಸುದ್ದಿಯ ತಲೆಬರಹ "ಉನ್ನತ ನ್ಯಾಯಾಲಯವು ತಪ್ಪಿತಸ್ಥ ಅಧಿಕಾರಿಗೆ ಅನಗತ್ಯವಾಗಿ ಅನುಕಂಪ ತೋರುವುದನ್ನು ಪ್ರಶ್ನಿಸುತ್ತದೆ". ಇದು ಸಹ, ಸರ್ಕಾರಿ ನೌಕರರು, ವಿವಿಧ ಸಾಂವಿಧಾನಿಕ ಮತ್ತು ಸರ್ಕಾರಿ ಸಂಸ್ಥೆಗಳಿಂದ ಪಡೆಯುವ ಅನುಕಂಪದ ಬಗ್ಗೆಯೇ ಆಗಿದೆ. ಆದರೆ ನಾವು ಬುದ್ಧಿವಂತ ಹಾಗೂ ಮಾನವೀಯ ಮುಖ, ಮನಸ್ಸು ಇರುವ ನ್ಯಾಯಮೂರ್ತಿ ಹಾಗೂ ಅಧಿಕಾರಿಗಳನ್ನು ಹೊಂದಿದ್ದೇವೆ. ದುರದೃಷ್ಟಕರವೆಂದರೆ ಅವರ ಸಂಖ್ಯೆ ಮಾತ್ರ ಅತೀ ವಿರಳ.

email: voice @ starofmysore.com

ಮಾವಿನ ಮಾತು



ವೈಜ್ಞಾನಿಕ ಹೆಸರು ಮ್ಯಾಂಗಿಫೆರಾ ಇಂಡಿಕಾ (Mangifera indica). 1948ರಲ್ಲಿ ಭಾರತದಲ್ಲಿ ವ್ಯಾಪಾರಕ್ಕಾಗಿ ಬಂದಿದ್ದ ಪೋರ್ಚುಗೀಸರು ಮಲಯಾಳಂನ 'ಮನ್ನಾ' ಪದದಿಂದ 'Mango' ಎಂಬ ಪದವನ್ನು ಪ್ರಚುರಪಡಿಸಿದರು. ಭಾರತೀಯ ವೇದಗಳು, ಆಯುರ್ವೇದ ಗ್ರಂಥಗಳು, ಅಗಸ್ತ್ಯರ ಸಿದ್ಧೌಷಧಿ, ಜ್ಯೋತಿಷ್ಯಶಾಸ್ತ್ರ ಜೈನಗ್ರಂಥಗಳಲ್ಲಿಯೂ 'ಆಮ್ರ' ಅಂದರೆ ಮಾವಿನ ಉಲ್ಲೇಖವಿದೆ. ವಿಶ್ವದಲ್ಲೇ ಭಾರತ ಅತೀ ಹೆಚ್ಚು ಮಾವು ಬೆಳೆಯುವ ದೇಶ. ಮಾವಿನ ಮರ ಬಾಂಗ್ಲಾದೇಶದ 'ರಾಷ್ಟ್ರೀಯ ಮರ'. ಮಾವಿನ ಹಣ್ಣು – ಭಾರತ, ಪಾಕಿಸ್ತಾನ ಮತ್ತು ಫಿಲಿಫೈನ್ಸ್ ದೇಶಗಳ 'ರಾಷ್ಟ್ರೀಯ ಹಣ್ಣು'. ಮಾವಿನ ಹಣ್ಣಿನಲ್ಲಿರುವ ಉತ್ಕೃಷ್ಟ ಔಷಧೀಯ ಗುಣಗಳಿಂದ ರಾಜನ ಪಟ್ಟ ಪಡೆದಿದೆ.

ಆಯುರ್ವೇದದ ಪ್ರಕಾರ ಚೆನ್ನಾಗಿ ಹಣ್ಣಾಗಿರುವ ಸಿಹಿ ಮಾವು ವಾತ ದೋಷ ನಿವಾರಕವಾದ್ದರಿಂದ ನರರೋಗಗಳಾದ ಅರ್ಧಾಂಗವಾಯು, ಪಾದಗಳಲ್ಲಿ ಉರಿ, ಪಾರ್ಕಿನ್‌ಸನ್ ಮುಂತಾದ ನರಸಂಬಂಧಿ ರೋಗಗಳು, ಮಲಬದ್ಧತೆಗೂ ಸಹಕಾರಿ. ಧಾತು ಪುಷ್ಟಿಕಾರ, ಬಲ, ತಸಗಣ ಮತ್ತು ಶುಕ್ರ ವಿವರ್ಧನ ವೀರ್ಯ ವರ್ಧಕ ಎಂದು ಆಯುರ್ವೇದ ಧನ್ವಂತರಿ ನಿಘಂಟು, ಚರಕ ಸಂಹಿತೆಯಲ್ಲಿ ಹೇಳಿದೆ. ಬೇಸಿಗೆಯಲ್ಲಿ ಕಾಡುವ ಸುಸ್ತು ಬಾಯಾರಿಕೆಗೆ ಪ್ರಕೃತಿಯೇ ನೀಡಿದ ಹಣ್ಣು ಈ ಮಾವು.

ಮಾವಿನ ಕಾಯಿಯನ್ನು ಅತಿಯಾಗಿ ಸೇವಿಸುವಾಗ ಎಚ್ಚರಿಕೆಯಿಂದಿರುವುದು ಒಳಿತು, ಹೆಚ್ಚಾದಲ್ಲಿ ವಾತ, ಪಿತ್ತ, ರಕ್ತ ದುಷ್ಟಿಯಾಗುತ್ತದೆ. ಆದರೆ ತುಸು ಹುಳಿಯಾದ ಹಣ್ಣು ಕೂಡಾ ಆರೋಗ್ಯಕ್ಕೆ ಒಳ್ಳೆಯದೆ.

ಮಾವಿನ ಮರದ ತೊಗಟೆ ಮತ್ತು ಚಿಗುರೆಲೆ: ಕಷಾಯರಸ (ಒಗರು) ಹೊಂದಿದ್ದು, ಬೇಧಿ (ಅತಿಸಾರ), ಐ.ಬಿ.ಎಸ್.ನಲ್ಲಿ ಉತ್ತಮ.

ಮಾವಿನ ಬೀಜ: ಕಷಾಯ ರಸಯುಕ್ತವಾಗಿದ್ದು, ಆಮಶಂಕೆ, ಅತಿಸಾರ, ಅತಿರಕ್ತಸ್ರಾವ, ಮಹಿಳೆಯರಲ್ಲಿ ಬಿಳಿಮುಟ್ಟಿನ ತೊಂದರೆಯಲ್ಲಿ ಉಪಯುಕ್ತ ಈ ಬೀಜಗಳನ್ನು ನೈಸರ್ಗಿಕ ಕೂದಲಿನ ಬಣ್ಣವಾಗಿಯೂ ಉಪಯೋಗಿಸುತ್ತಾರೆ.

ಹೀಗೆ ವಿಟಮಿನ್ ಎ, ಸಿ, ಡಿ ಗಳ ಆಗರವಾಗಿರುವ ಮಾವಿನ ಹಣ್ಣು ನಮ್ಮ ವೇದ, ಪುರಾಣ ಕಾಳಿದಾಸನ ಕಾವ್ಯಗಳಲ್ಲಿ, ಜೈನ ಗ್ರಂಥಗಳಲ್ಲಿ ಮಾವಿನ ಬಗ್ಗೆ ಕಥೆಗಳು, ಗಾದೆಗಳು ಅನೇಕ. ಶುಭ ಸಮಾರಂಭಗಳಲ್ಲಿ ತಳಿರು ತೋರಣವಾಗಿ, ಮಂಗಳ ಕಾರ್ಯಗಳಲ್ಲಿ ಕಲಶಕ್ಕೆ ಸೇರಿ, ಮರದ ತೊಗಟೆ, ಹೂ, ಎಲೆ, ಹಣ್ಣು, ಬೀಜ ಎಲ್ಲದರಲ್ಲಿಯೂ ಔಷಧೀಯ ಗುಣಗಳಿದ್ದು, 13ನೇ ಶತಮಾನದ ರಜ ನಿಘಂಟಿನಲ್ಲಿ ಪೂರ್ವಾಭಾದ್ರ ನಕ್ಷತ್ರಕ್ಕೆ ಕುಂಭರಾಶಿಗೆ ಅನುಗುಣವಾಗಿ ದೇವವೃಕ್ಷ ಅಥವಾ ನಕ್ಷತ್ರ ವೃಕ್ಷವೆಂದು ವಿಶಿಷ್ಟ ಸ್ಥಾನ ಪಡೆದಿರುವ ನೈಸರ್ಗಿಕವಾದ ಹಣ್ಣಾಗಿರುವ ಮಾವಿನ ಋತು ಬಂದಿದೆ. ಫಲಗಳ ರಾಜನ ಸವಿಯೋಣ.



– ಡಾ. ಸುಧಾ. ಎಂ.ಎನ್.
ಮೊಬೈಲ್: 9448071933
e-mail: drsudhamn@yahoo.com

ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ

ಮೈಸೂರು, ಏ. 28 – ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಕೃಷಿಕ್ ಸರ್ವೋದಯ ಫೌಂಡೇಷನ್‌ನಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳಿಗೆ ತರಬೇತಿ ಆರಂಭಿಸಿದೆ. ಆಸಕ್ತ ಅಭ್ಯರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821–2301564, 9945752592 ಸಂಪರ್ಕಿಸಬಹುದು.

ಪಿಎಚ್.ಡಿ ಪದವಿ



ಮೈಸೂರು: ಡಾ.ಎಂ. ಪೂರ್ವಾಚಾರ್ ಅವರ ಮಾರ್ಗದರ್ಶನದಲ್ಲಿ ಎಂ.ಎಸ್. ದೇವರಾಜು ಅವರು ಸಮಾಜಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಶಿವಮೊಗ್ಗ ಕುವೆಂಪು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ
ಶುಕ್ರವಾರ
29-4-2022

ಬೆಳ್ಳಿ ಬೆಳಕು


ಸತ್ಯಮೂರ್ತಿ ತೋಳಹುಣಸೆ



ಹಾಟ್‌ಲುಕ್‌ನಲ್ಲಿ ರಾಗಿಣಿ ದ್ವಿವೇದಿ

ಕಚಗುಳಿ ಇಡುವ ತೋತಾಪುರಿ

VIJAYAPRASAD'S



ಕನ್ನಡ ಚಿತ್ರರಂಗಕ್ಕೆ ಸಿದ್ಲಿಂಗು, ನೀರ್‌ದೋಸೆಯಂಥ ವಿಭಿನ್ನ ಜ್ಯಾನರ್ ಚಿತ್ರಗಳನ್ನು ಮಾಡುವ ಮೂಲಕ ನಿರ್ದೇಶಕ ವಿಜಯ್‌ಪ್ರಸಾದ್, ಚಿತ್ರರಂಗದಲ್ಲಿ ತಮ್ಮದೇ ಆದ ಚಾಪು ಮೂಡಿಸಿದ್ದಾರೆ. ವಿಜಯಪ್ರಸಾದ್, ಜಗ್ಗೇಶ್ ಜೋಡಿಯ 'ತೋತಾಪುರಿ' ಚಿತ್ರವೀಗ ಬಿಡುಗಡೆಗೆ ಸಿದ್ಧವಾಗಿದೆ. ಈ ಚಿತ್ರದ ಮೂಲಕ ಕನ್ನಡಿಗರಿಗೆ ಮತ್ತೊಮ್ಮೆ ಕಚಗುಳಿ ಇಡಲು ಸಜ್ಜಾಗಿದ್ದಾರೆ. ಸಿನಿಮಾದ ಟ್ರೇಲರನ್ನು ನಟ ಕಿಚ್ಚ ಸುದೀಪ್ ಬಿಡುಗಡೆ ಮಾಡಿದರು.

ಅಶೋಕ ಹೋಟೆಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಸುದೀಪ್, ಈ ಸಿನಿಮಾದ ಡೈಲಾಗ್‌ಗಳನ್ನು ಕಲಾವಿದರು ಹೇಳಿರುವ ರೀತಿಯಿಂದಾಗಿಯೇ ಅವು ಕಚಗುಳಿ ಇಡುತ್ತಿವೆ, ಎಲ್ಲೂ ಅಸಭ್ಯ ಎನಿಸುವುದಿಲ್ಲ. ಸಿನಿಮಾದಲ್ಲಿ ಜಗ್ಗೇಶ್ ಅವರು ಹೇಳಿರುವ ಡೈಲಾಗುಗಳನ್ನು ನಾವೇನಾದರೂ ಹೇಳಿದರೆ ಸರಿಯಾಗಿ ಟ್ರೋಲ್ ಆಗುತ್ತೇವೆ. ಅಲ್ಲದೆ ನಾವೆಲ್ಲ ಉದ್ದ ಇದ್ದೇವೆ ಅಷ್ಟೆ, ಆದರೆ ಜಗ್ಗೇಶ್ ಅವರು ಸಾಧಕರು ಎಂದು ಹೊಗಳಿದರು.

ನಂತರ ಜಗ್ಗೇಶ್ ಮಾತನಾಡುತ್ತ ಈ ಚಿತ್ರದ ಕಥೆಯೇ ಬಹಳ ವಿಶೇಷವಾಗಿದೆ. ಬರುವ ಈ ಸಿನಿಮಾ ಇನ್ನೂ ಹತ್ತುವರ್ಷ ನೆನಪಲ್ಲುಳಿಯುತ್ತದೆ. ಕಥೆ ಅಷ್ಟೊಂದು ವಿಶೇಷವಾಗಿದೆ ಎಂದು ಹೇಳಿದರು. ಇದೀಗ ಬಿಡುಗಡೆಯಾಗಿರುವ ತೋತಾಪುರಿ ಸಿನಿಮಾದ ಟ್ರೇಲರ್, ದ್ವಂದ್ವಾರ್ಥ, ಹಾಸ್ಯ, ಮನುಷ್ಯ ಸಂಬಂಧದ ಜೊತೆಗೆ ದೇವರು ಧರ್ಮದ ವಿಚಾರ ಗಳನ್ನೂ ಸಹ ಒಳಗೊಂಡಿದೆ ಎಂದರು.

ಪರೀಕ್ಷೆ ಹಾಡಿನಲ್ಲಿ ಹಾರುತಿದೆ ಗಾಳಿಪಟ 2

GOLDEN STAR GANESH ಯೋಗರಾಜ್ ಭಟ್

ರಮೇಶ್ ರೆಡ್ಡಿ ನಿರ್ಮಾಣ ಹಾಗೂ ಯೋಗರಾಜ್ ಭಟ್ ನಿರ್ದೇಶನದ "ಗಾಳಿಪಟ 2 ತೆರೆಗೆ ಬರಲು ಸಿದ್ಧವಾಗಿದೆ. ಈ ಚಿತ್ರಕ್ಕಾಗಿ ಯೋಗರಾಜ್ ಭಟ್ ಬರೆದಿರುವ ಪರೀಕ್ಷೆ ಕುರಿತಾದ ಗೀತೆಯೊಂದರ ಬಿಡುಗಡೆ ಕಾರ್ಯಕ್ರಮ ನಡೆಯಿತು. ಗಾಳಿಪಟ 2" ಆರಂಭವಾಗಿದ್ದೆ ಒಂದು ಸೋಜಿಗ. ನನಗೆ ಯೋಗರಾಜ್ ಭಟ್ಟರ ಪರಿಚಯವಿರಲಿಲ್ಲ. ಇನ್ಫೋಸಿಸ್ ಮುಖ್ಯಸ್ಥೆ ಸುಧಾಮೂರ್ತಿ ಅವರೊಂದಿಗೆ ತಿರುಪತಿಯಿಂದ ದರ್ಶನ ಮುಗಿಸಿ ಬರಬೇಕಾದರೆ ಸುಧಾ ಮೂರ್ತಿ ಅವರಿಗೆ ಭಟ್ಟರು ಫೋನ್ ಮಾಡಿದ್ದರು. ನಂತರ ಸುಧಾಮೂರ್ತಿ ಅವರು ನನಗೆ ಂಯೋಗರಾಜ್ ಭಟ್ "ಗಾಳಿಪಟ 2" ಚಿತ್ರದ ಕಥೆ ಸಿದ್ಧಮಾಡಿ ಕೊಂಡಿದ್ದಾರೆ. ನೀವು ಸಾಧ್ಯವಾದರೆ ನಿರ್ಮಾಣ ಮಾಡಿ ಎಂದರು. ಅವರ ಮಾತಿಗೆ ಸರಿ ಅಂದೆ ನಂತರ "ಗಾಳಿಪಟ 2" ಆರಂಭವಾಯಿತು. ಇನ್ನೂ ಪರೀಕ್ಷೆ ಬಗ್ಗೆ ಹೇಳಬೇಕೆಂದರೆ ನಾನು ಈಗಾಗಲೇ ನಾಲ್ಕು ಪರೀಕ್ಷೆಯಲ್ಲಿ ಫೇಲ್ ಆಗಿದ್ದೀನಿ. ಐದನೇ ಪರೀಕ್ಷೆ ಬರೆದಿದ್ದೇನೆ ಎಂದು ನಿರ್ಮಾಪಕ ರಮೇಶ್ ರೆಡ್ಡಿ ಹೇಳಿದರು.

ನಂತರ ಹಿರಿಯನಟ ಅನಂತನಾಗ್ ಮಾತನಾಡಿ, ಯೋಗರಾಜ್ ಭಟ್ ಅವರ ಕನಸು ನನಸಾಗಲು ಸುಧಾಮೂರ್ತಿ ಅವರೇ ಕಾರಣ. ಭಟ್ ಅವರಿಗೆ ಸುಧಾಮೂರ್ತಿ ಗಾಡ್ ಮದರ್ ಅಂದರೆ ತಪ್ಪಾಗಲಾರದು. ಗಾಳಿಪಟದಲ್ಲೂ ನಟಿಸಿದ್ದೆ. ಈಗ ಇದರಲ್ಲೂ ನಟಿಸಿದ್ದೇನೆ. ಉತ್ತಮ ಚಿತ್ರ ಎಂದು ಹೇಳಿದರು.

"ಗಾಳಿಪಟ 2" ಚಿತ್ರ ಬಿಡುಗಡೆಗೆ ಸಿದ್ಧವಾಗಿದೆ. ಈಗ ಪರೀಕ್ಷೆ ಹಾಡನ್ನು ಬಿಡುಗಡೆ ಮಾಡಿದ್ದು, ಸದ್ಯದಲ್ಲೇ ಟ್ರೈಲರ್ ಕೂಡ ಹೊರಬರುತ್ತಿದೆ. "ಗಾಳಿಪಟ" ದಲ್ಲಿದ್ದ ಗಣೇಶ್, ದಿಗಂತ್, ಅನಂತ್‌ನಾಗ್, ಸುಧಾ ಬೆಳವಾಡಿ, ರಂಗಾಯಣ ರಘು, ಪದ್ಮಜಾರಾವ್ ಭಾಗ 2 ರಲ್ಲೂ ಇದ್ದಾರೆ. ಮಿತ್ರ ಪವನ್‌ಕುಮಾರ್ ಹೊಸ ಸೇರ್ಪಡೆ. ಶರ್ಮಿಳಾ ಮಾಂಡ್ರೆ ವೈಭವಿ ಶಾಂಡಿಲ್ಯ ನಿಶ್ವಿಕಾ ನಾಯ್ಡು ಕೇರಳ ಮೂಲದ ಸಂಯುಕ್ತ, ತಾರಾಬಳಗದಲ್ಲಿದ್ದಾರೆ. ಅರ್ಜುನ್ ಜನ್ಯಾ ಅವರ ಸಂಗೀತ, ಸಂತೋಷ್ ರೈ ಪಾತಾಜೆ ಅವರ ಛಾಯಾಗ್ರಹಣವಿದೆ ಎಂದರು ಯೋಗರಾಜ್ ಭಟ್.





ಸೈಬರ್ ಕ್ರೈಮ್ ಸುತ್ತ ಟಕ್ಕರ್ ಚಿತ್ತ


ಮನೋಜ್ ಕುಮಾರ್, ರಂಜನಿ ರಾಘವನ್ ಅಭಿನಯದ, ಸೈಬರ್ ಕ್ರೈಮ್ ಹಿನ್ನೆಲೆಯಲ್ಲಿ ನಡೆಯುವ ಘಟನೆಗಳನ್ನಾಧರಿಸಿ ನಿರ್ಮಾಣವಾದ ಚಿತ್ರ ಟಕ್ಕರ್ ಮೇ ಮೊದಲ ವಾರ ತೆರೆಕಾಣಲಿದೆ. ಈ ಚಿತ್ರದ ಟ್ರೈಲರ್ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ಮೊಬೈಲ್ ಮತ್ತು ಇಂಟರ್ ನೆಟ್‌ನಿಂದ ಏನೆಲ್ಲ ಅನಾಹುತಗಳು ಸಂಭವಿಸುತ್ತದೆ, ಅದರಲ್ಲೂ ಮಹಿಳೆಯರಿಗೆ ಅದು ಹೇಗೆ ಮಾರಕವಾಗಿ ಪರಿಣಮಿಸುತ್ತದೆ ಎಂಬುದನ್ನು ಪ್ರೇಮಕಥೆಯೊಂದಿಗೆ ಹೇಳುವ ಪ್ರಯತ್ನ ಮಾಡಿದ್ದಾರೆ ನಿರ್ದೇಶಕ ರಘು ಶಾಸ್ತ್ರಿ. ಚಿತ್ರದ ಕುರಿತಂತೆ ಮಾತನಾಡಿದ ನಿರ್ಮಾಪಕ ಕೆ.ಎನ್.ನಾಗೇಶ್ ಕುಮಾರ್ ಕೋಗಿಲು, 2 ವರ್ಷಗಳ ಹಿಂದೆಯೇ ನಮ್ಮ ಚಿತ್ರ ರಿಲೀಸಾಗಬೇಕಿತ್ತು. ಸೈಬರ್ ಕ್ರೈಮ್‌ಗೆ ಸಂಬಂಧಿಸಿದ ಕಥೆಯಿದು. ಹೆಣ್ಣುಮಕ್ಕಳಿಗೆ ಒಳ್ಳೇ ಮೆಸೇಜ್ ಈ ಚಿತ್ರದಲ್ಲಿದೆ. ಪ್ರತಿಯೊಬ್ಬರಿಗೂ ನಮ್ಮ ಚಿತ್ರ ತಲುಪಬೇಕೆಂದೇ ಕಾದಿದ್ದು, ಚಿತ್ರಮಂದಿರಗಳಲ್ಲಿ ಬಿಡುಗಡೆ ಮಾಡುತ್ತಿದ್ದೇವೆ ಎಂದು ಹೇಳಿದರು. ನಾಯಕ ಮನೋಜ್ ಮಾತನಾಡಿ ಈ ಸಿನಿಮಾದ ನಿಜವಾದ ಹೀರೋ ನಿರ್ಮಾಪಕರು, ಸಿನಿಮಾ ನಿರ್ಮಿಸಬೇಕೆಂದು 2 ವರ್ಷ ಕಾದಿದ್ದಾರೆ. ಕಾಲೇಜ್ ಹುಡುಗನಾಗಿ ಕಾಣಿಸಿಕೊಂಡಿದ್ದು, ಒಂದು ಹಂತದಲ್ಲಿ ನಾನೇ ಸೈಬರ್ ವಂಚಕರ ಜಾಲದಲ್ಲಿ ಸಿಕ್ಕಿಹಾಕಿಕೊಂಡು ಹೇಗೆ ಹೊರಬರುತ್ತೇನೆ ಎನ್ನುವುದೇ ಚಿತ್ರದ ಕಥೆ ಎಂದು ಹೇಳಿದರು.

ಈ ಚಿತ್ರದ ಹಾಡುಗಳಿಗೆ ಮಣಿಕಾಂತ್ ಕದ್ರಿ ಅವರ ಸಂಗೀತ ನಿರ್ದೇಶನವಿದೆ. ವೈದ್ಯಕೀಯ ವಿದ್ಯಾರ್ಥಿಯಾಗಿ ರಂಜನಿ ರಾಘವನ್, ಖಳ ನಾಯಕನಾಗಿ ಭಜರಂಗಿ ಲೋಕಿ ನಟಿಸಿದ್ದಾರೆ. ಶಂಕರ್ ಅಶ್ವಥ್, ಸುಮಿತ್ರಾ, ಸಾಧು ಕೋಕಿಲಾ, ಜೈಜಗದೀಶ್, ಇಮ್ರಾನ್ ಪಾಶಾ ಮುಂತಾದರು ನಟಿಸಿದ್ದಾರೆ. ಬೆಂಗಳೂರು, ಮೈಸೂರು ಹಾಗೂ ಮಲೇಶಿಯಾದಲ್ಲಿ ಈ ಚಿತ್ರದ ಚಿತ್ರೀಕರಣ ನಡೆಸಲಾಗಿದೆ. ಡಿಫರೆಂಟ್ ಡ್ಯಾನಿ ಅವರ ಸಾಹಸ, ವಿಲಿಯಮ್ ಡೇವಿಡ್ ಅವರ ಛಾಯಾಗ್ರಹಣವಿದೆ.



ಸಿನಿಪದಬಂಧ-005

ಆಜ್ಞಾದ್ ಜಿ. ಆಚಾರ್ಯ 6361429085



ಹೆಸರು ____________

ವಿಳಾಸ ____________

ದೂರವಾಣಿ ಸಂಖ್ಯೆ ____________

ಎಡದಿಂದ ಬಲಕ್ಕೆ

1. ಜೇಮ್ಸ್ ಬಾಂಡ್ ಪಾತ್ರದಲ್ಲಿ ಡಾ. ರಾಜ್ ನಟಿಸಿದ ಚಿತ್ರ 11
6. ಶರಣ್ ಅಭಿನಯದ ಗೆಲುವು 3
8. ಮಂತ್ರಿಯೂ ಆಗಿದ್ದ ಡಾ. ರಾಜ್‌ರ ಗಿರಿಕನ್ಯೆ 4
9. ರವಿಚಂದ್ರನ್ ಮತ್ತು ಯಶ್ ಇಬ್ಬರ ಚಿತ್ರವೂ ಈ ಹೆಸರಿನಲ್ಲಿದೆ 4
10. ಲೂಸ್ ಮಾದ ಮತ್ತು ಭಾಮ ಬರಗಾಲದಲ್ಲಿ ಏರಿದ ಆಕಾಶ 3
11. ಉಪೇಂದ್ರ ಚಿತ್ರದ ನಾಯಕನ ಹೆಸರು 2
13. ಸಾಧುವಿನ ಜೊತೆ ಬಂದ ಶಿವಣ್ಣ 2
14. ಡಾ. ಯು.ಆರ್. ಅನಂತಮೂರ್ತಿ ಕಾದಂಬರಿ ಆಧಾರಿತ ಚಿತ್ರ 3
16. ಡಾ.ರಾಜ್ ಚಿತ್ರ, ತೆಲುಗು ಮಾಸ್ ನಾಯಕನ ಹೆಸರಿನಲ್ಲಿದೆ 4
18. ಅಂಬರೀಶ್ ಮತ್ತು ಪುನೀತ್ ಇಬ್ಬರ ಚಿತ್ರದ ಶೀರ್ಷಿಕೆಗಳೂ ಒಂದೇ 4
20. ದೇವರಾಜ್-ಅರ್ಚನಾ ಅಭಿನಯದಲ್ಲಿ ಉಳ್ಳವರ ದಬ್ಬಾಳಿಕೆಯ ಸಿನಿಮಾ 3
22. ರಾಜಧಾನಿಗೆ ಬಂದ ಹಳ್ಳಿ ಹೈದನ ಕಥೆ 11

ಮೇಲಿನಿಂದ ಕೆಳಕ್ಕೆ

1. ರಾಜನಾದ ರಿಕ್ಷಾವಾಲಾ ಶಂಕರ್‌ನಾಗ್ 4
2. ಶಿವಣ್ಣನ ಚಿತ್ರ ಹಗಲು--- ತಿರುಗಿದೆ 2
3. ಸಿನಿಮಾದ ನಿರ್ದೇಶಕ 4
4. ತಂದೆಯ ಹೆಸರಿನ ಪುನೀತ್ ಚಿತ್ರ 5
5. ಜಾಕಿಶ್ರಾಫ್ ನಟಿಸಿದ ಕನ್ನಡ ಚಿತ್ರ 3
7. ಸಾಹುಕಾರ ವಿಷ್ಣುವರ್ಧನ್ 4
9. 2021ರ ದರ್ಶನ್ -ಆಶಾಭಟ್ ನಟಿಸಿದ ಚಿತ್ರ 4
11. ನೀನು ನೀನೇ ಇಲ್ಲಿ---. ಎಂದು ರವಿಚಂದ್ರನ್ ಹಾಡಿದ ಹಾಡು 4
12. ರಾಯರು ಬಂದರು--- ಮನೆಗೆ 3
14. ಪ್ರಜ್ವಲ್ ದೇವರಾಜ್ ಸಿನಿಮಾ ಕೊನೆಯಲ್ಲಿ ಗಲಿಬಿಲಿಗೊಂಡಿದೆ 5
15. ಪ್ರಜ್ವಲ್ ದೇವರಾಜ್ ಇನ್ಸ್‌ಪೆಕ್ಟರ್--- 3
17. ಟೈಗರ್ ಪ್ರಭಾಕರ್ ಭೀಮನಾಗಿದ್ದು ಈ ಕಾಲದಲ್ಲಿ 4
19. ಈತ ಗ್ರಾಮ ನಿವಾಸಿ 4
21. ದುನಿಯಾ ಚಿತ್ರದ ನಿರ್ದೇಶಕ 2

ಸಿನಿ ಪದಬಂಧ 004ರ ಸರಿ ಉತ್ತರ

ಅ	ಬ	ಚೊ	ರಿ	ನ	ಪೋ	ಸ್ಟಾ	ಫೀ	ಸು		ಬ
ಪ					ಲೀ					ಣ್ಣ
ರಿ				ಬಾ	ಸ್		ಕ	ಲಾ	ವಿ	ದ
ಚಿ	ರಂ	ಜೀ	ವಿ				ರಾ			ಗೆ
ತ		ತ				ಅ	ವ	ಳ	ಹೆ	ಜ್ಜೆ
			ದಾ				ಳಿ			
ಬ	ಯ	ಲು	ದಾ	ರಿ				ದೇ		ಛಾ
ಭ್ರು			ಗಿ				ನು	ವ	ರಿ	ಯಾ
ವಾ	ಮಾ	ಚಾ	ರಿ		ಮ	ನೆ				ಗ್ರ
ಹ					ರ					ಹ
ನ		ಹೊ	ರಾಂ	ಗ	ಣ	ಚಿ	ತ್ರೀ	ಕ	ರ	ಣ

ವಿಜೇತರು: ನಾಗಶ್ರೀ
#1104, 1ನೇ ಮುಖ್ಯ ರಸ್ತೆ, 1ನೇ ಅಡ್ಡರಸ್ತೆ
ವಿದ್ಯಾರಣ್ಯಪುರಂ, ಮೈಸೂರು.



ಬಾಲಿವುಡ್‌ಗೆ ಸ್ಯಾಂಡಲ್‌ವುಡ್ ಸೆಡ್ಡು...

ಬಾಲಿವುಡ್ ನಟ ಅಜಯ್ ದೇವಗನ್ ಅವರ ಹಿಂದಿ ಟ್ವೀಟ್‌ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿಪಕ್ಷ ನಾಯಕ ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಸಂಸದೆ ಸುಮಲತಾ ಅಂಬರೀಶ್, ನಿರ್ದೇಶಕ ರಾಂಗೋಪಾಲ್ ವರ್ಮಾ ಸೇರಿದಂತೆ ಕನ್ನಡ ಚಿತ್ರರಂಗ ಮತ್ತು ಕನ್ನಡಿಗರು ತಿರುಗೇಟು ನೀಡಿದ್ದಾರೆ.

ಇತ್ತೀಚೆಗೆ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದ ಸುದೀಪ್, 'ಹಿಂದಿ ಭಾಷೆ ರಾಷ್ಟ್ರಭಾಷೆ ಅಲ್ಲ' ಎಂದು ಹೇಳಿದ್ದರು. ಈ ಹೇಳಿಕೆಯಿಂದ ಅಸಮಾಧಾನಗೊಂಡ ಬಾಲಿವುಡ್ ನಟ ಅಜಯ್ ದೇವಗನ್ ಬುಧವಾರ ಸುದೀಪ್‌ಗೆ ಟ್ವೀಟ್ ಮಾಡಿ, 'ಸಹೋದರ ನಿಮ್ಮ ಹೇಳಿಕೆ ಪ್ರಕಾರ ಹಿಂದಿ ನಮ್ಮ ರಾಷ್ಟ್ರ ಭಾಷೆ ಅಲ್ಲ ಹಾಗಿದ್ದರೆ ನಿಮ್ಮ ಮಾತೃಭಾಷೆಯ ಸಿನಿಮಾಗಳನ್ನೇಕೆ ಹಿಂದಿಗೆ ಡಬ್ ಮಾಡುತ್ತೀರಿ? ಹಿಂದಿ ನಮ್ಮ ಮಾತೃಭಾಷೆ. ಹಾಗೂ ರಾಷ್ಟ್ರೀಯ ಭಾಷೆ ಆಗಿದೆ. ಇಂದೂ ಮತ್ತು ಎಂದೆಂದಿಗೂ... ಜನಗಣಮನ..... ಎಂದು ಕಿಚಾಯಿಸಿದ್ದರು.

ಇದಕ್ಕೆ ಸಂಯಮ ಕಳೆದುಕೊಳ್ಳದ ಕಿಚ್ಚ ಸುದೀಪ್, ಅಜಯ್ ದೇವಗನ್‌ಗೆ ಟ್ವೀಟ್ ಮೂಲಕವೇ ಪ್ರತಿಕ್ರಿಯಿಸಿ 'ನಾನು ದೇಶದ ಪ್ರತಿಯೊಂದು ಭಾಷೆಯನ್ನು ಗೌರವಿಸುತ್ತೇವೆ. ಹಿಂದಿ ಭಾಷೆ ರಾಷ್ಟ್ರಭಾಷೆ ಅಲ್ಲ ಎಂದಿರುವ ನನ್ನ ಹೇಳಿಕೆಯಲ್ಲಿ ಯಾವ ತಪ್ಪು ಇಲ್ಲ. ಆದರೆ ಆ ಮಾತುಗಳನ್ನು ನಾನು ಯಾವ ಸನ್ನಿವೇಶದಲ್ಲಿ ಹೇಳಿದ್ದೇನೆ ಎನ್ನುವುದು ಮುಖ್ಯವಾಗುತ್ತದೆ. ನನ್ನ ಈ ಮಾತುಗಳನ್ನು ಯಾವ ಅರ್ಥದಲ್ಲಿ ಹೇಳಿದ್ದೇನೆ ಎಂಬುದನ್ನು ಖುದ್ದಾಗಿ ನಿಮ್ಮನ್ನು ಭೇಟಿ ಮಾಡಿದಾಗ ವಿವರಿಸುತ್ತೇನೆ'.

'ನಾನು ಯಾರನ್ನೂ ನೋಯಿಸಲು, ಪ್ರಚೋದಿಸಲು ಮತ್ತು ಚರ್ಚೆ ಮಾಡಲು ಹೇಳಿದ್ದಲ್ಲ. ನೀವು ಹಿಂದಿಯಲ್ಲಿ ಕಳುಹಿಸಿದ ಸಂದೇಶ ನನಗೆ ಅರ್ಥವಾಯಿತು. ನಾನು ಹಿಂದಿ ಕಲಿತಿದ್ದೇನೆ. ಗೌರವಿಸುತ್ತೇನೆ. ಅದು ತಪ್ಪಲ್ಲ. ನಿಮ್ಮಂತೆಯೇ ನಾನೂ ಕೂಡ ನನ್ನ ಉತ್ತರವನ್ನು ಕನ್ನಡದಲ್ಲೇ ಕಳುಹಿಸಿದ್ದರೆ ಪರಿಸ್ಥಿತಿ ಏನಾಗಬಹುದು ಎಂದು ಅಚ್ಚರಿಪಡುತ್ತಿದ್ದೇನೆ. ನಾವೆಲ್ಲರೂ ಭಾರತಕ್ಕೆ ಸೇರಿದವರಲ್ಲವೇ' ಎಂದು ಉತ್ತರ ನೀಡಿದ್ದರು.

ತಮ್ಮ ಟ್ವೀಟ್ ಸೋಷಿಯಲ್ ಮಿಡಿಯಾಗಳಲ್ಲಿ ವಾದ-ಪ್ರತಿವಾದಗಳು ನಡೆದು ಚರ್ಚೆಗೆ ಗ್ರಾಸವಾಗುತ್ತಿದ್ದಂತೆಯೇ ಎಚ್ಚೆತ್ತುಕೊಂಡ ಅಜಯ್ ದೇವಗನ್ 'ನೀವು ನನ್ನ ಸ್ನೇಹಿತ. ತಪ್ಪು ತಿಳುವಳಿಕೆಯನ್ನು ತೆರವುಗೊಳಿಸಿದ್ದಕ್ಕೆ ಧನ್ಯವಾದಗಳು. ನಾನು ಚಿತ್ರರಂಗ ಎಂದರೆ ಒಂದೇ ಎಂದು ಭಾವಿಸುತ್ತೇನೆ. ನಾನು ಎಲ್ಲಾ ಭಾಷೆಗಳನ್ನು ಗೌರವಿಸುತ್ತೇನೆ. ಪ್ರತಿಯೊಬ್ಬರೂ ನಮ್ಮ ಭಾಷೆಯನ್ನು ಗೌರವಿಸಬೇಕು ಎಂದು ನಿರೀಕ್ಷಿಸುತ್ತೇವೆ. ನಿಮ್ಮ ಹೇಳಿಕೆಯನ್ನು ಅನುವಾದ ಮಾಡಿಸಿ ಅರ್ಥ ಮಾಡಿಕೊಳ್ಳುವುದರಲ್ಲಿ ತಪ್ಪಾಗಿದೆ' ಎಂದು ತಮ್ಮ ತಪ್ಪನ್ನು ಒಪ್ಪಿಕೊಂಡರು.

ಅಜಯ್ ದೇವಗನ್ ಅವರ ಟ್ವೀಟ್‌ಗೆ ಪ್ರತಿಕ್ರಿಯಿಸಿದ ಸುದೀಪ್, 'ಅನುವಾದ, ಅಭಿಪ್ರಾಯಗಳು ಅವರವರ ದೃಷ್ಟಿಕೋನಕ್ಕೆ ಸಂಬಂಧಿಸಿದ್ದು, ಹೀಗಾಗಿಯೇ ನಾನು ಪೂರ್ತಿ ವಿಚಾರ ಗೊತ್ತಿಲ್ಲದೆ ಪ್ರತಿಕ್ರಿಯೆ ನೀಡುವುದಿಲ್ಲ. ಯಾವುದಾದರೂ ಸೃಜನಶೀಲ ಕಾರ್ಯ ಕುರಿತು ನೀವು ಟ್ವೀಟ್ ನೀಡಿದ್ದರೆ ಇದಕ್ಕಿಂತ ಹೆಚ್ಚು ಸಂತೋಷವಾಗುತ್ತಿತ್ತು.' ಎಂದು ಹೇಳುವ ಮೂಲಕ ವಿವಾದಕ್ಕೆ ತೆರೆ ಎಳೆದಿದ್ದಾರೆ.

ತ್ರಿಕೋನ ಪ್ರೇಮಕಥೆಯ ಸಿಂಧೂರ

ತ್ರಿಕೋನ ಪ್ರೇಮಕಥೆ ಹೊಂದಿರುವ ಸಿಂಧೂರ ಚಿತ್ರದ ಹಾಡುಗಳ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು. ಕಾಳಿಮಠದ ಋಷಿಕುಮಾರ ಸ್ವಾಮೀಜಿ, ಸ್ಟಿಕ್ ಶಂಕರ್, ಉಮೇಶ್ ಬಣಕಾರ್ ಮುಂತಾದವರು ಆಡಿಯೋ ರಿಲೀಸ್ ಮಾಡಿ ತಂಡಕ್ಕೆ ಶುಭ ಹಾರೈಸಿದರು. ತ್ರಿಕೋನ ಪ್ರೇಮಕಥೆ ಹೊಂದಿದ ಈ ಚಿತ್ರಕ್ಕೆ ನಾಯಕ, ನಿರ್ಮಾಪಕ ಮತ್ತು ನಿರ್ದೇಶಕ ಸಚಿನ್ ಪುರೋಹಿತ್ ಅವರ ತಂದೆ ಎಂಟು ವರ್ಷಗಳ ಹಿಂದೆ ಬರೆದ ಕಥೆಯೇ ಪ್ರೇರಣೆ.

ಶಾಸಕನ ಮಗಳು, ಮಧ್ಯಮ ವರ್ಗದ ಪ್ರಾಧ್ಯಾಪಕನ ಮಗನನ್ನು ಲವ್ ಮಾಡಿದಾಗ ಜಾತಿ, ಅಂತಸ್ತು ಅಡ್ಡ ಬರುತ್ತದೆ. ಎಲ್ಲಾ ಕಡೆಯಲ್ಲೂ ಸಮಾನತೆಯನ್ನು ಕಾಣುವ ಶಾಸಕ, ಮಗಳ ಪ್ರೀತಿಯ ವಿಷಯದಲ್ಲಿ ಸ್ವಾರ್ಥಿಯಾಗುತ್ತಾನೆ. ಜೀವನದಲ್ಲಿ ಮುಂದೆ ಬರುತ್ತೇನೆಂದು ಛಾಲೆಂಜ್ ಮಾಡಿ ಪಟ್ಟಣಕ್ಕೆ ಬರುವ ನಾಯಕನಿಗೆ



ಅಲ್ಲಿ ಮತ್ತೊಬ್ಬ ಹುಡುಗಿಯ ಪರಿಚಯವಾಗಿ ಪ್ರೇಮಕ್ಕೆ ತಿರುಗುತ್ತದೆ. ಅಂತಿಮವಾಗಿ ಆತ ಯಾರಿಗೆ ಒಲಿಯುತ್ತಾನೆ ಎನ್ನುವುದೇ ಕ್ಲೈಮ್ಯಾಕ್ಸ್.

ಶಾಸಕನ ಮಗಳಾಗಿ ನಿವೀಕ್ಷಾ ನಾಯ್ಡು, ಮತ್ತೊಬ್ಬ ನಾಯಕಿಯಾಗಿ ಸುರಕ್ಷಿತ ಶೆಟ್ಟಿ ನಟಿಸಿದ್ದಾರೆ.

2023ರ ಸಾರ್ವತ್ರಿಕ ಚುನಾವಣೆಗೆ ತಿಂಗಳುಗಳು ಬಾಕಿ ಹಿನ್ನೆಲೆ

ಮಂಡ್ಯ ಜಿಲ್ಲೆಯಲ್ಲಿ ಪಕ್ಷಾಂತರ ಪರ್ವಕ್ಕೆ ವೇದಿಕೆ ಸಜ್ಜು

ಎಂ.ಕೆ.ಮೋಹನ್‌ರಾಜ್

ಮಂಡ್ಯ,ಏ.28–ರಾಜ್ಯದಲ್ಲಿ ಮುಂದಿನ ವರ್ಷ ಮಾರ್ಚ್ ಅಥವಾ ಏಪ್ರಿಲ್‌ನಲ್ಲಿ ಸಾರ್ವತ್ರಿಕ ಚುನಾವಣೆ ಎದುರಾಗುವ ಹಿನ್ನೆಲೆಯಲ್ಲಿ ಈ ಬಾರಿ ಟಿಕೆಟ್ ಗಿಟ್ಟಿಸಿಕೊಂಡು ಚುನಾವಣೆಗೆ ಸ್ಪರ್ಧಿಸಲೇಬೇಕೆಂದು ಪಣ ತೊಟ್ಟು ನಿಂತಿರುವ ವಿವಿಧ ಪಕ್ಷದ ಮುಖಂಡರು ತಮ್ಮ ಮಾತೃ ಪಕ್ಷದಲ್ಲಿ ಟಿಕೆಟ್ ಸಿಗದಿದ್ದರೆ ಬೇರೆ ಪಕ್ಷಕ್ಕೆ ವಲಸೆ ಹೋಗಿ ಸ್ಪರ್ಧಿಸಲು ಸಜ್ಜಾಗಿದ್ದರೆ, ಮತ್ತೊಂದೆಡೆ ಗೆಲ್ಲುವ ಕುದುರೆಗಳಿಗೆ ಕೆಲ ಪಕ್ಷಗಳ ನಾಯಕರು ಗಾಳ ಹಾಕುತ್ತಿದ್ದಾರೆ.

ಚುನಾವಣಾ ವರ್ಷದಲ್ಲಿ ಪಕ್ಷಾಂತರ ಪರ್ವ ಸಾಮಾನ್ಯವಾಗಿದೆ. ಪ್ರತಿ ಸಾರ್ವತ್ರಿಕ ಚುನಾವಣೆ ಎದುರಾದಾಗ ಎರಡು ಅಥವಾ ಮೂರನೇ ಹಂತದ ನಾಯಕರಿಂದ ಹಿಡಿದು ಪ್ರಮುಖ ನಾಯಕರು ಪಕ್ಷಾಂತರ ಮಾಡುವುದು ಸಾಮಾನ್ಯ. ಅದೇ ರೀತಿ 2018ರ ವಿಧಾನಸಭಾ ಚುನಾವಣೆಯಲ್ಲಿ ದಶಕಗಳಿಂದ ಜೆಡಿಎಸ್‌ನಲ್ಲಿ ಗುರುತಿಸಿಕೊಂಡು ಬಂದಿದ್ದ ಎನ್.ಚಲುವರಾಯಸ್ವಾಮಿ, ಶ್ರೀರಂಗಪಟ್ಟಣದ ರಮೇಶ್ ಬಂಡಿಸಿದ್ದೇಗೌಡ ಕುಮಾರಸ್ವಾಮಿ ಅವರ ಸಖ್ಯ ತೊರೆದು ಕಾಂಗ್ರೆಸ್


ಆತ್ಮಾನಂದ


ಸಚ್ಚಿದಾನಂದ


ವಿಜಯಾನಂದ

ಸೇರಿದ್ದರೆ, ಅದರ ಪ್ರತಿಯಾಗಿ ಕಾಂಗ್ರೆಸ್‌ನಲ್ಲಿದ್ದ ಕೆ.ಸುರೇಶ್‌ಗೌಡ ಮತ್ತು ರವೀಂದ್ರ ಶ್ರೀಕಂಠಯ್ಯ ಜೆಡಿಎಸ್ ಸೇರಿದ್ದರು. ಈ ಬಾರಿಯೂ ಮಂಡ್ಯದಲ್ಲಿ ಪಕ್ಷಾಂತರ ಪರ್ವ ಭರ್ಜರಿಯಾಗಿ ಕೇಳಿ ಬರುತ್ತಿದೆ.

ಆತ್ಮಾನಂದಗೆ ಜೆಡಿಎಸ್ ಗಾಳ: ಜಿಲ್ಲೆಯ ಹಿರಿಯ ಕಾಂಗ್ರೆಸ್ಸಿಗ ಹಾಗೂ ಮಾಜಿ ಸಚಿವ ಎಂ.ಎಸ್.ಆತ್ಮಾನಂದಗೆ ಜೆಡಿಎಸ್ ಗಾಳ ಹಾಕಿದೆ. ಇತ್ತೀಚೆಗೆ ಜೆಡಿಎಸ್ ಸೇರಿ ರಾಜ್ಯಾಧ್ಯಕ್ಷ ಪಟ್ಟ ಅಲಂಕರಿಸಿರುವ ಸಿ.ಎಂ.ಇಬ್ರಾಹಿಂ ಖುದ್ದು ಆತ್ಮಾನಂದಗೆ ದೂರವಾಣಿ ಕರೆ ಮಾಡಿ ಪಕ್ಷಕ್ಕೆ ಆಹ್ವಾನಿಸಿದ್ದು, ಶೀಘ್ರವೇ ತಾವು ಹಾಗೂ ಹೆಚ್.ಡಿ.ದೇವೇಗೌಡರು ತಮ್ಮ ನಿವಾಸಕ್ಕೆ ಬರುವುದಾಗಿ ಹೇಳಿದ್ದಾರೆ. ಇಬ್ರಾಹಿಂ ಕರೆ ಮಾಡಿ ಪಕ್ಷಕ್ಕೆ ಆಹ್ವಾನಿಸಿರುವುದನ್ನು ಸ್ವತಃ ಆತ್ಮಾನಂದ ಅವರೇ ಖಚಿತಪಡಿಸಿದ್ದಾರೆ.

ಇಂಡುವಾಳು ಸಚ್ಚಿಗೆ ಬಿಜೆಪಿ ಗಾಳ: ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ವ್ಯಾಪಕವಾಗಿ ಓಡಾಡುತ್ತಾ ಒಂದಷ್ಟು ಸಮಾಜ ಸೇವೆ ಕೆಲಸಗಳನ್ನು ಮಾಡುತ್ತಿರುವ ಯುವ ಮುಖಂಡ ಇಂಡುವಾಳು ಸಚ್ಚಿದಾನಂದಗೆ ಬಿಜೆಪಿ ಗಾಳ ಹಾಕಿದೆ. ವರ್ಷದ ಹಿಂದೆ ಸಚಿವ ಕೆ.ಸಿ.ನಾರಾಯಣಗೌಡ ಸಚ್ಚಿ ನಿವಾಸಕ್ಕೆ ಭೇಟಿ ಕೊಟ್ಟಿದ್ದರೆ, ಇತ್ತೀಚೆಗೆ ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಸಹ ಸಚ್ಚಿದಾನಂದರ ಮನೆಗೆ ಭೇಟಿ ನೀಡಿ ಪಕ್ಷಕ್ಕೆ ಆಹ್ವಾನಿಸಿದ್ದರು.

ಕಾಂಗ್ರೆಸ್‌ನಲ್ಲಿ ಗುರುತಿಸಿಕೊಂಡಿದ್ದ ಅವರನ್ನು ಸುಮಲತಾ ಪರ ನಿಂತಿದ್ದಕ್ಕೆ ಕಾಂಗ್ರೆಸ್‌ನಿಂದ ಉಚ್ಛಾಟನೆ ಮಾಡಲಾಗಿತ್ತು. ರಾಜಕೀಯವಾಗಿ ಯಾವುದೇ ಪಕ್ಷ ಸೇರದೇ ಸಮಾಜಸೇವೆಯಲ್ಲಿ ತೊಡಗಿದ್ದ ಅವರಿಗೆ ಇದೀಗ ಬಿಜೆಪಿ ಗಾಳ ಹಾಕಿದ್ದು, ಪಕ್ಷ ಸೇರ್ಪಡೆಗೆ ಸೂಕ್ತ ಸಮಯಕ್ಕಾಗಿ ಕಾಯುತ್ತಿದ್ದಾರೆ.

ಸುಮಲತಾ ಚಿತ್ತವೂ ಬಿಜೆಪಿಯತ್ತ ಸಂಸದೆ ಸುಮಲತಾ ಅಂಬರೀಷ್ ಇತ್ತೀಚೆಗೆ ಬೆಂಗಳೂರಿನಲ್ಲಿ ಮಂಡ್ಯ ಜನರು ಬಿಜೆಪಿ ಸೇರಬೇಕೆಂಬ ಅಪೇಕ್ಷೆ ಹೊಂದಿದ್ದರೆ ಚಿಂತನೆ ನಡೆಸುವೆ ಎಂಬ ಹೇಳಿಕೆ ನೀಡಿದ್ದರು. ಇದು ಅವರು ಬಿಜೆಪಿ ಸೇರಬಹುದಾ ಎಂಬ ಊಹಾಪೋಹಕ್ಕೆ ರೆಕ್ಕೆಪುಕ್ಕ ಬಂದಿತ್ತು.

ಸದ್ಯ ಪಕ್ಷೇತರರಾಗಿರುವ ಅವರು, ಜೆಡಿಎಸ್ ವಿರುದ್ಧವೇ ಚುನಾವಣೆ ಗೆದ್ದಿರುವುದರಿಂದ ಆ ಪಕ್ಷದತ್ತ ಮುಖ ಸಹ ಮಾಡಲ್ಲ. ಇನ್ನು ಪತಿ ಅಂಬರೀಷ್ ಸ್ಪರ್ಧಿಸಿದ್ದ ಕಾಂಗ್ರೆಸ್ ಸೇರಲು ಇರಾದೆ ಇದ್ದರೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಅಂಬರೀಷ್ ನಡುವೆ ಇದ್ದ ಭಿನ್ನಾಭಿಪ್ರಾಯ ಮುಂದುವರೆದಿರುವುದರಿಂದ ಅದು ಕಷ್ಟಸಾಧ್ಯ ಅದರಿಂದ ಅವರಿಗೆ ಉಳಿದಿರುವುದು ಬಿಜೆಪಿ ಮಾತ್ರ.

ವಿಜಯಾನಂದಗೆ ಬಿಜೆಪಿ ಆಹ್ವಾನ: ನಿತ್ಯ ಸಚಿವ ಕೆ.ವಿ.ಶಂಕರಗೌಡರ ಮೊಮ್ಮಗ ಪಿಇಟಿ ಅಧ್ಯಕ್ಷ ಕೆ.ಎಸ್.ವಿಜಯಾನಂದಗೆ ಬಿಜೆಪಿ ಗಾಳ ಹಾಕಿದೆ. ಕೆಲ ನಾಯಕರು ಸಂಪರ್ಕ ಮಾಡಿ ಪಕ್ಷಕ್ಕೆ ಆಹ್ವಾನಿಸಿದ್ದರೂ ಇದನ್ನು ತಿರಸ್ಕರಿಸಿರುವ ವಿಜಯಾನಂದ, ಜೆಡಿಎಸ್‌ನಲ್ಲೇ ಉಳಿಯಲಿದ್ದಾರೆ. ಮತ್ತೊಂದೆಡೆ ಜೆಡಿಎಸ್ ಟಿಕೆಟ್ ಸಿಗುವ ಭರವಸೆಯಲ್ಲಿ ಮಂಡ್ಯ ಕ್ಷೇತ್ರದಲ್ಲಿ ಪ್ರವಾಸ ಮಾಡುತ್ತಿರುವ ಕೀಲಾರ ರಾಧಾಕೃಷ್ಣಗೆ ಜೆಡಿಎಸ್ ಟಿಕೆಟ್ ಸಿಗದಿದ್ದರೆ ಅವರು ಬಿಜೆಪಿಯತ್ತ ಮುಖ ಮಾಡಬಹುದು ಎಂಬ ಮಾತುಗಳು ಕೇಳಿ ಬರುತ್ತಿವೆ. ಜೆಡಿಎಸ್‌ನಲ್ಲಿದ್ದ ಮಂಡ್ಯ ಕ್ಷೇತ್ರದ ಜೆಡಿಎಸ್ ಮುಖಂಡ ಡಾ.ಕೃಷ್ಣ ಕಾಂಗ್ರೆಸ್ ಸೇರಿದ್ದರು. ಅದೇ ರೀತಿ ಇನ್ನೊಂದಷ್ಟು ಜನ ಪಕ್ಷ ಬದಲಿಸಲಿದ್ದು, ಚುನಾವಣೆಗೆ ತಿಂಗಳುಗಳು ಬಾಕಿ ಇರುವಾಗ ಮತ್ತಷ್ಟು ಪಕ್ಷಾಂತರ ಪರ್ವ ನಡೆಯಬಹುದು.


ಶ್ರೀರಂಗಪಟ್ಟಣ ತಾಲೂಕಿನ ಪಾಲಹಳ್ಳಿ ಗ್ರಾಮಕ್ಕೆ ಭೇಟಿ ನೀಡಿದ ಯುವ ಮುಖಂಡ ಇಂಡುವಾಳು ಸಚ್ಚಿದಾನಂದ ಇತ್ತೀಚೆಗೆ ಹಾವು ಕಡಿದು ಮೃತಪಟ್ಟ ರೈತ ರಂಜು ಮನೆಗೆ ತೆರಳಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿ ಪರಿಹಾರ ನೀಡಿದರು.

ನಾನು ಯಾವ ಪಕ್ಷವನ್ನೂ ಸೇರುವುದಿಲ್ಲ

ಮದ್ದೂರು,ಏ.28(ಮೋಹನ್‌ರಾಜ್)– ಬಿಜೆಪಿ ಮುಖಂಡರನ್ನು ಭೇಟಿಯಾಗಿ ಜಿಲ್ಲೆಯ ಅಭಿವೃದ್ಧಿ ಬಗ್ಗೆ ಚರ್ಚೆ ಮಾಡಿದ್ದೇನೆಯೇ ಹೊರತು, ಬಿಜೆಪಿ ಸೇರುವ ಬಗ್ಗೆ ಎಲ್ಲಿಯೂ ಚರ್ಚೆ ನಡೆಸಿಲ್ಲ. ಮುಂದಿನ ದಿನಗಳಲ್ಲಿ ತಾವು ಯಾವುದೇ ಪಕ್ಷಕ್ಕೆ ಸೇರ್ಪಡೆಗೊಳ್ಳುವುದಿಲ್ಲವೆಂದು ಮಂಡ್ಯ ಲೋಕಸಭಾ ಕ್ಷೇತ್ರದ ಪಕ್ಷೇತರ ಸಂಸದೆ ಸುಮಲತಾ ಅಂಬರೀಷ್ ಸ್ಪಷ್ಟಪಡಿಸಿದರು.



ಗುರುವಾರ ಪಟ್ಟಣದಲ್ಲಿ ಆಯೋಜಿಸಿದ್ದ ತಾಲೂಕು ಮಟ್ಟದ ಆರೋಗ್ಯ ಮೇಳ ಕಾರ್ಯಕ್ರಮದಲ್ಲಿ ಭಾಗವಹಿಸಿ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ಬಿಜೆಪಿ ಪಕ್ಷಕ್ಕೆ ಸೇರ್ಪಡೆಗೊಳ್ಳುವ ಊಹಾಪೋಹದ ಕುರಿತು ಪ್ರತಿಕ್ರಿಯಿಸಿದರು.

ಜಿಲ್ಲೆಯಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕಾದ ದೃಷ್ಟಿಯಿಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿದ್ದೇನೆ. ಆದರೆ ಪಕ್ಷ ಸೇರುವ ಬಗ್ಗೆ ಎಲ್ಲಿಯೂ ಚರ್ಚಿಸಿಲ್ಲವೆಂದ ಅವರು, ಸಚಿವ ಅಶ್ವಥ್‌ನಾರಾಯಣ್ ಪಕ್ಷಕ್ಕೆ ಬಂದರೆ ಸ್ವಾಗತ ಎಂದಿದ್ದು, ಸದ್ಯಕ್ಕೆ ತಮಗೆ ಅದರ ಅವಶ್ಯಕತೆಯಿಲ್ಲವೆಂದರು.

ತಾವು ಪಕ್ಷ ಸೇರ್ಪಡೆಗೊಳ್ಳುತ್ತಿರುವ ವದಂತಿ ಕೇವಲ ಊಹಾಪೋಹವಾಗಿದ್ದು ಈಗ ಚುನಾವಣೆಯೂ ಇಲ್ಲ, ಸೇರ್ಪಡೆ ಪ್ರಸ್ತಾಪವೂ ಇಲ್ಲ. ಪಕ್ಷ ಸೇರ್ಪಡೆ ಸಂಬಂಧ ಜನರ ಅಭಿಪ್ರಾಯ ಸಂಗ್ರಹಿಸುತ್ತಿದ್ದು ಇದನ್ನು ಬಹಿರಂಗವಾಗಿ ಹೇಳಲು ಸಾಧ್ಯವಿಲ್ಲವೆಂದರು.

ಬೆಂಬಲಿಗ ಸಚ್ಚಿದಾನಂದ ಬಿಜೆಪಿ ಸೇರ್ಪಡೆ ಬಗ್ಗೆ ಪ್ರತಿಕ್ರಿಯಿಸಿದ ಸುಮಲತಾ, ಎಲ್ಲರೂ ಸ್ವತಂತ್ರರು ಯಾವ ಪಕ್ಷಕ್ಕಾದರೂ ಸೇರಿಕೊಳ್ಳಬಹುದು ಎಲ್ಲಿ ಗೌರವ ಸ್ಥಾನಮಾನ ಸಿಗುತ್ತದೋ ಅಲ್ಲಿ ಸೇರ್ಪಡೆಗೊಳ್ಳಬಹುದಾಗಿದ್ದು, ಜಿಲ್ಲೆಯ ಜನರಲ್ಲಿ ಯಾವುದೇ ಗೊಂದಲವಿಲ್ಲ. ನನ್ನ ಚುನಾವಣೆಯಲ್ಲಿ ಎಲ್ಲಾ ಪಕ್ಷದವರು ದುಡಿದಿದ್ದಾರೆ ಎಂದು ಹೇಳಿದರು.

ಕಳೆದ ಎರಡು ವರ್ಷಗಳಿಂದಲೂ ಕೋವಿಡ್ ಹಿನ್ನೆಲೆಯಲ್ಲಿ ಸಂಸದರ ನಿಧಿ ಬಿಡುಗಡೆಯಾಗದ ಹಿನ್ನೆಲೆಯಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳು ಕುಂಠಿತಗೊಂಡಿದ್ದವು. ಪ್ರಸಕ್ತ ಸಾಲಿನಲ್ಲಿ ಸಂಸದರ ಅನುದಾನ ಬಿಡುಗಡೆಯಾಗಿದ್ದು, ಈ ಕಾರಣದಿಂದಾಗಿ ಮುಖಂಡರ ಸಭೆ ಆಯೋಜಿಸಿ ಅನುದಾನ ಬಿಡುಗಡೆಗೆ ಕ್ರಮವಹಿಸಿದ್ದೇನೆ. ಇದರಲ್ಲಿ ಯಾವುದೇ ರಾಜಕೀಯ ದುರುದ್ದೇಶವಿಲ್ಲ ಎಂದರು.

ಉತ್ತರ ಭಾರತದಲ್ಲಿ ಹಿಂದಿ ಭಾಷೆಗೆ ಪ್ರಾಮುಖ್ಯತೆಯಿದ್ದು, ಕರ್ನಾಟಕದಲ್ಲಿ ಕನ್ನಡ ಭಾಷೆಗೆ ಪ್ರಾಮುಖ್ಯತೆಯಿದೆ. ಭಾಷೆಗೆ ಧಕ್ಕೆಯಾದರೆ ಯಾರೂ ಕೂಡ ಸುಮ್ಮನಿರಲ್ಲ. ನಮ್ಮ ಸ್ವಾಭಿಮಾನಕ್ಕೆ ಧಕ್ಕೆಯಾದರೆ ಹೋರಾಟದ ಹಾದಿ ಹಿಡಿಯಬೇಕಾಗುತ್ತದೆ ಎಂದು ಎಚ್ಚರಿಸಿದರು.

ಜಿ.ಪಂ. ಮಾಜಿ ಅಧ್ಯಕ್ಷ ಬಿ.ವಿವೇಕಾನಂದ, ನಗರಕೆರೆ ಗ್ರಾ.ಪಂ. ಸದಸ್ಯೆ ಶಿಲ್ಪ ಜಯಲಿಂಗು, ಮಾಜಿ ಸದಸ್ಯ ಎನ್.ಕೆ.ರಾಮಲಿಂಗಯ್ಯ, ಎಪಿಎಂಸಿ ಮಾಜಿ ಸದಸ್ಯ ಮಹೇಂದ್ರ, ಮುಖಂಡರಾದ ಹನಕೆರೆ ಶಶಿ ಇತರರಿದ್ದರು.

ಪ್ರೀತಿಗೆ ಪೋಷಕರ ವಿರೋಧ: ಅಪ್ರಾಪ್ತೆ ಆತ್ಮಹತ್ಯೆ

ಚಾಮರಾಜನಗರ,ಏ.28(ಎಸ್‌ಎಸ್)– ಪ್ರೀತಿಗೆ ಪೋಷಕರು ವಿರೋಧ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಅಪ್ರಾಪ್ತೆಯೊಬ್ಬಳು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಗ್ರಾಮವೊಂದರಲ್ಲಿ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ.

ತಾಲೂಕಿನ ಕಾಗಲವಾಡಿ ಮೋಳೆ ಗ್ರಾಮದ ಯುವಕ ಸೋಮೇಶ್ ಎಂಬಾತನನ್ನು ಅಪ್ರಾಪ್ತೆಯು ಪ್ರೀತಿಸುತ್ತಿದ್ದಳು. ಈ ವಿಚಾರ ತಿಳಿದ ಈಕೆಯ ಪೋಷಕರು ಪ್ರೀತಿಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಇದರಿಂದ ಮನನೊಂದ ಅಪ್ರಾಪ್ತೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಈ ವಿಚಾರವನ್ನು ಪೋಷಕರು ಗೌಪ್ಯವಾಗಿ ಇಟ್ಟು ಆಕೆಯ ಅಂತ್ಯಸಂಸ್ಕಾರವನ್ನು ಮಾಡಿದ್ದಾರೆ. ಈ ಬಗ್ಗೆ ತಿಳಿದ ಸೋಮೇಶ್ ಕೂಡ ಆತ್ಮಹತ್ಯೆಗೆ ಯತ್ನಿಸಿದ್ದಾನೆ. ಈ ವೇಳೆ ಈತನನ್ನು ಪೋಷಕರು ರಕ್ಷಿಸಿ, ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ ಎನ್ನಲಾಗಿದೆ.

ಘಟನೆ ನಡೆದು 10–12 ದಿನಗಳು ಕಳೆದಿದ್ದು, ಪೊಲೀಸರಿಗೆ ವಿಷಯ ತಿಳಿಸದೆ ಅಂತ್ಯಕ್ರಿಯೆ ನಡೆಸಿದ ಕಾರಣ ಅಪ್ರಾಪ್ತೆಯ ತಂದೆ–ತಾಯಿ ವಿರುದ್ಧ ರಾಮಸಮುದ್ರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಿವಕುಮಾರ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಸ್ಕೂಟರ್‌ಗೆ ಕಾರು ಡಿಕ್ಕಿ: ಸವಾರ ಸಾವು

ಬೇಗೂರು, ಏ.28(ಕಿರಣ್)– ಸ್ಕೂಟರ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲಿಯೇ ಸಾವನ್ನಪ್ಪಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ಬೇಗೂರು ಸಮೀಪದ ಗರಗನಹಳ್ಳಿ ಗೇಟ್ ಬಳಿ ಗುರುವಾರ ನಡೆದಿದೆ.

ಗರಗನಹಳ್ಳಿ ಗ್ರಾಮದ ನಿವಾಸಿ ಬಸವಣ್ಣ(45) ಮೃತಪಟ್ಟ ಸವಾರ. ಇವರು ರಾಘವಾಪುರದಿಂದ ಸ್ವಗ್ರಾಮ ಗರಗನಹಳ್ಳಿಗೆ ತಮ್ಮ ಟಿವಿಎಸ್ ಸ್ಕೂಟರ್‌ನಲ್ಲಿ ಬರುತ್ತಿದ್ದಾಗ ಮೈಸೂರಿನಿಂದ ಕೇರಳದ ಕಡೆಗೆ ತೆರಳುತ್ತಿದ್ದ ಮಾರುತಿ ಎರಟಿಗಾ ಕಾರು ಗರಗನಹಳ್ಳಿ ಗೇಟ್ ಬಳಿ (ರಾಷ್ಟ್ರೀಯ ಹೆದ್ದಾರಿ 766) ಚಾಲಕನ ನಿಯಂತ್ರಣ ತಪ್ಪಿ ಸ್ಕೂಟರ್‌ಗೆ ಹಿಂಬದಿಯಿಂದ ಡಿಕ್ಕಿ ಹೊಡೆದಿದೆ. ಪರಿಣಾಮ ಸವಾರ ಬಸವಣ್ಣ ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡ ಬೇಗೂರು ಠಾಣೆಯ ಪೊಲೀಸರು, ಕಾರಿನ ಚಾಲಕ ಸಬೀನ್‌ನನ್ನು ವಶಕ್ಕೆ ಪಡೆದಿದ್ದಾರೆ.

ಪುರಸಭೆ ಮಾಜಿ ಸದಸ್ಯ ನಾಗರಾಜು ನಿಧನ

ಕೊಳ್ಳೇಗಾಲ, ಏ.28– ಪುರಸಭೆಯ ಮಾಜಿ ಸದಸ್ಯ ಹಾಗೂ ಪಟ್ಟಣದ ಭೀಮನಗರ



ನಿವಾಸಿ ನಾಗರಾಜು(63) ಬುಧವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಗುರುವಾರ ಮಧ್ಯಾಹ್ನ ಹೊಸ ಹಂಪಾಪುರ ಸಮೀಪದ ರುದ್ರಭೂಮಿಯಲ್ಲಿ ವಿಧಿ, ವಿಧಾನಗಳೊಂದಿಗೆ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ಮಾಜಿ ಶಾಸಕ ಎಸ್.ಜಯಣ್ಣ ಸೇರಿದಂತೆ ಪಟ್ಟಣದ ಹಲವು ಮುಖಂಡರು ಸಂತಾಪ ಸೂಚಿಸಿದ್ದಾರೆ.

ಅವಧಿ ಮೀರಿದ ಗ್ಲೂಕೋಸ್ ನೀಡಿಕೆ: ಗ್ರಾಮಸ್ಥರಿಂದ ಪ್ರತಿಭಟನೆ

ಉಡಿಗಾಲ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಘಟನೆ: ವೈದ್ಯಾಧಿಕಾರಿ, ಸಿಬ್ಬಂದಿ ವಿರುದ್ಧ ಪ್ರಕರಣ ದಾಖಲು



ಚಾಮರಾಜನಗರ, ಏ.29(ಎಸ್‌ಎಸ್)– ತಾಲೂಕಿನ ಉಡಿಗಾಲ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ರೋಗಿಗಳಿಗೆ ಅವಧಿ ಮೀರಿದ ಗ್ಲೂಕೋಸ್ ನೀಡಲಾಗಿದೆ ಎಂದು ಆರೋಪಿಸಿ ಆರೋಗ್ಯ ಕೇಂದ್ರದ ಮುಂಭಾಗ ಗುರುವಾರ ಗ್ರಾಮಸ್ಥರು ಹಾಗೂ ಕಬ್ಬು ಬೆಳೆಗಾರರ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ಆರೋಗ್ಯ ಕೇಂದ್ರಕ್ಕೆ ಆಗಮಿಸಿದ ರೋಗಿಗಳಿಗೆ ಸಿಬ್ಬಂದಿ ನೀಡಿದ ಗ್ಲೂಕೋಸ್ ಅವಧಿ ಮೀರಿರುವುದನ್ನು ಗಮನಿಸಿದ ರೋಗಿಗಳ ಸಂಬಂಧಿಕರು ಕೇಂದ್ರದ ವೈದ್ಯಾಧಿಕಾರಿ ಹಾಗೂ ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಈ ವೇಳೆ ಅವಧಿ ಮೀರಿದ ಗ್ಲೂಕೋಸ್ ಪಡೆದಿದ್ದ ಮಹದೇವಯ್ಯ ಎಂಬುವವರ ಆರೋಗ್ಯದಲ್ಲಿ ಏರುಪೇರಾದ ಹಿನ್ನೆಲೆಯಲ್ಲಿ ಅವರನ್ನು ನಗರದ ಜಿಲ್ಲಾಸ್ಪತ್ರೆಗೆ ರವಾನಿಸಲಾಗಿದೆ.

ಪ್ರತಿಭಟನೆ: ವಿಷಯ ತಿಳಿದ ಗ್ರಾಮಸ್ಥರು ಹಾಗೂ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ಪ್ರಾಥಮಿಕ ಆರೋಗ್ಯ ಕೇಂದ್ರದ ಮುಂಭಾಗ ಪ್ರತಿಭಟನೆ ನಡೆಸಿ, ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಸ್ಥಳಕ್ಕಾಗಮಿಸಿದ ಪೊಲೀಸರು, ವೈದ್ಯಾಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಘಟನೆ ಸಂಬಂಧ ಪತ್ರಿಕೆಯೊಂದಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವಿಶ್ವೇಶ್ವರಯ್ಯ ಮಾತನಾಡಿ, ವಿಷಯ ತಿಳಿದು ಉಡಿಗಾಲ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ ಅವಧಿ ಮೀರಿದ ಗ್ಲೂಕೋಸ್ ಹಾಗೂ ಮಾತ್ರೆಗಳು ಪತ್ತೆಯಾಗಿವೆ. ಈ ಬಗ್ಗೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ನಾನು ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸುತ್ತೇನೆ. ಅವಧಿ ಮೀರಿದ ಗ್ಲೂಕೋಸ್ ಪಡೆದ ಯಾರಿಗೂ ಆರೋಗ್ಯದಲ್ಲಿ ತೊಂದರೆಯಾಗಿಲ್ಲ ಎಂದು ತಿಳಿಸಿದರು.

ಜೂಜಾಟ: 6 ಮಂದಿ ಬಂಧನ, ಬಿಡುಗಡೆ

ಕೊಳ್ಳೇಗಾಲ, ಏ.28(ನಾಗೇಂದ್ರಸ್ವಾಮಿ)– ಜೂಜಾಟವಾಡುತ್ತಿದ್ದ 6 ಮಂದಿಯನ್ನು ಕೊಳ್ಳೇಗಾಲ ಗ್ರಾಮಾಂತರ ಠಾಣೆಯ ಪೊಲೀಸರು ಬಂಧಿಸಿ, ಬಿಡುಗಡೆಗೊಳಿಸಿರುವ ಘಟನೆ ಗುರುವಾರ ತಾಲೂಕಿನ ಬಾಳಗುಣಸೆ ಚಾನಲ್ ಬಳಿ ನಡೆದಿದೆ.

ತಾಲೂಕಿನ ಚಿಕ್ಕಲೂರು ಹಾಗೂ ಬಾಳಗುಣಸೆ ಗ್ರಾಮದ ಕುಮಾರ್, ರಾಚಯ್ಯ, ಸಿದ್ದಯ್ಯ, ಶ್ರೀನಿವಾಸ್, ಮಹದೇವಸ್ವಾಮಿ ಹಾಗೂ ಭರತ್ ಬಂಧಿತ ಆರೋಪಿಗಳು. ಇವರೆಲ್ಲರೂ ಬಾಳಗುಣಸೆ ಗ್ರಾಮದ ಚಾನಲ್ ಬಳಿ ಜೂಜಾಟವಾಡುತ್ತಿದ್ದರು. ಈ ಬಗ್ಗೆ ಖಚಿತ ಮಾಹಿತಿ ಮೇರೆಗೆ ಗ್ರಾಮಾಂತರ ಠಾಣೆಯ ಪಿಎಸ್‌ಐ ಮಂಜುನಾಥ್ ಅವರ ನೇತೃತ್ವದಲ್ಲಿ ದಾಳಿ ನಡೆಸಿದ ಪೊಲೀಸರು, ಆರೋಪಿಗಳನ್ನು ಬಂಧಿಸಿ, ಪಣಕ್ಕಿಟ್ಟಿದ್ದ 10,720ರೂ. ನಗದು ವಶಪಡಿಸಿಕೊಂಡಿದ್ದಾರೆ.

ಬಳಿಕ, ಎಲ್ಲಾ ಆರೋಪಿಗಳನ್ನು ಠಾಣಾ ಜಾಮೀನಿನ ಮೇಲೆ ಬಿಡುಗಡೆಗೊಳಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಪೇದೆಗಳಾದ ವೀರೇಂದ್ರ, ವೆಂಕಟೇಶ್, ದ್ವಾರಕೀಶ್, ರವಿ, ದಿನೇಶ್, ಮಾಯಪ್ಪ, ಜುನ್ಯೆದ್, ಮಧು, ಪಡೆಯಪ್ಪ, ಚಾಲಕ ನಾರಾಯಣ ಸೇರಿದಂತೆ ಇನ್ನಿತರ ಸಿಬ್ಬಂದಿ ಇದ್ದರು.

ಜಮೀನುಗಳಿಗೆ ನುಗ್ಗುತ್ತಿರುವ ಕಲುಷಿತ ನೀರು ತಡೆಯಲು ಆಗ್ರಹಿಸಿ ಪ್ರತಿಭಟನೆ



ಯಳಂದೂರು, ಏ.28(ವಿ.ನಾಗರಾಜು)– ಕಲುಷಿತ ನೀರು ಜಮೀನಿಗೆ ನುಗ್ಗಿ ಬೆಳೆಗಳು ಹಾಳಾಗುತ್ತಿದ್ದು, ಈ ನೀರನ್ನು ತಡೆಯಬೇಕು ಎಂದು ಆಗ್ರಹಿಸಿ ಪಟ್ಟಣದಲ್ಲಿ ಗುರುವಾರ ತಾಲೂಕಿನ ವೈ.ಕೆ.ಮೋಳೆ ಗ್ರಾಮಸ್ಥರು ಮೌನ ಪ್ರತಿಭಟನೆ ನಡೆಸಿದರು.

ಗ್ರಾಮದ ಬಳಿಯ ಶ್ರೀರಾಘವೇಂದ್ರ ಚಿತ್ರಮಂದಿರದ ಬಳಿ ಜಮಾಯಿಸಿದ ಪ್ರತಿಭಟನಾಕಾರರು ಅಲ್ಲಿಂದ ಪಾದಯಾತ್ರೆ ಮೂಲಕ ಪಟ್ಟಣದ ಬಳೇಪೇಟೆ ಮೂಲಕ ತಾಲೂಕು ಕಚೇರಿಗೆ ತೆರಳಿ ಪ್ರತಿಭಟನೆ ನಡೆಸಿದರು. ಸ್ಥಳಕ್ಕಾಗಮಿಸಿದ ತಹಸೀಲ್ದಾರ್ ಆನಂದಪ್ಪ ನಾಯಕ್ ಅವರಿಗೆ ಮನವಿ ಸಲ್ಲಿಸಿದರು.

ವೈ.ಕೆ.ಮೋಳೆ ಗ್ರಾಮದ ಕಲುಷಿತ ನೀರು ಗ್ರಾಮದ ಹೊರವಲಯದಲ್ಲಿರುವ ಜಮೀನುಗಳಿಗೆ ನುಗ್ಗಿ, ಕಲುಷಿತ ವಾತಾವರಣ ಸೃಷ್ಟಿಸುತ್ತಿದೆ. ಇದರಿಂದ ಜಮೀನುಗಳಲ್ಲಿ ಭೂಮಿ ಫಲವತ್ತತೆ ಕಳೆದುಕೊಳ್ಳುತ್ತಿದೆ. ಇದರಿಂದ ಜಮೀನಿನಲ್ಲಿ ಕೃಷಿ ಮಾಡಲಾಗುತ್ತಿಲ್ಲ. ಈ ಹಿಂದೆ ಕಲುಷಿತ ನೀರು ಉಪ್ಪಿನಮೋಳೆ ಕೆರೆ ಸೇರುತ್ತಿತ್ತು. ಆದರೆ, ಕಾಲುವೆ ಮುಚ್ಚಿದ್ದರಿಂದ ಈ ನೀರು ಜಮೀನುಗಳಿಗೆ ನುಗ್ಗುತ್ತಿದೆ ಎಂದು ದೂರಿದರು.

ಯಳಂದೂರು–ಕಾಗಲವಾಡಿ ಮುಖ್ಯ ರಸ್ತೆಯಲ್ಲಿನ ಏರುನ್ ಕಾಲುವೆಯಿಂದ ಉಪ್ಪಿನಮೋಳೆ ಕೆರೆಗೆ ಹೋಗುವ ನೀರಿನ ಕಾಲುವೆಯಾಗಿರುತ್ತದೆ. ಈ ಸಂಬಂಧ ಸೂಕ್ತ ಕ್ರಮವಹಿಸುವಂತೆ ಅಂಬಳೆ ಪಿಡಿಓ, ತಾಪಂ ಇಓ, ಸಂತೇಮರಹಳ್ಳಿ ನೀರಾವರಿ ಇಲಾಖೆಯ ಅಭಿಯಂತರರು ಎಷ್ಟೇ ಮನವಿ ಸಲ್ಲಿಸಿದರೂ ಗಮನ ನೀಡುತ್ತಿಲ್ಲ. ಅನ್ನ ನೀಡುತ್ತಿರುವ ರೈತರ ಬಾಳು ನಿರುಪಯುಕ್ತವಾಗುತ್ತಿದೆ. ಸಾಲ ಮಾಡಿ ಬೆಳೆ ಬೆಳೆದರೂ ಸರಿಯಾದ ರೀತಿಯಲ್ಲಿ ಕೈ ಸೇರದೆ ಸಂಕಷ್ಟಕ್ಕೆ ಒಳಗಾಗುತ್ತಿದ್ದಾರೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಕ್ರಮಕೈಗೊಳ್ಳುವಂತೆ ಆದೇಶಿಸಬೇಕು ಎಂದು ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ರೈತರಾದ ಮಲ್ಲಿಕಾರ್ಜುನಸ್ವಾಮಿ, ಕುಮಾರ, ನಂಜುಂಡಯ್ಯ, ಬಳೇಪೇಟೆ ಚಂದ್ರು, ಮಹದೇವಯ್ಯ, ರಂಗಯ್ಯ, ಮಹೇಶ್, ಜಾಕಿ ನಾಗರಾಜು, ಶ್ರೀನಿವಾಸ, ಮಲ್ಲಯ್ಯ, ಶಂಕರ, ಚಿಕ್ಕಮಾದಯ್ಯ, ಕರಿಮಲ್ಲಯ್ಯ ಸೇರಿದಂತೆ ಇತರರು ಭಾಗವಹಿಸಿದ್ದರು.

ಕೊಡವ ಸಂಪ್ರದಾಯಕ್ಕೆ ಧಕ್ಕೆ ತಂದರೆ ಕಾನೂನು ಹೋರಾಟ

ಪೊನ್ನಂಪೇಟೆ ಕೊಡವ ಸಮಾಜದ ನಿರ್ದೇಶಕ ರಾಕೇಶ್ ದೇವಯ್ಯ ಎಚ್ಚರಿಕೆ

ಮಡಿಕೇರಿ,ಏ.28– ಕೊಡವ ಸಂಪ್ರದಾಯ ಮತ್ತು ಸಂಸ್ಕೃತಿಗೆ ಧಕ್ಕೆ ತರುವ



ಪ್ರಕ್ರಿಯೆಗಳು ಇತ್ತೀಚೆಗೆ ಕಂಡು ಬರುತ್ತಿದ್ದು, ಇದು ಹೀಗೆ ಮುಂದುವರೆದರೆ ಕಾರಣಕರ್ತರ ವಿರುದ್ಧ ಕಾನೂನು ಹೋರಾಟ ನಡೆಸಬೇಕಾಗುತ್ತದೆ ಎಂದು ಪೊನ್ನಂಪೇಟೆ ಕೊಡವ ಸಮಾಜದ ನಿರ್ದೇಶಕ ಚೆಪ್ಪುಡಿರ ರಾಕೇಶ್ ದೇವಯ್ಯ ಎಚ್ಚರಿಕೆ ನೀಡಿದ್ದಾರೆ.

ಪತ್ರಿಕಾ ಪ್ರಕಟಣೆ ನೀಡಿರುವ ಅವರು ಅತ್ಯಂತ ಸೂಕ್ಷ್ಮ ಮತ್ತು ಸಣ್ಣ ಜನಾಂಗವಾಗಿರುವ ಕೊಡವರಲ್ಲಿ ವಿಶಿಷ್ಟ ಸಂಪ್ರದಾಯ ಆಚರಣೆಯಲ್ಲಿದೆ. ಅದರಲ್ಲೂ ವಿವಾಹ ಸಮಾರಂಭದಲ್ಲಿ ದೇಶದ ಯಾವುದೇ ಭಾಗದಲ್ಲಿ ಇಲ್ಲದ ವಿಭಿನ್ನವಾದ ಆಚಾರ, ವಿಚಾರಗಳನ್ನು ಅನುಸರಿಸಲಾಗುತ್ತದೆ. ಕೊಡವ ಸಮುದಾಯ ಹಾಗೂ ಕೊಡವ ಸಂಸ್ಕೃತಿ ತನ್ನದೇ ಆದ ಗೌರವವನ್ನು ಪಡೆದುಕೊಂಡಿದೆ. ಆದರೆ ಕೆಲವರು ವಿವಾಹವಾಗುವ ಸಂದರ್ಭ ಕೊಡವ ಸಂಪ್ರದಾಯವನ್ನು ತಮಗೆ ಇಷ್ಟ ಬಂದಂತೆ ಬಳಸಿಕೊಂಡು ಅವಮಾನಿಸುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಇತ್ತೀಚೆಗೆ ಕೊಡವ ವಿವಾಹವೊಂದರ ವಿಡಿಯೋ ಮತ್ತು ಫೋಟೋಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ಕೊಡವ ಸಂಸ್ಕೃತಿಯ ಕಟ್ಟುಪಾಡುಗಳನ್ನು ಉಲ್ಲಂಘಿಸಿರುವುದು ಸ್ಪಷ್ಟವಾಗಿದೆ. ಈ ವಿವಾಹಕ್ಕೆ ಸಂಬಂಧಿಸಿದ ಕುಟುಂಬಗಳ ಸದಸ್ಯರು ಬಹಿರಂಗವಾಗಿ ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿರುವ ರಾಕೇಶ್ ದೇವಯ್ಯ, ತಪ್ಪಿದಲ್ಲಿ ಕಾನೂನು ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಯಾವುದೇ ಸಮುದಾಯದ ಮೂಲ ಸಂಸ್ಕೃತಿಗೆ ಧಕ್ಕೆ ತರುವ ಅಥವಾ ಅವಮಾನಿಸುವ ಪ್ರಕರಣಗಳು ನಡೆದಾಗ ನ್ಯಾಯಾಲಯದ ಮೆಟ್ಟಿಲೇರಲು ಅವಕಾಶ ಕಲ್ಪಿಸಲಾಗಿದೆ. ಇದರ ಆಧಾರದಡಿ ಸಂಬಂಧಿಸಿದ ಎಲ್ಲಾ ವ್ಯಕ್ತಿಗಳ ವಿರುದ್ಧ ಕಾನೂನು ಹೋರಾಟ ನಡೆಸಬೇಕಾಗುತ್ತದೆ ಎಂದು ತಿಳಿಸಿದ್ದಾರೆ. ಕೊಡವ ಸಂಪ್ರದಾಯವನ್ನು ಆಚರಿಸುವ ಸಂದರ್ಭ ಯಾವುದೇ ಆಚಾರ, ವಿಚಾರಗಳಿಗೆ ಕಳಂಕವಾಗದಂತೆ ಹಿರಿಯರ ಮಾರ್ಗದರ್ಶನದಲ್ಲಿ ಮುನ್ನಡೆಯಬೇಕೆಂದು ಅವರು ಮನವಿ ಮಾಡಿದ್ದಾರೆ.

ನಾಳೆ ವಿದ್ಯುತ್ ವ್ಯತ್ಯಯ

ಸೋಮವಾರಪೇಟೆ,ಏ.28– ಕುಶಾಲನಗರದಿಂದ ಸೋಮವಾರಪೇಟೆಗೆ ಬರುವ 33ಕೆ.ವಿ ವಿದ್ಯುತ್ ಮಾರ್ಗದಲ್ಲಿ ಮಳೆಗಾಲದ ಮುಂಜಾಗ್ರತೆಗಾಗಿ ಜಂಗಲ್ ಕಟ್ಟಿಂಗ್ ಮತ್ತು ತುರ್ತು ನಿರ್ವಹಣಾ ಕಾರ್ಯವನ್ನು ಸೆಸ್ಕ್ ಇಲಾಖೆ ವತಿಯಿಂದ ಏ.30ರ ಶನಿವಾರ ಹಮ್ಮಿಕೊಳ್ಳಲಾಗಿದೆ ಎಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಧನಂಜಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಅಂದು ಬೆಳಗ್ಗೆ 9 ರಿಂದ ಸಂಜೆ 4 ರ ವರೆಗೆ ಸೋಮವಾರಪೇಟೆ ಪಟ್ಟಣ, ಚೌಡ್ಲು ಪಂಚಾಯಿತಿ, ಹಾನಗಲ್ಲು, ದೊಡ್ಡಮಳ್ತೆ, ಐಗೂರು, ನೇರುಗಳಲೆ, ಶಾಂತಳ್ಳಿ, ಕಿರಗಂದೂರು, ಬೆಟ್ಟದಳ್ಳಿ, ತೋಳೂರುಶೆಟ್ಟಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವಿದ್ಯುತ್ ಸರಬರಾಜು ಇರುವುದಿಲ್ಲ.

ಚಿಪ್ಪು ಹಂದಿಯ ಚಿಪ್ಪು ಮಾರುತ್ತಿದ್ದ ಮೂವರ ಬಂಧನ

ವಿರಾಜಪೇಟೆ,ಏ.28– ಅಕ್ರಮವಾಗಿ ಚಿಪ್ಪು ಹಂದಿಯ ಚಿಪ್ಪುಗಳನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದ 3 ಮಂದಿ ಆರೋಪಿಗಳನ್ನು ವಿರಾಜಪೇಟೆ ಸಿಐಡಿ ಪೊಲೀಸ್ ಅರಣ್ಯ ಘಟಕ ಬಂಧಿಸಿದೆ. ಕುಶಾಲನಗರ ತಾಲೂಕು ತ್ಯಾಗತ್ತೂರು–ವಾಲ್ನೂರು ಗ್ರಾಮ ನಿವಾಸಿ ಜೆ.ಎ.ರಾಜು, ವಿರಾಜಪೇಟೆ ತಾಲೂಕು ಅರಮೇರಿ ಗ್ರಾಮ ನಿವಾಸಿ ಹೆಚ್.ಜಿ. ನಿಖಿಲ್ ಹಾಗೂ ಮಡಿಕೇರಿ ತಾಲೂಕು ನಾಪೋಕ್ಲು ಗ್ರಾಮ ನಿವಾಸಿ ವಿ.ಪಿ. ಚಂದ್ರ ಹೊದ್ದೂರು ಎಂಬವರೇ ಬಂಧಿತ ಆರೋಪಿಗಳಾಗಿದ್ದಾರೆ.



ಘಟನೆ ವಿವರ: ಏ.27ರಂದು ಕೈಕೇರಿ ಗ್ರಾಮದ ಕಾವೇರಿ ಕಾಲೇಜಿನ ಮುಂಭಾಗದ ಸಾರ್ವಜನಿಕ ಬಸ್ ತಂಗುದಾಣದ ಬಳಿ 3 ವ್ಯಕ್ತಿಗಳು ಪ್ಲಾಸ್ಟಿಕ್ ಚೀಲದಲ್ಲಿ ಚಿಪ್ಪು ಹಂದಿಯ ಚಿಪ್ಪುಗಳನ್ನು (ಪೆಂಗೋಲಿಯನ್ ಚಿಪ್ಪುಗಳು) ತುಂಬಿಕೊಂಡು ಬರುತ್ತಿರುವುದಾಗಿ ಪೊಲೀಸರಿಗೆ ಮಾಹಿತಿ ಲಭಿಸಿತ್ತು. ಈ ಮಾಹಿತಿ ಆಧರಿಸಿ ವಿರಾಜಪೇಟೆ ತಾಲೂಕು ಸಿ.ಐ.ಡಿ ಪೊಲೀಸ್ ಅರಣ್ಯ ಸಂಚಾರಿ ದಳದ ಸಿಬ್ಬಂದಿಗಳು ದಾಳಿ ನಡೆಸಿ ಮೂವರು ಆರೋಪಿಗಳನ್ನು ಮಾಲು ಸಹಿತ ಬಂಧಿಸಿದ್ದಾರೆ. ಆರೋಪಿಗಳಿಂದ 8 ಕೆಜಿ 750 ಗ್ರಾಂ ಪೆಂಗೋಲಿಯನ್ ಚಿಪ್ಪುಗಳನ್ನು ವಶಕ್ಕೆ ಪಡೆಯಲಾಗಿದ್ದು, ವನ್ಯಜೀವಿ ಕಾಯಿದೆ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಂಧಿತ ಆರೋಪಿಗಳನ್ನು ಪೊನ್ನಂಪೇಟೆ ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು, 15 ದಿನಗಳ ನ್ಯಾಯಾಂಗ ಬಂಧನಕ್ಕೆ ಆದೇಶಿಸಲಾಗಿದೆ.

ಸಿಐಡಿ ಪೊಲೀಸ್ ಅರಣ್ಯ ಘಟಕದ ಪೊಲೀಸ್ ಮಹಾ ನಿರೀಕ್ಷಕ ಕೆ.ವಿ.ಶರತ್ ಚಂದ್ರ ಅವರ ನಿರ್ದೇಶನದ ಮೇರೆಗೆ, ಮಡಿಕೇರಿ ಸಿ.ಐ.ಡಿ ಪೊಲೀಸ್ ಅರಣ್ಯ ಘಟಕದ ಪೊಲೀಸ್ ಅಧೀಕ್ಷಕ ಎನ್.ಟಿ. ಶ್ರೀನಿವಾಸ್ ರೆಡ್ಡಿ ಮಾರ್ಗದರ್ಶನದಲ್ಲಿ ವಿರಾಜಪೇಟೆ ಸಿಐಡಿ ಪೊಲೀಸ್ ಅರಣ್ಯ ಸಂಚಾರಿ ದಳದ ಉಪನಿರೀಕ್ಷಕಿ ವೀಣಾ ನಾಯಕ್, ಸಿಬ್ಬಂದಿಗಳಾದ ಟಿ.ಪಿ. ಮಂಜುನಾಥ್, ಕೆ.ಎಸ್.ದೇವಯ್ಯ, ಸಿ.ಬಿ.ಬೀನ, ಎಸ್.ಎಂ.ಯೋಗೇಶ್, ಪಿ.ಯು. ಮುನೀರ್, ಆರ್.ನಂದಕುಮಾರ್ ಅವರುಗಳು ಕಾರ್ಯಾಚರಣೆ ನಡೆಸಿದ್ದಾರೆ.

ಮಡಿಕೇರಿ ಆಕಾಶವಾಣಿಯಿಂದ ನಿಧನ ವಾರ್ತೆ ಪ್ರಸಾರಕ್ಕೆ ಸಮಯ ನಿಗದಿ

ಮಡಿಕೇರಿ, ಏ.28– ಮಡಿಕೇರಿ ಆಕಾಶವಾಣಿಯಿಂದ ಸಾರ್ವಜನಿಕರ ಅನುಕೂಲಕ್ಕಾಗಿ ನಿಧನದ ಮಾಹಿತಿಯ ಪ್ರಸಾರಕ್ಕೆ ಸೂಕ್ತವಾದ ಸಮಯವನ್ನು ನಿಗದಿಪಡಿಸಲಾಗಿದೆ. ಪ್ರತೀ ದಿನ ಬೆಳಗ್ಗೆ 7 ಹಾಗೂ 7.50, ಮಧ್ಯಾಹ್ನ 1.45 ಮತ್ತು ರಾತ್ರಿ 7.25ಕ್ಕೆ ಬಿತ್ತರಿಸಲು ಕ್ರಮ ಕೈಗೊಳ್ಳಲಾಗಿದೆ. ನಿಧನದ ಪ್ರತೀ ಮಾಹಿತಿಯನ್ನು ಎರಡು ಸಲ ಪ್ರಸಾರಿಸಲು ಗಮನಹರಿಸಲಾಗಿದೆ ಎಂದು ಕಾರ್ಯಕ್ರಮ ನಿರ್ವಾಹಕರಾದ ವಿಜಯ ಅಂಗಡಿ ಅವರು ತಿಳಿಸಿದ್ದಾರೆ.

ನಿಧನದ ಸುದ್ದಿಯನ್ನು ನಿಲ್ಲಿಸಲಾಗುತ್ತದೆ ಎಂಬ ವದಂತಿ ಸಾರ್ವಜನಿಕರಲ್ಲಿದ್ದು ಈ ಮೂಲಕ ಸ್ಪಷ್ಟನೆಯನ್ನು ನೀಡಲಾಗುತ್ತಿದೆ. ಹಾಗೆಯೇ ಕೊಡಗು ಜಿಲ್ಲೆಗೆ ಸಂಬಂಧಿಸಿದಂತೆ ಕೃಷಿಕರು, ಮಹಿಳೆಯರು, ಯುವಕರು, ಪ್ರತಿಭಾವಂತರ ಕುರಿತು ವಿಭಿನ್ನ ಹಾಗೂ ಅರ್ಥಪೂರ್ಣ ಕಾರ್ಯಕ್ರಮಗಳು ಆಕಾಶವಾಣಿಯಿಂದ ಮೂಡಿಬರುತ್ತಿವೆ ಎಂದಿದ್ದಾರೆ.

ಅಂತ್ಯಕ್ರಿಯೆಗೆ ಹೋದ ಗ್ರಾಮಸ್ಥರ ಮೇಲೆ ಹೆಜ್ಜೇನು ದಾಳಿ

ಓರ್ವನ ಸಾವು

ಕುಶಾಲನಗರ,ಏ.28– ವ್ಯಕ್ತಿಯೊಬ್ಬರ ಅಂತ್ಯಸಂಸ್ಕಾರಕ್ಕೆ ತೆರಳಿದ ಗ್ರಾಮಸ್ಥರ ಮೇಲೆ ಹೆಜ್ಜೇನು ದಾಳಿ ಮಾಡಿದ ಪರಿಣಾಮ ಓರ್ವ ವ್ಯಕ್ತಿ ಸ್ಥಳದಲ್ಲೇ ಮೃತಪಟ್ಟಿದ್ದು, ಆರು ಮಂದಿ ಗಾಯಗೊಂಡಿರುವ ಘಟನೆ ಯಲಕ್ನೂರು ಹೊಸಹಳ್ಳಿ ಬಳಿಯ ಹಳೇ ಮದಲಾಪುರ ಹಾಡಿಯಲ್ಲಿ ಬುಧವಾರ ಸಂಜೆ ನಡೆದಿದೆ.


ಗಾಯಾಳು ಗೌರಮ್ಮ

ಹಾಡಿಯ ನಿವಾಸಿ ಗೋವಿಂದ (48 ವರ್ಷ) ಎಂಬಾತನೇ ಹೆಜ್ಜೇನು ದಾಳಿಯಿಂದ ಮೃತಪಟ್ಟ ದುರ್ದೈವಿಯಾಗಿದ್ದಾನೆ.

ಮಂಗಳವಾರ ಮೃತಪಟ್ಟಿದ್ದ ಹಾಡಿಯ ನಿವಾಸಿ ಕುಮಾರ ಎಂಬವರ ಅಂತ್ಯಸಂಸ್ಕಾರಕ್ಕೆ ತೆರಳಿದ ಸಂದರ್ಭ ಏಕಕಾಲದಲ್ಲಿ ಹೆಜ್ಜೇನು ಸ್ಥಳದಲ್ಲಿಯೇ ಇದ್ದ ಗೋವಿಂದ ಎಂಬವರ ಮೇಲೆ ದಾಳಿ ಮಾಡಿದ ಹಿನ್ನೆಲೆಯಲ್ಲಿ ಗೋವಿಂದ ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ.

ಹೆಜ್ಜೇನು ನೆರೆದಿದ್ದ ಜನರ ಮೇಲೆ ದಾಳಿಗೆ ಮುಂದಾದ ಸಂದರ್ಭದಲ್ಲಿ ಅಂತ್ಯಸಂಸ್ಕಾರದಲ್ಲಿ ಭಾಗಿಯಾಗಿದ್ದ ಜನರು ಶವವನ್ನು ಅಲ್ಲಿಯೇ ಬಿಟ್ಟು ಓಡಿ ಹೋಗಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಆದರೆ ಹೆಜ್ಜೇನು ದಾಳಿಗೆ ಒಳಗಾದ ಮುತ್ತಪ್ಪ, ಪಾರ್ವತಿ, ಅಣ್ಣಯ್ಯ ಪರಣ್ಣಿ, ಈರ ಸೇರಿದಂತೆ ಆರು ಮಂದಿಯನ್ನು ಕುಶಾಲನಗರದ ಸಮುದಾಯ ಆರೋಗ್ಯ ಕೇಂದ್ರಕ್ಕೆ ಚಿಕಿತ್ಸೆಗೆ ದಾಖಲಿಸಲಾಗಿದೆ.

ಹೆಜ್ಜೇನು ದಾಳಿಯಿಂದ ಮೃತಪಟ್ಟ ಗೋವಿಂದ ಅವರ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು. ಹಾಗೆ ಗಾಯಗೊಂಡಿರುವ ಹಾಡಿ ನಿವಾಸಿಗಳ ಚಿಕಿತ್ಸೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಆದಿವಾಸಿ ಸಂಘಟನೆಯ ರಕ್ಷಣಾ ವೇದಿಕೆ ಅಧ್ಯಕ್ಷ ಜೆ.ಕೆ.ಮುತ್ತ ಜಿಲ್ಲಾಡಳಿತವನ್ನು ಒತ್ತಾಯಿಸಿದ್ದಾರೆ.

ಇಂದು ಉದ್ಯೋಗ ಮೇಳ


ಮಡಿಕೇರಿ,ಏ.28–ಪಂಚಾಯತ್ ರಾಜ್ ಇಲಾಖೆ ವ್ಯಾಪ್ತಿಯ ಸಂಜೀವಿನಿ ಕೆಎಸ್‌ಆರ್‌ಎಲ್‌ಪಿಎಸ್‌ನ ಡಿಡಿಯುಜಿಜಿಕೆವೈ ಯೋಜನೆಯಡಿ ಅಜಾದಿ ಕಾ ಅಮೃತ ಮಹೋತ್ಸವ ಪ್ರಯುಕ್ತ ಗ್ರಾಮೀಣಾಭಿವೃದ್ಧಿ ಮಂತ್ರಾಲಯ (ಕೌಶಲ್ಯ) ನಿರ್ದೇಶನದಂತೆ ಉದ್ಯೋಗ ಮೇಳವು ಏ.29 ರಂದು ನಗರದ ಜಿಲ್ಲಾ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರ (ಐಟಿಐ ಕಾಲೇಜು)ದಲ್ಲಿ ನಡೆಯಲಿದೆ. ಉದ್ಯೋಗ ಮೇಳದಲ್ಲಿ ಹಲವು ಪ್ರತಿಷ್ಠಿತ ಕಂಪನಿಗಳು ಭಾಗವಹಿಸಲಿದೆ. ಸ್ಥಳದಲ್ಲಿಯೇ ಉದ್ಯೋಗಾವಕಾಶ ಕಲ್ಪಿಸಿ ತರಬೇತಿಗೆ ಆಯ್ಕೆ ಮಾಡಲಾಗುವುದು. ಆದ್ದರಿಂದ ಜಿಲ್ಲೆಯ 18 ರಿಂದ 35 ವರ್ಷದೊಳಗಿನ ನಿರುದ್ಯೋಗಿ ಯುವಕ ಯುವತಿಯರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವಂತೆ ಜಿ.ಪಂ.ಸಿಇಓ ಭಂವರ್ ಸಿಂಗ್ ಮೀನಾ ಅವರು ಕೋರಿದ್ದಾರೆ.

ಜಿಲ್ಲಾ ತರಬೇತಿ ಸಂಸ್ಥೆಯ ಕಚೇರಿ ಸ್ಥಳಾಂತರ

ಮಡಿಕೇರಿ,ಏ.28–ಕೊಡಗು ಜಿಲ್ಲಾ ತರಬೇತಿ ಸಂಸ್ಥೆ(ಡಿಟಿಐ)ಯನ್ನು ಸರ್ಕಾರಿ ಪದವಿ ಪೂರ್ವ ಕಾಲೇಜು ಎದುರಿನ ಗುಡ್ಡೆಮನೆ ಅಪ್ಪಯ್ಯಗೌಡ ರಸ್ತೆಯಲ್ಲಿರುವ ಖಾಸಗಿ ಕಟ್ಟಡದಿಂದ ತೆರವುಗೊಳಿಸಿ ಪ್ರವಾಸೋದ್ಯಮ ಇಲಾಖೆ ಕಟ್ಟಡದ ಮೊದಲನೆ ಮಹಡಿ, ಸ್ಟುವರ್ಟ್ ಹಿಲ್ ರಸ್ತೆ, ವಾರ್ತಾ ಭವನದ ಹತ್ತಿರ, ಮಡಿಕೇರಿ–571201 ಈ ವಿಳಾಸಕ್ಕೆ ಸ್ಥಳಾಂತರಿಸಲಾಗಿದೆ.

ಪಾಲಿಕೆ ಬಜೆಟ್ ಬಗ್ಗೆ ಆಡಳಿತ, ವಿಪಕ್ಷ ಸದಸ್ಯರಿಂದ ಮೆಚ್ಚುಗೆ

ಸಾವಿರ ಕೋಟಿ ಬಜೆಟ್ ಆಗಿದ್ದರೆ..., ವಾಟರ್ ಥೀಮ್ ಪಾರ್ಕ್ ಮಾಡಿ, ಬೇಗ ಕಾರ್ಯಗತಗೊಳಿಸಿ, ಡಾ. ಪುನೀತ್ ಪಾರ್ಕ್ ಮಾಡಿ, ದಬ್ಬಾಳಿಕೆ ಸರಿಯಲ್ಲ...



ಮೈಸೂರು,ಏ.28(ಎಂಟಿವೈ)– ಮೈಸೂರು ಮಹಾನಗರ ಪಾಲಿಕೆಯ ಹಣಕಾಸು ಸ್ಥಾಯಿ ಸಮಿತಿಯ ಅಧ್ಯಕ್ಷೆ ಎಂ.ಎಸ್. ಶೋಭಾ ಮೋಹನ್ ಎರಡನೇ ಬಾರಿ ಮಂಡಿಸಿದ ಪ್ರಸಕ್ತ ಸಾಲಿನ ಬಜೆಟ್ ಆಡಳಿತ ಹಾಗೂ ವಿರೋಧ ಪಕ್ಷಗಳ ಬಹುತೇಕ ಸದಸ್ಯರು ಕೆಲ ಸಲಹೆಗಳೊಂದಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಪಾಲಿಕೆಯ ಕೌನ್ಸಿಲ್ ಸಭಾಂಗಣದಲ್ಲಿ ಗುರುವಾರ ತೆರಿಗೆ ನಿರ್ಧಾರಣೆ ಹಣಕಾಸು ಮತ್ತು ಅಪೀಲುಗಳ ಸ್ಥಾಯಿ ಸಮಿತಿ ಅಧ್ಯಕ್ಷೆ ಎಂ.ಎಸ್.ಶೋಭಾ ಮಂಡಿಸಿದ 2022–23ನೇ ಸಾಲಿನಲ್ಲಿ 6,11 ಕೋಟಿ ರೂ.ಗಳ ಉಳಿತಾಯ ಬಜೆಟ್ ಮಂಡಿಸಿದ ಬಳಿಕ ಆಡಳಿತ ಹಾಗೂ ವಿರೋಧ ಪಕ್ಷದ ಹಲವು ಸದಸ್ಯರು ಬಜೆಟ್ ಮೇಲೆ ತಮ್ಮ ಅಭಿಪ್ರಾಯವನ್ನು ಮಂಡಿಸಿದರಲ್ಲದೆ, ಕೆಲವು ಸಲಹೆ ನೀಡಿದರು. ಅಲ್ಲದೆ, ಮಹತ್ತರ ನಿರೀಕ್ಷೆಯೊಂದಿಗೆ ಹಲವು ಯೋಜನೆಗಳನ್ನು ಪ್ರಕಟಿಸಿದ್ದಾರೆ. ಈ ಎಲ್ಲಾ ಯೋಜನೆಗಳು ಕಾರ್ಯಗತಗೊಳ್ಳಬೇಕು. ಕೇವಲ ಪುಸ್ತಕಕ್ಕೆ ಸೀಮಿತಗೊಳ್ಳಬಾರದು. ಎಲ್ಲಾ ಯೋಜನೆಗಳ ಅನುಷ್ಠಾನಕ್ಕೆ ಅಧಿಕಾರಿಗಳು ಮುಂದಾಗಬೇಕು ಎಂದು ಸಲಹೆ ನೀಡಿದರು.

ಸಾವಿರ ಕೋಟಿ ಬಜೆಟ್ ಮಾಡಬಹುದಿತ್ತು: ಮಾಜಿ ಮೇಯರ್ ಅಯೂಬ್ ಖಾನ್ ಮಾತನಾಡಿ, ನಗರಪಾಲಿಕೆಯಲ್ಲಿ ಇತಿಹಾಸ ನಿರ್ಮಾಣವಾಗಿದೆ. ಒಂದೇ ಅವಧಿಯಲ್ಲಿ ಎರಡು ಬಾರಿ ಬಜೆಟ್ ಮಂಡಿಸಿ ದಾಖಲೆ ನಿರ್ಮಿಸಿದ್ದಕ್ಕಾಗಿ ಹಣಕಾಸು ಸ್ಥಾಯಿ ಸಮಿತಿಯ ಅಧ್ಯಕ್ಷೆ ಶೋಭಾ ಅವರಿಗೆ ಅಭಿನಂದನೆಗಳು. ಈ ಬಜೆಟ್‌ನ್ನು ಎರಡು ತಿಂಗಳ ಹಿಂದೆ ಮಂಡಿಸಬೇಕಾಗಿತ್ತು. ಸಕಾಲಕ್ಕೆ ಮಂಡಿಸದ ಕಾರಣ ಅಭಿವೃದ್ಧಿ ಕಾರ್ಯ ಕುಂಠಿತಗೊಂಡಿದೆ. ಬಜೆಟ್ ಮಂಡಿಸಲು ಸರ್ಕಾರ ಅನುಮತಿ ನೀಡದೆ, ನಿಮ್ಮ ಆಕ್ಟ್‌ನಂತೆ ಹೆಜ್ಜೆ ಇಡುವಂತೆ ಸೂಚಿಸಿತ್ತು. ಈ ಹಿನ್ನೆಲೆಯಲ್ಲಿ ಕೆಎಂಸಿ ಆಕ್ಟ್ ಪ್ರಕಾರ ಬಜೆಟ್ ಮಂಡಿಸಲಾಗುತ್ತಿದೆ ಎಂದರು.

ಬಜೆಟ್ ಮಂಡನೆಗೆ ಅವಕಾಶ ಇದ್ದರೂ ಅಧಿಕಾರಿಗಳು ಅದನ್ನು ಮಾಡಲಿಲ್ಲ. ಅಧಿಕಾರಿ ವರ್ಗಗಳ ತಪ್ಪಿನ ಫಲವಾಗಿ ಪಾಲಿಕೆ ಸಮಸ್ಯೆ ಎದುರಿಸಬೇಕಾಯಿತು. ಇದರಿಂದ ಎರಡು ತಿಂಗಳು ವಿಳಂಬವಾಗಿ ಮಂಡನೆಯಾಗುತ್ತಿರುವ ಬಜೆಟ್ ಮೈಸೂರಿನ ಅಭಿವೃದ್ಧಿ ದೃಷ್ಟಿಯಿಂದ ಕೂಡಿರದೇ, ಅಧಿಕಾರಿಗಳ ಸಂಬಳ ಮಂಜೂರಿಗಾಗಿ ಬಜೆಟ್ ಮಂಡಿಸಲು ಕ್ರಮ ಕೈಗೊಂಡಿದ್ದಾರೆ ಎಂಬುದು ನಮ್ಮ ಭಾವನೆ. ಇನ್ನಾದರೂ ಇಂತಹ ತಪ್ಪು ಪುನಾರಾವರ್ತನೆಯಾಗಬಾರದು ಎಂದು ಸಲಹೆ ನೀಡಿದರು.

ಪ್ರಸಕ್ತ ಸಾಲಿನ ಬಜೆಟ್ ದೊಡ್ಡ ಗಾತ್ರದ್ದಾಗಿದೆ. ಇನ್ನಷ್ಟು ಕಾರ್ಯಕ್ರಮ ರೂಪಿಸಿದ್ದರೆ ಈ ಸಾಲಿನ ಬಜೆಟ್ ಒಂದು ಸಾವಿರ ಕೋಟಿ ರೂ. ಮೌಲ್ಯದ ಆಯವ್ಯಯ ಆಗುತ್ತಿತ್ತು ಅದು, ದಾಖಲೆಯೂ ಆಗುತ್ತಿತ್ತು. ನೀರಿನ ಬಡ್ಡಿಯನ್ನು ಮನ್ನಾ ಮಾಡಲು ಪ್ರಸ್ತಾಪಿಸಿದ್ದರೂ ಸರ್ಕಾರದ ಅನುಮೋದನೆ ಸಿಗುವ ತನಕ ಸಾರ್ವಜನಿಕರಿಗೆ ಹೊರೆಯಾಗಲಿದೆ. ಹಾಗಾಗಿ, ನಗರಪಾಲಿಕೆ ಬಡ್ಡಿ ಕಟ್ಟಿಸಿಕೊಳ್ಳದೆ ಅಸಲು ಕಟ್ಟಿಸಿಕೊಳ್ಳುತ್ತೇವೆ ಎಂದು ಹೇಳಿದರೆ ಉತ್ತಮವಾಗಲಿದೆ. ರಸ್ತೆ ಗುಂಡಿ ಮುಚ್ಚು ಯಂತ್ರ ಖರೀದಿ ಮಾಡಲು ಮುಂದಾಗಿರುವುದು ಒಳ್ಳೆಯ ನಿರ್ಧಾರ. ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷರು ಹಲವು ಕನಸಿನೊಂದಿಗೆ ಬಜೆಟ್ ಮಂಡಿಸಿದ್ದಾರೆ. ಅವರ ಕನಸನ್ನು ನನಸು ಮಾಡುವುದು ಅಧಿಕಾರಿಗಳ ಕೈಯ್ಯಲಿದೆ. ಪಾಲಿಕೆ ಆಯುಕ್ತರು ಮನಸ್ಸು ಮಾಡಿದರೆ, ಬಜೆಟ್‌ನಲ್ಲಿ ಘೋಷಿಸಿರುವ ಯೋಜನೆಗಳನ್ನು ಸಕಾಲದಲ್ಲಿ ಅನುಷ್ಠಾನಗೊಳಿಸಬಹುದು ಎಂದು ಅಭಿಪ್ರಾಯಪಟ್ಟರು.

ವಾಟರ್ ಥೀಮ್ ಪಾರ್ಕ್ ಮಾಡಿ: ಆಡಳಿತ ಪಕ್ಷದ ನಾಯಕ ಶಿವಕುಮಾರ್ ಮಾತನಾಡಿ, ಮೈಸೂರಿನ ಜನರಿಗೆ ಕುಡಿಯುವ ನೀರು ಪೂರೈಸುವ ನಿಟ್ಟಿನಲ್ಲಿ ಮಹಾರಾಜರ ಕಾಲದಲ್ಲಿ ವಾಣಿವಿಲಾಸ ನೀರು ಸರಬರಾಜು ಮಂಡಳಿಯನ್ನು ಸ್ಥಾಪಿಸಿದ್ದಾರೆ. ಅದರ ಮಹತ್ವವನ್ನು ಹಾಗೂ ಅದರ ಕಾರ್ಯ ವೈಖರಿಯನ್ನು ಜನರಿಗೆ ತಿಳಿಸುವ ಅಗತ್ಯವಿದೆ. ವಾಣಿವಿಲಾಸ ನೀರು ಸರಬರಾಜು ಕೇಂದ್ರದಲ್ಲಿ ವಾಟರ್ ಥೀಮ್ ಪಾರ್ಕ್ ಮಾಡಬೇಕು. ಮೈಸೂರು ನಗರಕ್ಕೆ ಕುಡಿಯುವ ನೀರಿನ ಯೋಜನೆ ಆರಂಭದ ದಿನಗಳು, ಯೋಜನೆ ಯಾವ ರೀತಿ ಕಾರ್ಯಗತವಾಯಿತು. ಯಾವ ರೀತಿ ಮಾಡಲಾಯಿತ್ತೆಂಬ ವಿವರವುಳ್ಳ ಪಾರ್ಕ್ ಮಾಡಬೇಕು ಎಂದರು.

ಇಡೀ ದೇಶದಲ್ಲೇ ಮೊದಲಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಲು ರಾಜರ ಕಾಲದಲ್ಲಿ ವಾಣಿವಿಲಾಸ ಕೇಂದ್ರವನ್ನು ಸ್ಥಾಪಿಸಿದ್ದರಿಂದ ಯುವ ಜನರಿಗೆ ತಿಳಿಸುವ ಕೆಲಸ ಆಗಬೇಕು. ಅದರ ಸಮೀಪದಲ್ಲಿಯೇ ರೈಲ್ವೆ ಮ್ಯೂಸಿಯಂ ಇದೆ. ಅದಕ್ಕೆ ಪ್ರವಾಸಿಗರು ಹೆಚ್ಚಾಗಿ ಬರುತ್ತಿದ್ದಾರೆ. ಇದರಿಂದ ವಾಟರ್ ಥೀಮ್ ಪಾರ್ಕ್ ಮಾಡಿದರೆ ಮತ್ತೊಂದು ಪ್ರವಾಸಿ ಕೇಂದ್ರವೂ ಆಗಲಿದೆ. ಕುಡಿಯುವ ನೀರಿನ ಬಡ್ಡಿಯನ್ನು ಮನ್ನಾ ಮಾಡಿ ಅಸಲು ವಸೂಲಿ ಮಾಡುವ ತೀರ್ಮಾನ ಮಾಡಿರುವುದು ಸ್ವಾಗತಾರ್ಹ. ಇದರಿಂದ ಪಾಲಿಕೆಗೆ ಆದಾಯ ಬರಲಿದೆ. 220 ಕೋಟಿಯಲ್ಲಿ 70 ಕೋಟಿ ರೂ. ಬಡ್ಡಿ ಸೇರಿಕೊಂಡಿದೆ. ಆಡಳಿತದಲ್ಲಿ ಸುಧಾರಣೆ ಮಾಡಲು ಇ–ಆಫೀಸ್ ಸಾಫ್ಟ್‌ವೇರ್ ತಂತ್ರಾಂಶವನ್ನು ತರಲು ಮುಂದಾಗಿರುವುದರಿಂದ ಅನುಕೂಲವಾಗಲಿದೆ ಎಂದರು.

ಆದಷ್ಟು ಬೇಗ ಕಾರ್ಯಗತಗೊಳಿಸಿ: ವಿರೋಧ ಪಕ್ಷದ ನಾಯಕಿ ಅಶ್ವಿನಿ ಅನಂತು ಮಾತನಾಡಿ, ಎರಡನೇ ಬಾರಿಗೆ ಬಜೆಟ್ ಮಂಡಿಸುವ ಅವಕಾಶ ಎಂ.ಎಸ್.ಶೋಭಾ ಅವರಿಗೆ ಸಿಕ್ಕಿದ್ದಕ್ಕೆ ವೈಯಕ್ತಿಕವಾಗಿ ತುಂಬಾ ಖುಷಿಯಾಗಿದೆ. ಪಾಲಿಕೆ ಭವನ ನಿರ್ಮಾಣಕ್ಕೆ ಅನುದಾನ ಮೀಸಲಿಟ್ಟಿರುವುದು ಉತ್ತಮ ಯೋಜನೆಯಾಗಿದೆ. ರಸ್ತೆ ಗುಂಡಿ ಮುಚ್ಚುವ ಯಂತ್ರವನ್ನು ಖರೀದಿಸಲು ಅನುದಾನ ಕಾಯ್ದಿರಿಸಿರುವ ಕಾರಣ ಆದಷ್ಟು ಬೇಗ ಕಾರ್ಯರೂಪಕ್ಕೆ ತರಬೇಕು. ಪಾಲಿಕೆ ವತಿಯಿಂದ ಕಾರ್ಯಕ್ರಮ ಮಾಡಿದರೆ ಸೂಕ್ತ ಜಾಗ ಸಿಗದೆ ತೊಂದರೆ ಆಗುತ್ತಿತ್ತು. ಈ ಭವನ ನಿರ್ಮಾಣವಾದರೆ ಹಲವು ಕಾರ್ಯಕ್ರಮಗಳನ್ನು ನಡೆಸಲು ಅನುಕೂಲವಾಗಲಿದೆ ಎಂದರು.

ಮಲತಾಯಿ ಧೋರಣೆ ಸರಿಯಲ್ಲ: ಮಾಜಿ ಮೇಯರ್ ಆರಿಫ್ ಹುಸೇನ್ ಮಾತನಾಡಿ, ರಾಜ್ಯ ಸರ್ಕಾರ ಮೈಸೂರಿನ ಎನ್.ಆರ್.ಕ್ಷೇತ್ರವನ್ನು ಅಭಿವೃದ್ಧಿಯಲ್ಲಿ ಕಡೆಗಾಣಿಸಿದೆ. ಮೈಸೂರಿನ ಬೇರೆ ಕ್ಷೇತ್ರಗಳ ಅಭಿವೃದ್ಧಿಗೆ ನೀಡಿದ ಅನುಧಾನದಲ್ಲಿ ಅರ್ಧದಷ್ಟು ಅನುದಾನ ಎನ್.ಆರ್.ಕ್ಷೇತ್ರಕ್ಕೆ ನೀಡಿಲ್ಲ. ಯಾಕೆ ಈ ಮಲತಾಯಿ ಧೋರಣೆ. ಒಂದು ಕಣ್ಣಿಗೆ ಬೆಣ್ಣೆ, ಮತ್ತೊಂದು ಕಣ್ಣಿಗೆ ಸುಣ್ಣ ಹಚ್ಚುವುದು ಸರಿಯಲ್ಲ ಎಂದು ವಿಷಾದಿಸಿದರಲ್ಲದೆ, ಸದಸ್ಯರ ಗಮನಕ್ಕೆ ತೆಗೆದುಕೊಳ್ಳದೆ ಬಜೆಟ್ ತಯಾರಿಸಲಾಗಿದೆ. ತಮ್ಮ ಅವಧಿ ಮುಂದುವರಿಯಲು ಅವಕಾಶ ಇದ್ದರೆ ಸಭೆ ಕರೆಯಲು ಯಾಕೆ ಸಾಧ್ಯವಾಗಲಿಲ್ಲ? ಅಧಿಕಾರಿಗಳು ತಮ್ಮ ವೇತನಕ್ಕಾಗಿ ಅನುಮೋದನೆ ಪಡೆಯಲು ಬಜೆಟ್ ಮಂಡಿಸಿದ್ದಾರೆ ಎಂದರು.

ಜನರು ಕೊಡುವ ತೆರಿಗೆ ಹಣದಿಂದ ಸಾಲ ತೀರಿಸಲಾಗುತ್ತಿದೆಯೇ ಹೊರತು ನೀವು ಸಾಲ ತೀರಿಸಿಲ್ಲ. ಸ್ಮಶಾನ, ಉದ್ಯಾನವನ, ಪಾರ್ಕ್, ಖಾಲಿ ಜಾಗಕ್ಕೆ ಶುಲ್ಕ ಹಾಕಲಾಗುತ್ತಿದೆ. ಅಂಕಿ ಅಂಶಗಳನ್ನು ತೋರಿಸಲಾಗಿದೆ. ನಗರದ ಜನರ ಅಭಿವೃದ್ಧಿಗೆ ಪೂರಕವಾದ ಯೋಜನೆಗಳನ್ನು ನೀಡಿಲ್ಲ. ವಾರ್ಡ್‌ಗೆ ಹತ್ತು ಲಕ್ಷ ರೂಪಾಯಿ ನೀಡಿ ಗುಂಡಿ ಮುಚ್ಚಲು ಹೇಳಲಾಗಿತ್ತು. ಆದರೆ ಈ ತನಕ ಸಮರ್ಪಕವಾಗಿ ಗುಂಡಿ ಮುಚ್ಚಿಲ್ಲ. ಮೇಯರ್ ಅವಧಿ ಮುಂದುವರಿಕೆಗೆ ಅವಕಾಶ ಇದ್ದರೆ ಸಭೆ ಮಾಡಲು ಅವಕಾಶ ಇರುತ್ತದೆ ಎನ್ನುವುದು ತಿಳಿಯಲು ಸಾಧ್ಯವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕಳೆದ ಬಾರಿಯಂತಾಗಬಾರದು: ಸದಸ್ಯ ಕೆ.ವಿ.ಶ್ರೀಧರ್ ಮಾತನಾಡಿ, ನಗರದ ಅಭಿವೃದ್ಧಿಯ ಕಾಳಜಿಯನ್ನು ಇಟ್ಟುಕೊಂಡು ಬಜೆಟ್ ಮಂಡಿಸಲಾಗಿದೆ. ಈ ಬಜೆಟ್ ಸಕಾರಾತ್ಮಕವಾಗಿದೆ. ಹಲವು ಯೋಜನೆಗಳನ್ನು ರೂಪಿಸಿರುವುದರಿಂದ ಸಮಯಕ್ಕೆ ಸರಿಯಾಗಿ ಕಾರ್ಯರೂಪಕ್ಕೆ ತರುವ ಕೆಲಸ ಆಗಬೇಕು. ಕಳೆದ ಬಾರಿ ಹೇಳಿದ್ದರಲ್ಲಿ ಒಂದೇ ಒಂದು ಅನುಷ್ಠಾನಕ್ಕೆ ತರಲು ಸಾಧ್ಯವಾಗಿಲ್ಲ. ಈ ಸಾಲಿನ ಬಜೆಟ್ ಕಳೆದ ಸಾಲಿನಂತಾಗಬಾರದು ಎಂದರು.

ಡಾ.ಪುನೀತ್ ಪಾರ್ಕ್: ಎಸ್‌ಬಿಎಂ ಮಂಜು ಮಾತನಾಡಿ, ಬಜೆಟ್‌ನಲ್ಲಿ ಎಲ್ಲಾ ಕ್ಷೇತ್ರಗಳಿಗೂ ಆದ್ಯತೆ ನೀಡಲಾಗಿದೆ. ಪವರ್ ಸ್ಟಾರ್ ಡಾ.ಪುನೀತ್ ರಾಜ್‌ಕುಮಾರ್ ಅವರ ಹೆಸರಿನಲ್ಲಿ ಉದ್ಯಾನವನ ನಿರ್ಮಾಣ ಮಾಡಬೇಕು. ಕುಂಬಾರಕೊಪ್ಪಲು, ಗೋಕುಲಂ, ಬೃಂದಾವನ ಬಡಾವಣೆಗಳಲ್ಲಿ ಕ್ರೀಡಾಂಗಣ ನಿರ್ಮಿಸಲು ಕ್ರಮ ಕೈಗೊಳ್ಳಬೇಕು. ಪರಿಸರ ಸ್ನೇಹಿ ವಾಹನ ಬಳಕೆ ಹೆಚ್ಚಿಸಬೇಕು. ಮೈಸೂರಿನ ಸರ್ವತೋಮುಖ ಅಭಿವೃದ್ಧಿಗೆ ರೂಪಿಸಿರುವ ಯೋಜನೆಗಳನ್ನು ಕಾರ್ಯಗತ ಮಾಡಲು ಮುಂದಾಗಬೇಕು. ಪಕ್ಷಾತೀತವಾಗಿ ಆಯವ್ಯಯವನ್ನು ಮೆಚ್ಚುಗೆ ವ್ಯಕ್ತಪಡಿಸಲಾಗಿದೆ. ಕಳೆದ ವರ್ಷ ರೂಪಿಸಿದ್ದ ಕೆಲವು ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಎಡವಿರುವ ಕಾರಣ ಈ ಬಾರಿ ಅದಕ್ಕೆ ಅವಕಾಶ ಮಾಡಿಕೊಡಬಾರದು. ನಟ ಪುನೀತ್ ಅವರ ಹೆಸರಿನಲ್ಲಿ ಉದ್ಯಾನವನ ನಿರ್ಮಾಣ ಮಾಡುವ ಬಗ್ಗೆ ಚಿಂತನೆ ನಡೆಸಬೇಕು. ಗೋಕುಲಂ ಸ್ಮಶಾನವನ್ನು ಅಭಿವೃದ್ಧಿಪಡಿಸುವಂತೆ ಮನವಿ ಮಾಡಿದರು.

ದಬ್ಬಾಳಿಕೆ ಮಾಡುವುದು ಸರಿಯಲ್ಲ: ಸದಸ್ಯ ಆರ್.ನಾಗರಾಜು ಮಾತನಾಡಿ, ತೆರಿಗೆ ವಸೂಲಿಗೆ ಗಮನಹರಿಸುವ ಬದಲಿಗೆ ಬೇರೆ ಬೇರೆ ರೂಪದಲ್ಲಿ ಶೇ.3ರಷ್ಟು ತೆರಿಗೆ ಏರಿಸಲಾಗಿದೆ. ದಬ್ಬಾಳಿಕೆ ಮಾಡಿ ವಸೂಲಿ ಮಾಡಲು ಹೊರಟಿರುವುದು ಸರಿಯಲ್ಲ. ನೀರಿನ ಬಡ್ಡಿ ಮನ್ನಾ ಮಾಡಲು ಹೊರಟಿರುವ ಕೆಲಸ ಸಫಲವಾಗಬೇಕಿದೆ. ರಾಜಕುಮಾರ್ ಉದ್ಯಾನವನದಲ್ಲಿ ಯೋಗ ಭವನ ನಿರ್ಮಾಣ ಮಾಡುವ ಕಾಮಗಾರಿ ತ್ವರಿತಗತಿಯಲ್ಲಿ ಆರಂಭಿಸಬೇಕು ಎಂದರು.

ಡಾ.ವಿಷ್ಣುವರ್ಧನ್ ಪಾರ್ಕ್‌ಗೆ ಕಾಯಕಲ್ಪ ನೀಡಿ: ಸದಸ್ಯ ಮ.ವಿ.ರಾಮಪ್ರಸಾದ್ ಮಾತನಾಡಿ, ಮೈಸೂರಿನಲ್ಲಿರುವ ಡಾ.ರಾಜ್‌ಕುಮಾರ್ ಉದ್ಯಾನವನದಲ್ಲಿ ಡಾ.ರಾಜ್‌ಕುಮಾರ್ ಅವರ ಪ್ರತಿಮೆ ನಿರ್ಮಾಣವಾಗಿದೆ. ಅದರ ಮುಂದೆ ಇರುವ ಡಾ.ವಿಷ್ಣುವರ್ಧನ್ ಪಾರ್ಕ್ ನೆನೆಗುದಿಗೆ ಬಿದ್ದಿದೆ. ಅವರ ಅಭಿಮಾನಿಗಳು ಹಲವು ಬಾರಿ ಮನವಿ ಸಲ್ಲಿಸಿದ್ದಾರೆ. ಇನ್ನಾದರೂ ಡಾ.ವಿಷ್ಣುವರ್ಧನ್ ಪಾರ್ಕ್ ಅಭಿವೃದ್ಧಿಗೆ ಕ್ರಮ ಕೈಗೊಂಡು ಹಿರಿಯ ಕಲಾವಿದರಿಗೆ ಗೌರವ ನೀಡಬೇಕು ಎಂದು ಮನವಿ ಮಾಡಿದರು.

ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿ ಬಜೆಟ್ ತಯಾರಿಸಬೇಕು. ಪರಿಪೂರ್ಣ ಯಶಸ್ಸು ಕಾಣಲು ಪೂರ್ವಪರವಾಗಿ ಕಾರ್ಯಕ್ರಮ ರೂಪಿಸಬೇಕು. ಯಾವ್ಯಾವ ವಾರ್ಡ್‌ಗಳಲ್ಲಿ ಯಾವ್ಯಾವ ಕೆಲಸ ಆಗಬೇಕು ಎನ್ನುವುದನ್ನು ಗಮನಿಸಬೇಕು. ಒಂದು ರಸ್ತೆಯನ್ನು ಕಟಿಂಗ್ ಮಾಡಿದಾಗ ಅದನ್ನು ರಿಪೇರಿ ಮಾಡಿ ನಿರ್ವಹಣೆ ಮಾಡುವ ಜವಾಬ್ದಾರಿ ಹೊರಿಸಬೇಕು. ಉದ್ಯಾನವನಗಳಲ್ಲಿ ಕಸ ಗುಡಿಸುವ ಸಿಬ್ಬಂದಿ ಅಗತ್ಯ ಇದ್ದಾರೆ. ಅಭಿವೃದ್ಧಿಗೆ ಪೂರಕವಾಗಿ ಸಿಬ್ಬಂದಿ ಇಲ್ಲದಿದ್ದರೆ ತೊಂದರೆಯಾಗಲಿದೆ. ತ್ಯಾಜ್ಯ ಕಡಿಮೆ ಮಾಡಬೇಕು. ಬಡ್ಡಿ ವಿಧಿಸದೆ ನೇರವಾಗಿ ಅಸಲು ವಸೂಲಿ ಮಾಡುವ ಕೆಲಸ ಆಗಬೇಕು ಎಂದು ಸಲಹೆ ನೀಡಿದರು.

ನಗರ ಪಾಲಿಕೆ ಸದಸ್ಯರ ಒಕ್ಕೊರಲ ಆಗ್ರಹ

ಸ್ಮಶಾನ ಅಭಿವೃದ್ಧಿಗೆ 'ಇಂದಿರಾ ಕ್ಯಾಂಟಿನ್' ಅನುದಾನ ಬಳಕೆ!

ಮೈಸೂರು, ಏ.28(ಎಸ್‌ಬಿಡಿ)– ಮೈಸೂರು ನಗರ ಪಾಲಿಕೆ ಬಜೆಟ್‌ನಲ್ಲಿ 'ಇಂದಿರಾ ಕ್ಯಾಂಟಿನ್' ನಿರ್ವಹಣೆಗಿಟ್ಟಿರುವ ಅನುದಾನದ ಅರ್ಧದಷ್ಟು ಮೊತ್ತವನ್ನು ಸ್ಮಶಾನಗಳ ಅಭಿವೃದ್ಧಿಗೆ ಬಳಸಿಕೊಳ್ಳಲು ನಿರ್ಧರಿಸಲಾಯಿತು.

ಸೆರಗೊಡ್ಡಿ ಬೇಡಿದ ಸದಸ್ಯೆ

ದುಃಖದಲ್ಲಿ ಅಂತ್ಯ ಸಂಸ್ಕಾರಕ್ಕಾಗಿ ಸ್ಮಶಾನಕ್ಕೆ ಬರುವ ಜನರಿಗೆ ಕನಿಷ್ಠ ಸೌಕರ್ಯ ಕಲ್ಪಿಸಿಲ್ಲ. ಸ್ವಚ್ಛತೆ, ನೀರು, ವಿದ್ಯುತ್ ಯಾವುದೂ ಇಲ್ಲ. ಪುಂಡಪೋಕರಿಗಳು ಸ್ಮಶಾನಗಳನ್ನು ಅಡ್ಡ ಮಾಡಿಕೊಂಡಿದ್ದಾರೆ. ಅಂತಹವರ ಉಪಟಳದ ಬಗ್ಗೆ ಜನ ಹಲವು ಬಾರಿ ದೂರಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ ಸದಸ್ಯೆ ಪ್ರೇಮಾ ಶಂಕರೇಗೌಡ, ದಯವಿಟ್ಟು ಸ್ಮಶಾನಗಳನ್ನು ಸ್ವಚ್ಛ ಮಾಡಿಸಿ, ಕಾವಲುಗಾರರನ್ನು ನೇಮಿಸಿ, ಕನಿಷ್ಠ ಸೌಕರ್ಯ ಕಲ್ಪಿಸಿಕೊಡಿ ಎಂದು ಸೆರಗೊಡ್ಡಿ ಬೇಡಿಕೊಂಡರು.

ಬಜೆಟ್ ಲೆಕ್ಕ ಶೀರ್ಷಿಕೆ ಮೇಲಿನ ಚರ್ಚೆ ವೇಳೆ ಸ್ಮಶಾನಗಳ ಸೌಕರ್ಯಕ್ಕೆ ಕೇವಲ 1 ಕೋಟಿ ರೂ. ಮೀಸಲಿಟ್ಟಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಸದಸ್ಯರು, ಸ್ಮಶಾನಗಳಲ್ಲಿರುವ ಸಮಸ್ಯೆಗಳನ್ನು ಬಿಚ್ಚಿಟ್ಟರು. ಅಲ್ಲದೆ ಕಳೆದ ಸಾಲಿನಲ್ಲಿ ಇಂದಿರಾ ಕ್ಯಾಂಟಿನ್ ನಿರ್ವಹಣೆಗೆ 98 ಲಕ್ಷ ನೀಡಿದ್ದು, ಆದರೆ ಈ ಬಾರಿ ಬಜೆಟ್‌ನಲ್ಲಿ 4 ಕೋಟಿ ರೂ. ಮೀಸಲಿಟ್ಟಿರುವ ಬಗ್ಗೆ ಪ್ರಶ್ನಿಸಿದರು.



ಇದಕ್ಕೆ ಸ್ಪಷ್ಟನೆ ನೀಡಿದ ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ, ನಗರ ವ್ಯಾಪ್ತಿಯಲ್ಲಿ ಒಟ್ಟು 40 ಸ್ಮಶಾನಗಳಿವೆ. ಮೇಯರ್ ಅವರು ಸ್ಮಶಾನಗಳ ಅಭಿವೃದ್ಧಿ ಚಿಂತನೆಯನ್ನು ವ್ಯಕ್ತಪಡಿಸಿದ್ದರ ಹಿನ್ನೆಲೆಯಲ್ಲಿ ಕಳೆದ ತಿಂಗಳೇ ಮೇಯರ್ ಹಾಗೂ ನಾನು 20 ಸ್ಮಶಾನಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದೇವೆ. ಇನ್ನುಳಿದ ಸ್ಮಶಾನಗಳ ಸ್ಥಿತಿಗತಿಯನ್ನು ಅಧಿಕಾರಿಗಳು ಪರಿಶೀಲಿಸಿದ್ದಾರೆ. ಈಗಾಗಲೇ 2.50 ಕೋಟಿ ರೂ ಅಂದಾಜು ಮೊತ್ತದ ಕ್ರಿಯಾ ಯೋಜನೆಯೊಂದಿಗೆ ಸ್ಮಶಾನಗಳ ಅಭಿವೃದ್ಧಿಗೆ ಕ್ರಮ ವಹಿಸಲಾಗಿದೆ ಎಂದು ತಿಳಿಸಿದರು.

ಇಂದಿರಾ ಕ್ಯಾಂಟಿನ್ ನಿರ್ವಹಣೆಗಿಟ್ಟಿರುವ ಹಣದ ವಿಚಾರವಾಗಿ ಮಾತನಾಡಿ, ಹಿಂದಿನ ಸಾಲಿನಲ್ಲಿ ಎರಡೂವರೆ ಕೋಟಿ ರೂ. ಬಿಲ್ ಕಳುಹಿಸಿದ್ದರು. ಆದರೆ ನಾವು ನಿಖರ ಮಾಹಿತಿ ಆಧಾರದಲ್ಲಿ 98 ಲಕ್ಷರೂ.ಗಳನ್ನು ಮಾತ್ರ ಪಾವತಿಸಿದ್ದೇವೆ. ನಿರೀಕ್ಷಿತ ಗ್ರಾಹಕರ ಸಂಖ್ಯೆಗೆ ಅನುಗುಣವಾಗಿ ಈ ಬಾರಿ ಬಜೆಟ್‌ನಲ್ಲಿ ಹಣ ಮೀಸಲಿಡಲಾಗಿದೆ. ಆದರೆ ಈಗಿನ ಗ್ರಾಹಕರ ಸಂಖ್ಯೆ ಆಧರಿಸಿದರೆ ಒಂದೂವರೆ ಕೋಟಿ ರೂ. ಸಾಕಾಗಬಹುದು. ಹಾಗಾಗಿ ಇಂದಿರಾ ಕ್ಯಾಂಟಿನ್ ನಿರ್ವಹಣೆಗಿಟ್ಟಿರುವ ಅನುದಾನದಲ್ಲಿ 2 ಕೋಟಿ ರೂ.ಗಳನ್ನು ಸ್ಮಶಾನ ಅಭಿವೃದ್ಧಿಗೆ ಬಳಸಿಕೊಳ್ಳಬಹುದು ಎಂದು ತಿಳಿಸಿದರು.

ಇದಕ್ಕೆ ಸಭೆಯಲ್ಲಿ ಸಹಮತ ವ್ಯಕ್ತವಾಗಿದ್ದರಿಂದ ಇಂದಿರಾ ಕ್ಯಾಂಟಿನ್ ನಿರ್ವಹಣೆಗಿಟ್ಟಿರುವ ಅನುದಾನ ಪರಿಷ್ಕರಣೆಗೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ ಅವರು, ಪಾಲಿಕೆ ಮುಖ್ಯ ಹಣಕಾಸು ಅಧಿಕಾರಿಗೆ ಸೂಚನೆ ನೀಡಿದರು.

ಒಕ್ಕೊರಲ ಆಗ್ರಹ: ಇದಕ್ಕೂ ಮುನ್ನ ಸಮಸ್ಯೆಗಳ ಆಗರವಾಗಿರುವ ಸ್ಮಶಾನಗಳ ಸೌಕರ್ಯಕ್ಕೆ ಕೇವಲ 1 ಕೋಟಿ ರೂ. ಮೀಸಲಿಟ್ಟಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಸದಸ್ಯರು, ಸ್ಮಶಾನಗಳಿಗೆ ಸೌಲಭ್ಯ ಕಲ್ಪಿಸಲು ಒಕ್ಕೊರಲಿನಿಂದ ಆಗ್ರಹಿಸಿದರು.

ಸ್ಮಶಾನಗಳ ಅಭಿವೃದ್ಧಿಗಾಗಿ ಸಾರ್ವಜನಿಕರಿಂದ 1.50 ಕೋಟಿ ರೂ. ಸೆಸ್ ಸಂಗ್ರಹಿಸಲಾಗುತ್ತಿದೆ. ಆದರೆ ಸ್ಮಶಾನಗಳಲ್ಲಿ ಸ್ವಚ್ಛತೆ, ನೀರು, ವಿದ್ಯುತ್, ಶೌಚಾಲಯ ಇನ್ನಿತರ ಕನಿಷ್ಠ ಸೌಕರ್ಯಗಳಿಲ್ಲ. ಕಾವಲುಗಾರರಿಲ್ಲದ ಕಾರಣ ಜೂಜಾಟ, ಮದ್ಯಸೇವನೆ ಅಡ್ಡವಾಗಿದ್ದು, ಈ ವಿಚಾರಕ್ಕೆ ಕೆಲ ಸ್ಮಶಾನಗಳಲ್ಲಿ ಗಲಾಟೆಯಾಗಿ ಹತ್ಯೆ ನಡೆದಿವೆ. ತೆರಿಗೆ ಪಾವತಿಸುವ ಸಾರ್ವಜನಿಕರ ತೀಕ್ಷ್ಣ ಪ್ರಶ್ನೆಗಳಿಗೆ ಉತ್ತರಿಸಲು ಸಾಧ್ಯವಾಗುತ್ತಿಲ್ಲ ಎಂದು ಸತೀಶ್, ರಂಗಸ್ವಾಮಿ, ರವೀಂದ್ರ ಕೆ.ವಿ.ಶ್ರೀಧರ್, ಎಸ್‌ಬಿಎಂ ಮಂಜು, ಪ್ರೇಮಾ ಶಂಕರೇಗೌಡ, ಗೋಪಿ, ವೇದಾವತಿ, ಪೈಲ್ವಾನ್ ಶ್ರೀನಿವಾಸ್ ಸೇರಿದಂತೆ ಅನೇಕ ಸದಸ್ಯರು ಬೇಸರ ವ್ಯಕ್ತಪಡಿಸಿದರು.

ಸ್ಮಶಾನಗಳ ನಿರ್ವಹಣೆಗೆ ಸಮಿತಿ ರಚಿಸಿ, ನೋಡಲ್ ಅಧಿಕಾರಿಯನ್ನು ನೇಮಕ ಮಾಡುವಂತೆ ಸದಸ್ಯೆ ಡಾ.ಅಶ್ವಿನಿ ಆಗ್ರಹಿಸಿದರು. ಸ್ಮಶಾನ ನಿರ್ವಹಣೆಗೆ ಸಾರ್ವಜನಿಕರಿಂದ ಸಂಗ್ರಹಿಸುವ ಸೆಸ್ ಅನ್ನು ಸಂಪೂರ್ಣವಾಗಿ ಅದೇ ಉದ್ದೇಶಕ್ಕೆ ಬಳಸಿಕೊಳ್ಳಬೇಕು ಎಂದು ಬಿ.ವಿ.ಮಂಜುನಾಥ್ ಆಗ್ರಹಿಸಿದರು. ಗೋಕುಲಂ ಸ್ಮಶಾನದ ಸುತ್ತ ವಸತಿ ಪ್ರದೇಶವಿದೆ. ಸ್ಮಶಾನದಲ್ಲಿ ಮೃತದೇಹ ಸುಡುವಾಗ ಹೊಗೆ ಎಲ್ಲೆಡೆ ಆವರಿಸುವುದರಿಂದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಹಾಗಾಗಿ ಇದನ್ನು ವಿಶೇಷ ಪ್ರಕರಣವಾಗಿ ಪರಿಗಣಿಸಿ, ಹೈಟೆಕ್ ಸ್ಮಶಾನವಾಗಿ ಅಭಿವೃದ್ಧಿಪಡಿಸಲು ವಿಶೇಷ ಅನುದಾನ ನೀಡಬೇಕು ಎಂದು ಸದಸ್ಯರಾದ ಕೆ.ವಿ.ಶ್ರೀಧರ್ ಹಾಗೂ ಎಸ್‌ಬಿಎಂ ಮಂಜು ಆಗ್ರಹಿಸಿದರು.

ತೃತೀಯ ಲಿಂಗಿಗಳ ಕಲ್ಯಾಣ ಕಾರ್ಯಕ್ರಮಕ್ಕೆ 10 ಲಕ್ಷ ಅನುದಾನ

ಮೈಸೂರು, ಏ.28(ಎಸ್‌ಬಿಡಿ)– ತೃತೀಯ ಲಿಂಗಿಗಳ ಕಲ್ಯಾಣ ಕಾರ್ಯಕ್ರಮಕ್ಕಾಗಿ ಪಾಲಿಕೆ ಬಜೆಟ್‌ನಲ್ಲಿಟ್ಟಿದ್ದ ಅನುದಾನವನ್ನು 10 ಪಟ್ಟು ಹೆಚ್ಚಿಸಲು ತೀರ್ಮಾನಿಸಲಾಯಿತು.

ತೃತೀಯ ಲಿಂಗಿಗಳ ಕಲ್ಯಾಣ ಕಾರ್ಯಕ್ರಮಕ್ಕೆ 1 ಲಕ್ಷ ರೂ. ಮೀಸಲಿಟ್ಟಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ ಮ.ವಿ. ರಾಂಪ್ರಸಾದ್, ತೃತೀಯ ಲಿಂಗಿಗಳು ಹಣಕ್ಕೆ ಕೈಯೊಡ್ಡುವುದನ್ನು ಬಿಟ್ಟು ಬದುಕು ರೂಪಿಸಿಕೊಳ್ಳಲು ನೆರವಾಗಬೇಕು. ಸ್ವ–ಉದ್ಯೋಗಕ್ಕೆ ಸಹಾಯ ಮಾಡಬೇಕು. ಆರೋಗ್ಯ ತಪಾಸಣೆ ನಡೆಸಬೇಕು. ಈ ನಿಟ್ಟಿನಲ್ಲಿ ಮೊದಲು ಗಣತಿ ನಡೆಸಿ, ಅವರ ಸಂಖ್ಯೆಯನ್ನು ನಿಖರವಾಗಿ ಸಂಗ್ರಹಿಸಿ, ಮೈಸೂರು ನಗರ ಪಾಲಿಕೆ ಮಾದರಿ ಹೆಜ್ಜೆ ಇಡಬೇಕು ಎಂದರು.

ಇದಕ್ಕೆ ಪೂರಕವಾಗಿ ಕೆ.ವಿ.ಶ್ರೀಧರ್ ಮಾತನಾಡಿ, ತೃತೀಯ ಲಿಂಗಿಗಳು ಎಲ್ಲರ ಸರಿಸಮಾನರಾಗಿ ಬದುಕು ನಡೆಸುವಂತಾಗಬೇಕು. ಹಾಗಾಗಿ ಅನುದಾನ ಹೆಚ್ಚಿಸಿ, ಸೂಕ್ತ ಕಾರ್ಯಕ್ರಮಗಳನ್ನು ರೂಪಿಸಬೇಕೆಂದು ಆಗ್ರಹಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ, ತೃತೀಯ ಲಿಂಗಿಗಳ ಕಲ್ಯಾಣ ಕಾರ್ಯಕ್ರಮಗಳಿಗೆ ಪ್ರಸಕ್ತ ಸಾಲಿನಲ್ಲಿ 10 ಲಕ್ಷ ರೂ. ಮೀಸಲಿಡೋಣ. ಮುಂದಿನ ವರ್ಷದಿಂದ ಹೆಚ್ಚಳ ಮಾಡಿಕೊಳ್ಳಬಹುದು ಎಂದರು.

ಮೇಯರ್ ಕಪ್‌ಗೆ 25 ಲಕ್ಷ: ಕ್ರೀಡೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ನಡೆಸಲಾಗುವ 'ಮೇಯರ್ ಕಪ್'ಗೆ ಕೇವಲ 10 ಲಕ್ಷ ರೂ. ಸಾಲುವುದಿಲ್ಲ, 50 ಲಕ್ಷ ರೂ. ಇಡಬೇಕೆಂದು ಕೆ.ವಿ.ಶ್ರೀಧರ್ ಆಗ್ರಹಿಸಿದರು. ಪ್ರೇಮಾ ಶಂಕರೇಗೌಡ, ಮ.ವಿ. ರಾಮ್‌ಪ್ರಸಾದ್ ಮತ್ತಿತರರು ನಗರ ಪಾಲಿಕೆ ವಾರ್ಷಿಕೋತ್ಸವ ಕಾರ್ಯಕ್ರಮವನ್ನೂ ಸೇರ್ಪಡೆ ಮಾಡಿಕೊಂಡು ಅದ್ದೂರಿಯಾಗಿ ಆಚರಿಸಬಹುದು ಎಂದು ಅಭಿಪ್ರಾಯಿಸಿದರು. ಕಡೆಗೆ ಮೇಯರ್ ಕಪ್‌ಗೆ ಸದ್ಯ 25 ಲಕ್ಷ ರೂ. ಮೀಸಲಿಟ್ಟು, ಹೆಚ್ಚುವರಿ ಅಗತ್ಯವಿದ್ದರೆ ಸಿಎಸ್‌ಆರ್ ನಿಂದ ಬಳಸಿಕೊಳ್ಳೋಣ ಎಂದು ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ ಹೇಳಿದರು.

'ಪಿಂಕ್ ಶೌಚಾಲಯ ಬೇಕು: ನಗರದಲ್ಲಿ ಹೆಣ್ಣು ಮಕ್ಕಳಿಗಾಗಿ 'ಪಿಂಕ್ ಶೌಚಾಲಯ' ನಿರ್ಮಿಸುವ ಆಶಯ ಸಾಕಾರವಾಗಿಲ್ಲ. 33 ಮಹಿಳಾ ಕಾರ್ಪೊರೇಟರ್‌ಗಳು, ಮಹಿಳಾ ಅಧಿಕಾರಿಗಳು, ಸಿಬ್ಬಂದಿಗಳಿಗಾಗಿ ಪಾಲಿಕೆ ಆವರಣದಲ್ಲಾದರೂ ಒಂದು ಪಿಂಕ್ ಶೌಚಾಲಯ ನಿರ್ಮಿಸಿಕೊಡಿ ಎಂದು ಕಾರ್ಪೊರೇಟರ್ ವೇದಾವತಿ ಆಗ್ರಹಿಸಿದರು.

ಹೊಸ ಯೋಜನೆಗಳು







- ಮಹಾನಗರ ಪಾಲಿಕೆ ಭವನ
- ರಸ್ತೆ ಗುಂಡಿ ಮುಚ್ಚುವ ಯಂತ್ರ
- ಪೆಟ್ರೋಲ್ ಬಂಕ್, ಸರ್ವೀಸ್ ಸ್ಟೇಷನ್
- ಅಂತಾರಾಷ್ಟ್ರೀಯ ಮಟ್ಟದ ಸ್ಕೇಟಿಂಗ್ ರಿಂಗ್
- ಕಟ್ಟಡ ತ್ಯಾಜ್ಯ ಸಂಸ್ಕರಣಾ ಘಟಕ
- ಎಂಆರ್‌ಐ, ಸಿಟಿ ಸ್ಕ್ಯಾನಿಂಗ್ ಯಂತ್ರ
- ಇ–ಆಟೋ ಟಿಪ್ಪರ್, ನೀರಿನ ಟ್ಯಾಂಕರ್
- ಯೋಗ ಮಂಟಪ, ವಲಯ ಕಚೇರಿ ಕಟ್ಟಡ ನಿರ್ಮಾಣ
- ಇ–ಆಫೀಸ್, ರೆವಿನ್ಯೂ ಮ್ಯಾನೇಜ್‌ಮೆಂಟ್ ಸಾಫ್ಟ್‌ವೇರ್
- ಪಾರಂಪರಿಕ ಘನ ತ್ಯಾಜ್ಯ ನಿರ್ವಹಣೆ
- ಮಿಯಾವಾಕಿ ಪಾರ್ಕ್
- ಕ್ರೀಡಾಂಗಣ, ರಸ್ತೆ ಅಭಿವೃದ್ಧಿ

ಬಡ್ಡಿ ನಿಶ್ಚಲಗೊಳಿಸಿ ನೀರಿನ ತೆರಿಗೆ ಬಾಕಿ ಪಾವತಿಗೆ ಅವಕಾಶ

ಪಾಲಿಕೆಯ ಮಹತ್ವದ ನಿರ್ಧಾರ

ಮೈಸೂರು, ಏ.28(ಆರ್‌ಕೆ)–ಬಡ್ಡಿ ಮನ್ನಾ ಪ್ರಸ್ತಾಪ ಸರ್ಕಾರದ ಹಂತದಲ್ಲಿ ಬಾಕಿ ಇರುವುದರಿಂದ ಒಂದೇ ಕಂತಿನಲ್ಲಿ ಬಾಕಿ ನೀರಿನ ತೆರಿಗೆ ಪಾವತಿಸುವ ಗ್ರಾಹಕರಿಗೆ ಬಡ್ಡಿ ಹಣವನ್ನು ನಿಶ್ಚಲತೆ (Abeyance)ಗೊಳಿಸಿ ಅಸಲು ಮೊತ್ತ ಪಾವತಿಸಿಕೊಳ್ಳಲು ಮೈಸೂರು ಮಹಾನಗರ ಪಾಲಿಕೆಯು ನಿರ್ಧರಿಸಿದೆ. ಹೊರ ವಲಯವೂ ಸೇರಿದಂತೆ ಪಾಲಿಕೆ ವ್ಯಾಪ್ತಿಯ ಬಡಾವಣೆಗಳಿಗೆ ಕುಡಿಯುವ ನೀರು ಸರಬರಾಜು ಮಾಡುತ್ತಿರುವ 1,64,072 ಸಕ್ರಿಯ ಸಂಪರ್ಕಗಳಿಗೆ ನೀರು ಮತ್ತು ಒಳಚರಂಡಿ ಶುಲ್ಕ ವಿಧಿಸಲಾಗುತ್ತಿದ್ದು, ಹಲವರು ಶುಲ್ಕ ಪಾವತಿಸದೇ ಭಾರೀ ಮೊತ್ತವನ್ನು ಬಾಕಿ ಉಳಿಸಿಕೊಂಡಿದ್ದಾರೆ.

ಮಾರ್ಚ್ ಅಂತ್ಯಕ್ಕೆ 22,057.60 ಲಕ್ಷ ರೂ. ನೀರಿನ ಶುಲ್ಕ ಬಾಕಿ ಇದ್ದು, ಆ ಪೈಕಿ 14,638.61 ಲಕ್ಷ ರೂ. ಅಸಲು ಹಾಗೂ 7,418.98 ಲಕ್ಷ ರೂ. ಬಡ್ಡಿ ಹಣವಾಗಿದೆ. ಈಗಾಗಲೇ ಬಡ್ಡಿ ಮನ್ನಾ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯಾದರೂ ಕ್ರಮ ವಹಿಸದಿರುವ ಕಾರಣ, ಬಡ್ಡಿ ಮೊತ್ತದ ಹೊರೆ ಅಧಿಕವಾಗಿರುವುದರಿಂದ ಬಾಕಿ ಇರುವ ನೀರಿನ ಶುಲ್ಕದ ಅಸಲು ಮೊತ್ತವನ್ನು ಒಂದೇ ಬಾರಿ ಪಾವತಿಸುವ ಬಳಕೆದಾರರಿಗೆ ಬಡ್ಡಿಯನ್ನು ನಿಶ್ಚಲಗೊಳಿಸಿ ಪಾವತಿಸಿಕೊಳ್ಳಲು ನಿರ್ಧರಿಸಲಾಗಿದೆ. ಅದರಿಂದಾಗಿ ಭಾರೀ ಮೊತ್ತದ ನೀರಿನ ಶುಲ್ಕದ ಬಾಕಿ ಪಾವತಿಯಾಗುವುದೆಂದು ಪಾಲಿಕೆಯು ನಿರೀಕ್ಷಿಸಿ ಈ ಕ್ರಮ ವಹಿಸಿದೆ.

ರಸ್ತೆ ಗುಂಡಿ ಮುಚ್ಚುವ ಯಂತ್ರ: ಜನಸಂಖ್ಯೆಗನುಸಾರ ವಾಹನ ಸಂಚಾರ ದಟ್ಟಣೆಯೂ ಅಧಿಕವಾಗಿರುವುದರಿಂದ ಉಂಟಾಗುವ ರಸ್ತೆ ಗುಂಡಿ ಮುಚ್ಚಲು ಹಾಗೂ ಕತ್ತರಿಸಲಾದ ರಸ್ತೆ ಭಾಗವನ್ನು ಯಥಾಸ್ಥಿತಿಗೆ ತರಲು ಎರಡು ರಸ್ತೆ ಗುಂಡಿ ಮುಚ್ಚುವ ಯಂತ್ರ (Pot hole Filling Machine)ಗಳನ್ನು ಖರೀದಿಸಲು ನಗರ ಪಾಲಿಕೆ ಬಜೆಟ್‌ನಲ್ಲಿ 5 ಕೋಟಿ ರೂ. ಕಾಯ್ದಿರಿಸಲಾಗಿದೆ.

ದೇವನೂರು ಕೆರೆ ಅಭಿವೃದ್ಧಿ: ಎನ್.ಆರ್.ಕ್ಷೇತ್ರ ವ್ಯಾಪ್ತಿಯ ದೇವನೂರು ಕೆರೆಯಲ್ಲಿ ಹೂಳು, ಕೊಳಚೆ ತುಂಬಿಕೊಂಡಿರುವುದರಿಂದ ಸುತ್ತಲಿನ ನಿವಾಸಿಗಳ ತೊಂದರೆ ಗಮನಿಸಿ ಕೆರೆ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದ್ದು, 2 ಕೋಟಿ ರೂ. ಹಣವನ್ನು ಕಾಯ್ದಿರಿಸಲಾಗಿದೆ.

ಮಲೆ ಮಹದೇಶ್ವರ ರಸ್ತೆ ಅಭಿವೃದ್ಧಿಗೆ ಅನುದಾನ: ಸಂತಸ

ಮೈಸೂರು, ಏ.28– ಮೈಸೂರಿನ ನಜರ್‌ಬಾದ್‌ನ ಗೋಪಾಲಗೌಡ ಶಾಂತವೇರಿ ವೃತ್ತದಿಂದ ಹಳೇ ಡೈರಿವರೆಗಿನ ಮಲೆಮಹದೇಶ್ವರ ರಸ್ತೆಯನ್ನು ಅಗಲೀಕರಣದೊಂದಿಗೆ ಅಭಿವೃದ್ಧಿಗೊಳಿಸಲು ನಗರ ಪಾಲಿಕೆ ಬಜೆಟ್‌ನಲ್ಲಿ 5 ಕೋಟಿ ರೂ.



ಅನುದಾನ ಘೋಷಿಸಿರುವುದಕ್ಕೆ ಮಾಜಿ ಮೇಯರ್ ಸಂದೇಶ್ ಸ್ವಾಮಿ ಸಂತಸ ವ್ಯಕ್ತಪಡಿಸಿದ್ದಾರೆ.

ನಿತ್ಯ 10–15 ಸಾವಿರ ವಾಹನಗಳು ಸಂಚರಿಸುವ ಈ ರಸ್ತೆ ಕಿರಿದಾಗಿರುವುದಲ್ಲೆ ತೀರಾ ಹದಗೆಟ್ಟಿರುವ ಕಾರಣ ಅಪಘಾತಗಳು ಸಂಭವಿಸಿ, ಜೀವಹಾನಿ ಆಗಿದೆ. ಹಾಗಾಗಿ ತುರ್ತಾಗಿ ರಸ್ತೆ ಅಗಲೀಕರಣ ಹಾಗೂ ಅಭಿವೃದ್ಧಿ ಬಗ್ಗೆ ಪಾಲಿಕೆ ಆಯುಕ್ತರಾದ ಲಕ್ಷ್ಮಿಕಾಂತ ರೆಡ್ಡಿ ಅವರ ಗಮನಕ್ಕೆ ತಂದಿದ್ದೆ. ತಿಂಗಳ ಹಿಂದೆ ಸ್ಥಳ ಪರಿಶೀಲನೆ ನಡೆಸಿದ ಅವರು, ರಸ್ತೆ ಅಗಲೀಕರಣಕ್ಕೆ ಸ್ಥಳಾವಕಾಶ ಇರುವಡೆ ಶೀಘ್ರ ಕಾಮಗಾರಿ ನಡೆಸಲು ಕ್ರಮ ವಹಿಸುವ ಭರವಸೆ ನೀಡಿದ್ದರು. ಈ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಟಿ.ಸೋಮಶೇಖರ್ ಹಾಗೂ ಮೇಯರ್ ಸುನಂದ ಪಾಲನೇತ್ರ ಅವರಿಗೂ ಮನವಿ ಮಾಡಿದ್ದೆ. ಸದ್ಯ ಪಾಲಿಕೆ ಬಜೆಟ್‌ನಲ್ಲಿ ಈ ರಸ್ತೆ ಅಗಲೀಕರಣ ಹಾಗೂ ಅಭಿವೃದ್ಧಿಗೆ 5 ಕೋಟಿ ರೂ. ಮೀಸಲಿಡಲಾಗಿದೆ. ಇದಕ್ಕೆ ಕಾರಣರಾದ ಎಲ್ಲರಿಗೂ ಜನರ ಪರವಾಗಿ ಧನ್ಯವಾದ ಸಲ್ಲಿಸುತ್ತೇನೆ ಎಂದು ಪ್ರಕಟಣೆಯಲ್ಲಿ ಸಂದೇಶ್ ಸ್ವಾಮಿ ತಿಳಿಸಿದ್ದಾರೆ.

---

2 ಬಾರಿ ಬಜೆಟ್ ಮಂಡಿಸಿ ಇತಿಹಾಸ ಸೃಷ್ಟಿಸಿದ ಶೋಭಾ

ಮೈಸೂರು, ಏ.28(ಆರ್‌ಕೆ)–ಒಂದೇ ಅವಧಿಯಲ್ಲಿ ಎರಡು ಬಾರಿ ಬಜೆಟ್ ಮಂಡಿಸಿ ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷೆ ಎಂ.ಎಸ್.ಶೋಭಾ ಅವರು ಮೈಸೂರು ಮಹಾನಗರ ಪಾಲಿಕೆಯಲ್ಲಿ ಇತಿಹಾಸ ಸೃಷ್ಟಿಸಿದ್ದಾರೆ.

ಮಹಾನಗರ ಪಾಲಿಕೆ ಆರಂಭವಾದಾಗಿನಿಂದ ಈವರೆಗೆ ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷರಾದವರು ಎರಡನೇ ಬಾರಿ ಆಯ–ವ್ಯಯ ಮಂಡಿಸಲು ಅವಕಾಶ ಸಿಕ್ಕಿರಲಿಲ್ಲ. ಮೇಯರ್–ಉಪ ಮೇಯರ್ ಅವಧಿ ಅಂತ್ಯಗೊಂಡರೂ, ಮೀಸಲಾತಿ ನಿಗದಿಯಲ್ಲಿ ವಿಳಂಬವಾದ ಕಾರಣ, ಅಧಿಕಾರದಲ್ಲಿ ಹಂಗಾಮಿಯಾಗಿ ಮುಂದುವರಿಯಲು ಈ ವರ್ಷವೂ ಅವಕಾಶ ಸಿಕ್ಕಿರುವುದರಿಂದ ವಿವಿಧ ಸ್ಥಾಯಿ ಸಮಿತಿ ಅಧ್ಯಕ್ಷರಿಗೂ ಹಂಗಾಮಿ ಹುದ್ದೆ ಲಭ್ಯವಾಗಿದೆ.

ಅದೇ ಕಾರಣಕ್ಕಾಗಿ ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷೆ ಎಂ.ಎಸ್.ಶೋಭಾ ಅವರಿಗೆ ಈ ಬಾರಿಯೂ ಪಾಲಿಕೆ ಆಯ–ವ್ಯಯ ಮಂಡಿಸುವ ಅದೃಷ್ಟ ಒಲಿದು ಬಂದಿದ್ದು, ಇಂದು ಅವರು ಯಶಸ್ವಿಯಾಗಿ ತಮ್ಮ ಬಜೆಟ್ ಭಾಷಣ ಮಾಡಿ ಎಲ್ಲಾ ಪಕ್ಷಗಳ ಪಾಲಿಕೆ ಸದಸ್ಯರಿಂದ ಪ್ರಶಂಸೆ ಗಳಿಸಿದರು.

ಒಂದನೇ ಪುಟದಿಂದ

ಬಜೆಟ್‌ನಲ್ಲಿ ಬಂಪರ್ ಘೋಷಣೆ

ಮಿಯಾವಾಕಿ ಪಾರ್ಕ್: 2 ಉದ್ಯಾನವನ ಗಳಲ್ಲಿ ಸ್ಥಳೀಯ ಸಸ್ಯ ಪ್ರಬೇಧಗಳನ್ನು ಬೆಳೆಸಿ, ಕಿರು ಅರಣ್ಯೀಕರಣದ ಮಾದರಿ ಯಲ್ಲಿ ಮಿಯಾವಾಕಿ ಪಾರ್ಕ್ ಮಾಡಲು ದ್ದೇಶಿಸಿ 3 ಕೋಟಿ ರೂ. ಕಾಯ್ದಿರಿಸಲಾಗಿದೆ. ವಾರ್ಡ್‌ಗೊಂದು ಉದ್ಯಾನವನ್ನು ಸೋಷಿ ಯಲ್ ಫಾರೆಸ್ಟ್ ಮಾಡುವುದು, 150 ಉದ್ಯಾನವನಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ನಿರ್ವಹಣೆ ಮಾಡಲು ಉದ್ದೇಶಿಸಲಾಗಿದೆ.

ಇ–ಆಫೀಸ್: ಪಾಲಿಕೆ ಆಡಳಿತ, ಕಡತಗಳ ತ್ವರಿತ ವಿಲೇವಾರಿಗಾಗಿ ಇ–ಆಫೀಸ್ ಸಾಫ್ಟ್ ವೇರ್ ತಂತ್ರಾಂಶ ಅಳವಡಿಸಿ ಪೇಪರ್ ರಹಿತವಾಗಿ ಕಾರ್ಯ ನಿರ್ವಹಿಸಲು ನಿರ್ಧರಿಸಲಾಗಿದೆ. ಪಾಲಿಕೆಯ ಎಲ್ಲಾ ವಲಯ ಕಚೇರಿಗಳಿಗೆ ಸ್ವಂತ ಕಟ್ಟಡ ನಿರ್ಮಿಸಲು 1000 ಲಕ್ಷ ರೂ. ಮೀಸಲಿರಿಸಲಾಗಿದೆ.

ನೀರಿನ ತೆರಿಗೆಗೆ ಸಾಫ್ಟ್‌ವೇರ್: ಕುಡಿಯುವ ನೀರಿನ ತೆರಿಗೆ ಸಂಗ್ರಹಿಸಲು ರೆವಿನ್ಯೂ ಮ್ಯಾನೇಜ್‌ಮೆಂಟ್ ಸಾಫ್ಟ್‌ವೇರ್ ಪದ್ಧತಿ ಅಳವಡಿಸಿ, ಬಿಲ್ಲಿಂಗ್ ವ್ಯವಸ್ಥೆಗೆ ಖರ್ಚಾಗುತ್ತಿದ್ದ 80 ಲಕ್ಷ ರೂ. ಹಣ ಉಳಿಸಲು ಯೋಜನೆ ರೂಪಿಸಲಾಗಿದೆ. ಇಡಿಸಿ ಮೆಷಿನ್ ಮೂಲಕ ನೀರು ಬಳಕೆ ದಾರರ ಮನೆ ಬಾಗಿಲಲ್ಲೇ ಹಣ ಪಾವತಿಸಿಕೊಂಡು, ರಶೀದಿ ನೀಡಬಹುದು.

ಇ–ಆಟೋ ಟಿಪ್ಪರ್: ವಾಯುಮಾಲಿನ್ಯ ತಡೆಗಟ್ಟಿ, ವೆಚ್ಚ ತಗ್ಗಿಸುವ ಸಲುವಾಗಿ ಇ–ತ್ಯಾಜ್ಯ ಸಂಗ್ರಹಣೆಗಾಗಿ ಎಲೆಕ್ಟ್ರಾನಿಕ್ ಆಟೋ ಟಿಪ್ಪರ್‌ಗಳನ್ನು ಖರೀದಿಸಲು ಮೈಸೂರು ಮಹಾನಗರ ಪಾಲಿಕೆ ನಿರ್ಧರಿಸಿದೆ.

ಕಟ್ಟಡ ತ್ಯಾಜ್ಯ ಘಟಕ: ಮೈಸೂರಲ್ಲಿ ನಿತ್ಯ ಉತ್ಪತ್ತಿಯಾಗುತ್ತಿರುವ 1000 ಟಿಡಿಪಿ ಕಟ್ಟಡ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇ ವಾರಿ ಮಾಡಲು ಹಂಚ್ಯಾ–ಸಾತಗಳ್ಳಿಯ 9.05 ಎಕರೆ ಪ್ರದೇಶದಲ್ಲಿ 100 ಟನ್ ಸಾಮರ್ಥ್ಯದ ಕಟ್ಟಡ ತ್ಯಾಜ್ಯ ಸಂಸ್ಕರಣಾ ಘಟಕ ಸ್ಥಾಪಿಸಲು ಪಾಲಿಕೆ ಮುಂದಾಗಿದೆ. ಸೀವೇಜ್ ಫಾರಂನಲ್ಲಿ ಸಂಗ್ರಹವಾಗಿರುವ 3.08 ಲಕ್ಷ ಟನ್ ಘನ ತ್ಯಾಜ್ಯವನ್ನು ಬಯೋ ಮೈನಿಂಗ್/ರೆಮಿಡಿಯೇಷನ್ ಪದ್ಧತಿ ವಿಲೇವಾರಿ ಮಾಡಲು ಉದ್ದೇಶಿಸಲಾಗಿದೆ.

ಪೆಟ್ರೋಲ್ ಬಂಕ್: ಸ್ಥಳಾಭಾವವಿರುವ ಕಾರಣ ಪಾಲಿಕೆ ಕಚೇರಿ ಆವರಣದಲ್ಲಿರುವ ಪೆಟ್ರೋಲ್ ಬಂಕ್ ತೆರವುಗೊಳಿಸಿ ರಾಯನ ಕೆರೆ, ಕೆಸರೆ ಮತ್ತು ಸೀವೇಜ್ ಫಾರಂನಲ್ಲಿ ಒಂದೊಂದು ಪೆಟ್ರೋಲ್ ಬಂಕ್ ಮತ್ತು ವಾಹನ ರಿಪೇರಿಗೆ ಸರ್ವೀಸ್ ಸ್ಟೇಷನ್ ನಿರ್ಮಿಸಲು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ.

ಕ್ರೀಡಾಂಗಣ ಅಭಿವೃದ್ಧಿ: ಕುಂಬಾರ ಕೊಪ್ಪಲಿನ ಕೆಂಪೇಗೌಡ ಕ್ರೀಡಾಂಗಣ (2 ಕೋಟಿ ರೂ.) ಅಭಿವೃದ್ಧಿ, ಪಾಲಿಕೆ ವ್ಯಾಪ್ತಿಯ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸುಸಜ್ಜಿತ ಫುಟ್‌ಬಾಲ್, ಟೆನ್ನಿಸ್, ಬ್ಯಾಸ್ಕೆಟ್ ಬಾಲ್, ಬ್ಯಾಡ್ಮಿಂಟನ್, ಕ್ರಿಕೆಟ್ ಕ್ರೀಡಾ ಸಂಕೀರ್ಣ, ನಾರಾಯಣ ಹೃದಯಾಲಯದ ಹಿಂಭಾಗದ ಆಟದ ಮೈದಾನದಲ್ಲಿ ಸುಸಜ್ಜಿತ ಕ್ರೀಡಾಂ ಗಣ, ಕುವೆಂಪುನಗರ 'ಕೆ' ಬ್ಲಾಕ್ ಕ್ರೀಡಾಂಗಣದ ಅಭಿವೃದ್ಧಿಗೂ ತಲಾ 2 ಕೋಟಿ ರೂ.ಗಳನ್ನು ಕಾಯ್ದಿರಿಸಲಾಗಿದೆ.

ಎಂಆರ್‌ಐ, ಸಿಟಿ ಸ್ಕ್ಯಾನಿಂಗ್: ಪಾಲಿಕೆ ವ್ಯಾಪ್ತಿಯ ಬಡವರಿಗೆ ಕಡಿಮೆ ದರದಲ್ಲಿ ಆರೋಗ್ಯ ಸೇವೆ ಒದಗಿಸಲು ಸಹಾಯ ವಾಗುವಂತೆ ಖಾಸಗಿ ಸಹಭಾಗಿತ್ವದಲ್ಲಿ ಎಂಆರ್‌ಐ ಮತ್ತು ಸಿಟಿ ಸ್ಕ್ಯಾನಿಂಗ್ ಘಟಕ ಸ್ಥಾಪಿಸಲು ತೀರ್ಮಾನಿಸಲಾಗಿದೆ. ಹೆಲ್ತ್ ವೆಲ್‌ನೆಸ್ ಸೆಂಟರ್, ಪಾಲಿ ಕ್ಲಿನಿಕ್‌ಗಳನ್ನು ಆರಂಭಿಸಿ ವೈದ್ಯಕೀಯ ಸೇವೆ ಒದಗಿಸಲು ಉದ್ದೇಶಿಸಲಾಗಿದೆ.

ನೀರು ಸರಬರಾಜು ಟ್ಯಾಂಕರ್ ಖರೀದಿ: ಅಭಾವವಿರುವ ಕಡೆಗೆ ಕುಡಿಯುವ ನೀರು ಸರಬರಾಜು ಮಾಡಲು ಪಾಲಿಕೆಯಿಂದಲೇ 10 ಟ್ಯಾಂಕರ್‌ಗಳನ್ನು ಖರೀದಿಸಲು 3 ಕೋಟಿ ರೂ. ಮೀಸಲಿರಿಸಿದ್ದು, ಇದರಿಂದ ಪಾಲಿಕೆಗೆ ವರ್ಷಕ್ಕೆ 40 ಲಕ್ಷ ರೂ ಹಣ ಉಳಿತಾಯವಾಗಲಿದೆ ಎಂದು ಅಭಿಪ್ರಾಯಿಸಲಾಗಿದೆ. ರಾಘವೇಂದ್ರನಗರ ಸ್ಮಶಾನದಲ್ಲಿ ಅನಿಲ, ವಿದ್ಯುತ್ ಚಿತಾಗಾರ, ಪರಿಶಿಷ್ಟ ಜಾತಿ, ವರ್ಗಗಳು, ವಿಕಲಚೇತನರ ಕಲ್ಯಾಣ ಕಾರ್ಯಕ್ರಮಗಳಿಗೆ ಹೆಚ್ಚಿನ ಅನುದಾನ, ಆರೋಗ್ಯ ಸಹಾಯ ಧನ, ಜ್ಞಾನ ಸಿರಿ ಯೋಜನೆ, ಪ್ರಾಥಮಿಕ ಆರೋಗ್ಯ ಸೇವೆಗಳನ್ನು ಮುಂದುವರಿಸಲು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ.

ಒಂದನೇ ಪುಟದಿಂದ

ಛಲವಿದ್ದರೆ ಸಾಕು...!

ಕಂಪನಿ ಇಂದು ವಿಶ್ವಾದ್ಯಂತ ಶಾಖೆಗಳನ್ನು ವಿಸ್ತರಿಸಿದೆ. ಸಚಿವ ಮುರುಗೇಶ್ ನಿರಾಣಿ ಅವರೂ ಸಹ ಸಣ್ಣ ಉದ್ಯಮವಾಗಿ ಸಕ್ಕರೆ ಕಾರ್ಖಾನೆ ಆರಂಭಿಸಿ, ಇಂದು ಅವರು ಬೃಹತ್ ಉದ್ಯಮಿಯಾಗಿ ಸಹಸ್ರಾರು ಮಂದಿಗೆ ಉದ್ಯೋಗ ನೀಡಿದ್ದಾರೆ ಎಂದರು.

ನಾನೂ ಸಹ ಸಣ್ಣ ಉದ್ಯಮಿ. 1968ರಲ್ಲಿ ಕಾರ್ಖಾನೆಯೊಂದರಲ್ಲಿ 2 ವರ್ಷ ಕೆಲಸ ಮಾಡಿ, ನಂತರ ಸಣ್ಣ ಇಟ್ಟಿಗೆ ಕಾರ್ಖಾನೆ ಮಾಡಿ, 500 ಜನರಿಗೆ ಉದ್ಯೋಗ ನೀಡಿ, ಈ ರಾಜ್ಯದಲ್ಲಿಯೇ ದೊಡ್ಡ ಇಟ್ಟಿಗೆ ಕಾರ್ಖಾನೆ ಮಾಡಿದ್ದೇನೆ. ದೊಡ್ಡ ಪ್ರಮಾಣದಲ್ಲಿ ಬೆಳೆದಿದ್ದೇನೆ ಎಂದು ಸುಮ್ಮನೆ ತಮ್ಮನ್ನೇ ನಿದರ್ಶನ ನೀಡಿದರು. ಪ್ರತಿಯೊಬ್ಬರಿಗೂ ಗುರಿ ಇರಬೇಕು. ಆ ಗುರಿ ಮುಟ್ಟಲು ಸಾಧನ ಮಾಡಿದರೆ ಅದಕ್ಕೆ ಖಂಡಿತ ಫಲಿತಾಂಶ ಸಿಕ್ಕೇ ಸಿಗುತ್ತದೆ. ಅದರ ಗುರಿಯ ಜೊತೆಗೆ ಶ್ರದ್ಧೆ ಮತ್ತು ಶ್ರಮವೂ ಇರಬೇಕು ಎಂದು ಸಲಹೆ ನೀಡಿದರು. ಗ್ರಾಮೀಣ ಪ್ರದೇಶದಲ್ಲಿ ಸ್ತ್ರೀ ಸ್ವಸಹಾಯ ಸಂಘಗಳು ಸಹ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸಿ, ಯಶಸ್ವಿ ಉದ್ಯಮಿಗಳನ್ನು ನಡೆಸುತ್ತಿದ್ದಾರೆ. ಸಣ್ಣ ಪ್ರಮಾಣದಲ್ಲಿ ಕೈಗಾರಿಕೆಯನ್ನು ಮಾಡಿ ನೂರಾರು ಜನರಿಗೆ ಉದ್ಯೋಗ ನೀಡಬಹುದು. ಸಣ್ಣ ಕೈಗಾರಿಕೆಗಳಿಂದ ಜನರ ಜೀವನ ಭದ್ರವಾಗುತ್ತದೆ. ಇದಕ್ಕೆ ಸರ್ಕಾರದ ಪ್ರೋತ್ಸಾಹವೂ ಇದೆ ಎಂದು ತಿಳಿಸಿದರು.

ಕಾರ್ಯಾಗಾರದಲ್ಲಿ ಸಾವಿರಕ್ಕೂ ಹೆಚ್ಚು ಆಸಕ್ತ ಭಾವಿ ಉದ್ಯಮಿಗಳು, ವಿದ್ಯಾರ್ಥಿಗಳು ಭಾಗವಹಿಸಿದ್ದರು. ಮೈಸೂರು ವಿಭಾಗ ವ್ಯಾಪ್ತಿಗೆ ಬರುವ ಮೈಸೂರು, ಮಂಡ್ಯ, ಚಾ.ನಗರ, ಹಾಸನ, ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಗಳ ನೂರಾರು ಯುವ ಉದ್ಯಮಿಗಳು ಆನ್‌ಲೈನ್ ವೀಡಿಯೋ ಕಾನ್ಫರೆನ್ಸ್ ಮೂಲಕ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸಿ ಮಾತನಾಡಿದರು. ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ, ಮೈಸೂರು ಬಣ್ಣ ಮತ್ತು ಅರಗು ಕಾರ್ಖಾನೆ ಅಧ್ಯಕ್ಷ ಎನ್.ವಿ.ಫಣೀಶ್, ಕಾವೇರಿ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷ ಎನ್.ಶಿವಲಿಂಗಯ್ಯ, ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಎಸ್.ಆರ್.ಕೃಷ್ಣೇಗೌಡ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಕೈಗಾರಿಕಾಭಿವೃದ್ಧಿ ಆಯುಕ್ತ ಗುಂಜನ್ ಕೃಷ್ಣ, ನಿರ್ದೇಶಕ (ಎಂಎಸ್‌ಎಂಇ) ಆರ್.ವಿನೋತ್ ಪ್ರಿಯಾ, ಕರ್ನಾಟಕ ಉದ್ಯೋಗ ಮಿತ್ರ ವ್ಯವಸ್ಥಾಪಕ ನಿರ್ದೇಶಕ ದೊಡ್ಡ ಬಸವರಾಜು, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಟಿ.ದಿನೇಶ್, ಕೆಎಂಡಿಬಿ ಸಿಇಓ ಡಾ.ಎನ್.ಶಿವಶಂಕರ್, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಅಪರ ನಿರ್ದೇಶಕ ಎಚ್.ಎಂ.ಶ್ರೀನಿವಾಸ್, ಜಿಲ್ಲಾ ಕೈಗಾರಿಕಾ ಕೇಂದ್ರದ ಅಪರ ನಿರ್ದೇಶಕ ಸಿ.ಟಿ.ಮುದ್ದುಕುಮಾರ್ ಇನ್ನಿತರರು ಉಪಸ್ಥಿತರಿದ್ದರು. ತಾಂತ್ರಿಕ ಕಾರ್ಯಾಗಾರದಲ್ಲಿ 'ಉದ್ಯಮ-ಭಯವಿಲ್ಲದ ಭವಿಷ್ಯ' ಕುರಿತು ಧಾರವಾಡದ ಕನೆಕ್ಟ್ ನಿರ್ದೇಶಕ ಮಾನವ ಮನಸ್ಸು ತರಬೇತುದಾರ ಮಹೇಶ್ ಮಸಲ್, 'ವಲಯದ ಅವಕಾಶಗಳು ಆಹಾರ ಸಂಸ್ಕರಣೆ' ಕುರಿತು ಸಿಎಸ್‌ಐಆರ್-ಸಿಎಫ್‌ಟಿಆರ್‌ಐ ಯೋಜನೆಯ ತರಬೇತುದಾರ ಎಸ್.ವಿ.ರಾಘವೇಂದ್ರ, 'ಪ್ರೇರಣೆ ಮತ್ತು ವ್ಯಕ್ತಿತ್ವ ಅಭಿವೃದ್ಧಿ' ಕುರಿತು ಮೈಸೂರಿನ ಸಕ್ಸೆಸ್ ಕೋಚ್ ಆರ್.ಎ.ಚೇತನ್‌ರಾವ್, 'ಚಿಟ ತಂತ್ರಜ್ಞಾನ ಮತ್ತು ನಾವೀನ್ಯತೆಗಳ ಪರಿಚಯ' ಕುರಿತು ಭಾರತ ಸರ್ಕಾರದ ನಾವೀನ್ಯತೆಯ ರಾಷ್ಟ್ರೀಯ ತಜ್ಞ ಸಲಹಾ ಸಮಿತಿಯ ಸಿಇಓ ಸುಹಾಸ್ ಗೋಪಿನಾಥ್ ಮಾಹಿತಿ ನೀಡಿದರು.

ಹೆಲಿಕಾಪ್ಟರ್‌ನಲ್ಲಿ ತಾಂತ್ರಿಕ ದೋಷ; 4.15 ಗಂಟೆ ವಿಳಂಬವಾಗಿ ಆಗಮಿಸಿದ ಸಚಿವದ್ವಯರು!

ಬೆಳಿಗ್ಗೆ 9.30ಕ್ಕೆ ಕಾರ್ಯಾಗಾರದ ಉದ್ಘಾಟನೆಯನ್ನು ಸಚಿವ ಮುರುಗೇಶ್ ನಿರಾಣಿ ನೆರವೇರಿಸಬೇಕಿತ್ತು. ಆದರೆ ಅವರು ಸಣ್ಣ ಕೈಗಾರಿಕಾ ಸಚಿವ ಎಂಟಿಬಿ ನಾಗರಾಜು ಅವರೊಂದಿಗೆ ಬೆಂಗಳೂರಿನಿಂದ ಮೈಸೂರಿಗೆ ಪ್ರಯಾಣಿಸುತ್ತಿದ್ದ ಹೆಲಿಕಾಪ್ಟರ್‌ನಲ್ಲಿ ತಾಂತ್ರಿಕ ದೋಷ ಕಂಡುಬಂದ ಹಿನ್ನೆಲೆಯಲ್ಲಿ ಸಚಿವದ್ವಯರು ರಸ್ತೆ ಮಾರ್ಗವಾಗಿ ಮೈಸೂರಿಗೆ ಬರಲು ವಿಳಂಬವಾಯಿತು. ನಿರಾಣಿ 4.15 ಗಂಟೆಗಳಷ್ಟು ವಿಳಂಬವಾಗಿ ಮಧ್ಯಾಹ್ನ 1.45ರ ವೇಳೆಗೆ ವೇದಿಕೆಗೆ ಬಂದು, ವಿಳಂಬವಾದ ಬಗ್ಗೆ ಸಮಜಾಯಿಷಿ ನೀಡಿ, ವಿಷಾದಿಸಿದರು.

ಸಚಿವರು ಬರುವವರೆಗೆ ವಿವಿಧ ವಿಷಯ ತಜ್ಞರು ಉಪನ್ಯಾಸ ನೀಡಿ, ಭಾವಿ ಉದ್ಯಮಿಗಳು, ವಿದ್ಯಾರ್ಥಿಗಳನ್ನು ಹಿಡಿದಿಟ್ಟಿದ್ದರು. ತಜ್ಞರು ನೀಡಿದ ಉಪನ್ಯಾಸ ಗಮನ ಸೆಳೆದಿದ್ದರಿಂದ ಎಲ್ಲರೂ ಆಸಕ್ತಿಯಿಂದ ಕುಳಿತು ಆಲಿಸಿದರು.

ನೀರು, ವಿದ್ಯುತ್, ಕಾಗದ, ಅರಗು ಮತ್ತು ಬಣ್ಣ ಸೇರಿದಂತೆ ನಾನಾ ಕಾರ್ಖಾನೆಗಳನ್ನು ಪ್ರಾರಂಭಿಸಿದವರು ಮೈಸೂರು ಮಹಾರಾಜರು. ಪರಿಶಿಷ್ಟರಿಗೆ ಶೇ.75ರಷ್ಟು ಸಬ್ಸಿಡಿಯನ್ನು ಜಿಪಿ ಸರ್ಕಾರ ನೀಡಿದೆ. ಹಿಂದಿನ ಯಾವ ಸರ್ಕಾರಗಳೂ ಕೈಗಾರಿಕೋದ್ಯಮಕ್ಕಾಗಿ ಇಷ್ಟೊಂದು ಸವಲತ್ತು ನೀಡಿದ ನಿದರ್ಶನ ಇಲ್ಲ. ಹೀಗಾಗಿ ನೀವು ಉದ್ಯಮಿಗಳಾಗಿ, ಹತ್ತಾರು ಜನರಿಗೆ ಉದ್ಯೋಗ ನೀಡುವಂತಾಗಬೇಕು. ಮುಂದಿನ 10 ವರ್ಷಗಳಲ್ಲಿ ಹಾಳೆ ಇರುವ ಕೈಗಾರಿಕೆಗಳ ಹತ್ತು ಪಟ್ಟು ಬೆಳವಣಿಗೆ ಕಾಣಬೇಕು. ■ **ಎಲ್.ನಾಗೇಂದ್ರ, ಶಾಸಕ**

ಸಮಗ್ರ ಅಭಿವೃದ್ಧಿ ಭರವಸೆ

ಆಸ್ತಿ ತೆರಿಗೆ : ಆಸ್ತಿ ತೆರಿಗೆ, ಖಾತಾ ವರ್ಗಾವಣಾ ಶುಲ್ಕ ಹಾಗೂ ಖಾತಾ ಪ್ರತಿಗಳ ಶುಲ್ಕ ಸೇರಿದಂತೆ ವಿವಿಧ ಬಾಬ್ತುಗಳಲ್ಲಿ ಕಂದಾಯ ಶಾಖೆಯಿಂದ ಪ್ರಸಕ್ತ ಸಾಲಿನಲ್ಲಿ 16,820 ಲಕ್ಷ ರೂ.ಗಳು ಸಂಗ್ರಹವಾಗಬಹುದೆಂದು ನಿರೀಕ್ಷಿಸಲಾಗಿದೆ.

ನೀರಿನ ತೆರಿಗೆ : ನೀರಿನ ತೆರಿಗೆ ಹಾಗೂ ಒಳಚರಂಡಿ ನಿರ್ವಹಣಾ ಶುಲ್ಕವಾಗಿ ಈ ವರ್ಷ 6,335 ಲಕ್ಷ ರೂ. ವಸೂಲಿ ಮಾಡುವ ಗುರಿ ಹೊಂದಿದ್ದು, ಕಳೆದ ಸಾಲಿನಲ್ಲಿ 6,746.51 ಲಕ್ಷ ರೂ. ಕ್ರೋಢೀಕರಿಸಲಾಗಿತ್ತು.

ನಗರ ಯೋಜನೆ ಶಾಖೆಯಿಂದ: ಕಟ್ಟಡ ಪರವಾನಗಿ ಶುಲ್ಕ, ನೆಲ ಬಾಡಿಗೆ, ರಸ್ತೆ ಅಗೆತ, ನೀರಿನ ಸಂಪರ್ಕ, ಕಟ್ಟಡ ಪೂರ್ಣಗೊಂಡ ವರದಿ (ಸಿಆರ್), ದಂಡ, ಒಳಚರಂಡಿ ಶುಲ್ಕ ಸೇರಿದಂತೆ ನಗರ ಯೋಜನೆ ಸಂಬಂಧಿಸಿದ ಇತರ ಮೂಲಗಳಿಂದ ಒಟ್ಟು 990.50 ಲಕ್ಷ ರೂ. ಉದ್ದಿಮೆ ಪರವಾನಗಿಯಿಂದ 1200 ಲಕ್ಷ ರೂ. ಪಾಲಿಕೆಯ ವಾಣಿಜ್ಯ ಸಂಕೀರ್ಣಗಳು, ಮಾರುಕಟ್ಟೆ ಬಾಡಿಗೆ ಹಾಗೂ ಗರುಡ ಮಾಲ್ ನೆಲಗುತ್ತಿಗೆ ಬಾಡಿಗೆಯಿಂದ 521.93 ಲಕ್ಷ ರೂ. ಆದಾಯ ನಿರೀಕ್ಷಿಸಲಾಗಿದೆ.

ಸರ್ಕಾರದ ಅನುದಾನ: ರಾಜ್ಯ ಹಣಕಾಸು ಆಯೋಗದ ಮುಕ್ತ ನಿಧಿಯಿಂದ 1988 ಲಕ್ಷ ರೂ., ಬೀದಿ ದೀಪ, ನೀರು ಸರಬರಾಜು ಸ್ಥಾವರಗಳ ವಿದ್ಯುತ್ ಬಿಲ್ಲುಗಳಿಗಾಗಿ ಪ್ರಸಕ್ತ ಸಾಲಿನಲ್ಲಿ 9188 ಲಕ್ಷ ರೂ., ಅಧಿಕಾರಿ, ಸಿಬ್ಬಂದಿ ವೇತನಕ್ಕೆ 7411 ಲಕ್ಷ ರೂ., 15ನೇ ಹಣಕಾಸು ಆಯೋಗದ ಅನುದಾನದಿಂದ 5155 ಲಕ್ಷ ರೂ., ಸಂಸದರು, ಶಾಸಕರುಗಳ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಿಂದ 125 ಲಕ್ಷ ರೂ., ಮುಖ್ಯಮಂತ್ರಿಗಳ ವಿಶೇಷ ಅನುದಾನ 500 ಲಕ್ಷ ರೂ. ಅನುದಾನ ಬರಬಹುದೆಂದು ನಿರೀಕ್ಷಿಸಲಾಗಿದೆ. ಮೈಸೂರು ನಗರವು ದಿನೇ ದಿನೇ ಪ್ರವಾಸಿಗರನ್ನು ಸೆಳೆಯುತ್ತಿರುವುದಲ್ಲದೆ, ಜನಸಂಖ್ಯೆಯೂ ಹೆಚ್ಚುತ್ತಿರುವುದರಿಂದ ನಾಗರಿಕರಿಗೆ ಮೂಲಸೌಲಭ್ಯ ಒದಗಿಸಲು ವಿವಿಧ ಮೂಲಗಳಿಂದ ಬರುವ ಸಂಪನ್ಮೂಲದಲ್ಲಿ 99,345.34 ಲಕ್ಷ ರೂ. ವೆಚ್ಚವನ್ನು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಪ್ರಸ್ತಾಪಿಸಲಾಗಿದೆ.

ರಸ್ತೆ, ವೃತ್ತಗಳ ಅಭಿವೃದ್ಧಿ: ಶಾಂತವೇರಿ ಗೋಪಾಲಗೌಡ ಸರ್ಕಲ್‌ನಿಂದ ಡೈರಿ ವೃತ್ತದವರೆಗೆ ಕಿರಿದಾಗಿರುವ ರಸ್ತೆ, ಥಿಯೋಬಾಲ್ಡ್ ರಸ್ತೆ, ಕೃಷ್ಣರಾಜ ಬುಲೇವಾರ್ಡ್ ರಸ್ತೆ ಅಗಲೀಕರಣ ಮತ್ತು ಅಭಿವೃದ್ಧಿಗೊಳಿಸಲು ಉದ್ದೇಶಿಸಿ ಈ ಸಾಲಿನ ಆಯವ್ಯಯದಲ್ಲಿ 5 ಕೋಟಿ ರೂ.ಗಳನ್ನು ಮೀಸಲಿರಿಸಲಾಗಿದೆ. ಮೇಯರ್ ಸುನಂದಾ ಪಾಲನೇತ್ರ, ಉಪಮೇಯರ್ ಅನ್ವರ್ ಬೇಗ್, ಪಾಲಿಕೆ ಆಯುಕ್ತ ಜಿ. ಲಕ್ಷ್ಮೀಕಾಂತರೆಡ್ಡಿ, ವಿವಿಧ ಸ್ಥಾಯಿ ಸಮಿತಿ ಅಧ್ಯಕ್ಷರು ಸೇರಿದಂತೆ ಸದಸ್ಯರು ಸಭೆಯಲ್ಲಿ ಪಾಲ್ಗೊಂಡು ಬಜೆಟ್ ಮೇಲೆ ಸುದೀರ್ಘ ಚರ್ಚೆ ನಡೆಸಿ ಯೋಜನೆಗಳನ್ನು ಸಂಪೂರ್ಣವಾಗಿ ಕಾರ್ಯಗತಗೊಳಿಸುವಂತೆ ಸಲಹೆ ನೀಡಿದರು.

ಸಾಮಾನ್ಯ ವರ್ಗದಡಿ ಪರಿಗಣನೆ

ಹಾಗೂ ಬಿ.ವಿ.ನಾಗರತ್ನ ಒಳಗೊಂಡ ನ್ಯಾಯಪೀಠ ತಿಳಿಸಿದೆ. 1992ರ ಇಂದಿರಾ ಸಾಹ್ನಿ ಪ್ರಕರಣದಿಂದ ಹಿಡಿದು ಸೌರವ್ ಯಾದವ್ (2021) ಹಾಗೂ ಸಾಧನಾಸಿಂಗ್ ಡಾಂಗಿ ಪ್ರಕರಣದವರೆಗೆ (2022) ಪಾಲಿಸಲಾದ ನಿಯಮಗಳನ್ನೇ ನ್ಯಾಯಪೀಠವು ಈ ಪ್ರಕರಣಕ್ಕೂ ಅನ್ವಯಿಸಿತು. ರಾಜಸ್ಥಾನದಲ್ಲಿ ಬಿಎಸ್‌ಎನ್‌ಎಲ್‌ನಲ್ಲಿ ತಾಂತ್ರಿಕ ಸಹಾಯಕ ಹುದ್ದೆಗೆ ನಡೆದ ನೇಮಕಾತಿಯಲ್ಲಿ ಮೀಸಲಾತಿಯ ಇಬ್ಬರು ಅಭ್ಯರ್ಥಿಗಳು ಸಾಮಾನ್ಯ ವರ್ಗದವರ ಪೈಕಿ ಕೊನೆಯ ಅಭ್ಯರ್ಥಿಗಿಂತ ಹೆಚ್ಚು ಅಂಕ ಗಳಿಸಿದ್ದರೂ ಅವರನ್ನು ಒಬಿಸಿ ವರ್ಗದಡಿ ಪರಿಗಣಿಸಲಾಗಿತ್ತು. ಈ ವಿಷಯ ಕೋರ್ಟ್ ಮೆಟ್ಟಿಲೇರಿತ್ತು. ವಿಚಾರಣೆ ನಡೆಸಿದ್ದ ಹೈಕೋರ್ಟ್, ಈ ಒಬಿಸಿ ಅಭ್ಯರ್ಥಿಯನ್ನು ತಾಂತ್ರಿಕ ಸಹಾಯಕ ಹುದ್ದೆಗೆ ಪರಿಗಣಿಸುವಂತೆ ನಿರ್ದೇಶನ ನೀಡಿತ್ತು. ಹೈಕೋರ್ಟ್‌ನ ಈ ಆದೇಶವನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಬಿಎಸ್‌ಎನ್‌ಎಲ್ ಅರ್ಜಿ ಸಲ್ಲಿಸಿತ್ತು. ನ್ಯಾಯಪೀಠವು ಬಿಎಸ್‌ಎನ್‌ಎಲ್‌ನ ಅರ್ಜಿಯನ್ನು ವಜಾಗೊಳಿಸಿ ಆದೇಶಿಸಿತು.

ಯುವತಿ ಮೇಲೆ ಆಸಿಡ್ ದಾಳಿ

ಆರೋಪಿ ನಾಗೇಶ್ ಬಂಧನಕ್ಕೆ ತಂಡ ರಚನೆ ಮಾಡಲಾಗಿದೆ ಎಂದರು. ಬೆಳಿಗ್ಗೆ 8.30ರಲ್ಲಿ ಕಚೇರಿಗೆ ಕೆಲಸಕ್ಕೆ ಬಂದಾಗ ಅಲ್ಲಿಗೆ ನಾಗೇಶ್ ಬಂದಿದ್ದಾನೆ. ಆತನನ್ನು ಕಂಡು ಯುವತಿ ಓಡಿ ಹೋಗಿದ್ದಾಳೆ. ಅವಳನ್ನು ಬೆನ್ನಟ್ಟಿದ ಈ ರಾಕ್ಷಸ, ಹಿಂದಿನಿಂದ ಆಸಿಡ್ ಎರಚಿದ. ನಂತರ ಕೆಳಗೆ ಬಿದ್ದ ಆಕೆ ಮೇಲೆ ಮತ್ತೆ ಆಸಿಡ್ ಎರಚಿ ಪರಾರಿಯಾಗಿದ್ದಾನೆ. ಕಚೇರಿಯ ಗೋಡೆಗಳ ಮೇಲೆ ಆಸಿಡ್ ದಾಳಿಯಿಂದ ಹಾನಿಯಾಗಿವೆ. ಪ್ಲೀಸ್, ಅವನನ್ನು ಬಿಡಬೇಡಿ. ಅವನಿಗೆ ಶಿಕ್ಷೆಯಾಗಲೇಬೇಕು ಎಂದು ಆಸಿಡ್ ದಾಳಿಗೆ ಒಳಗಾದ ಯುವತಿ ಪೊಲೀಸರಲ್ಲಿ ಮನವಿ ಮಾಡಿದ್ದಾಳೆ. ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಯುವತಿಯನ್ನು ಪೊಲೀಸರು ಮಾಹಿತಿ ಕಲೆ ಹಾಕಿದ್ದು, ಅವನಿಗೆ ಸರಿಯಾದ ಶಿಕ್ಷೆಯಾಗಬೇಕು ಎಂದು ಪೊಲೀಸರ ಬಳಿ ಮನವಿ ಮಾಡಿದ್ದಾಳೆ. ಯುವತಿಯ ಹೇಳಿಕೆ ಪಡೆದ ಪೊಲೀಸರು ನಾಗೇಶ್ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ. ಆರೋಪಿ ನಾಗೇಶ್ ಯುವತಿ ಮೇಲೆ ಆಸಿಡ್ ಹಾಕಿದ ಬಳಿಕ ವಕೀಲರನ್ನು ಭೇಟಿ ಮಾಡುವ ಉದ್ದೇಶದಿಂದ ನಾಗೇಶ್, ಸಿಟಿ ಸಿವಿಲ್ ಕೋರ್ಟ್ ಬಳಿ ಹೋಗಿದ್ದಾನೆ. ಅಲ್ಲಿಂದ ತನ್ನ ಫೋನ್ ಸ್ವಿಚ್ ಆಫ್ ಮಾಡಿ ಪರಾರಿಯಾಗಿದ್ದಾನೆ. ಕಾಮಾಕ್ಷಿಪಾಳ್ಯ ಪೊಲೀಸರು ಆರೋಪಿಗಾಗಿ ಹುಡುಕಾಡುತ್ತಿದ್ದು, ಶೀಘ್ರವೇ ಬಂಧಿಸಲಾಗುವುದು ಎಂದು ಸಚಿವ ಆರಗ ಜ್ಞಾನೇಂದ್ರ ತಿಳಿಸಿದ್ದಾರೆ.

ಮೇ 2ರಂದು ಜೆಎಸ್‌ಎಸ್ ವಿಜ್ಞಾನ, ತಂತ್ರಜ್ಞಾನ ವಿಶ್ವವಿದ್ಯಾನಿಲಯದ 4ನೇ ಘಟಿಕೋತ್ಸವ

● 1,519 ವಿದ್ಯಾರ್ಥಿಗಳಿಗೆ ವಿವಿಧ ಪದವಿ ಪ್ರದಾನ ● 33 ಚಿನ್ನದ ಪದಕ, 19 ದತ್ತಿ ಬಹುಮಾನ ವಿತರಣೆ



ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಪ್ರಭಾರ ಕುಲಪತಿ ಪ್ರೊ.ಎ.ಎನ್.ಸಂತೋಷ್ ಕುಮಾರ್ ಘಟಿಕೋತ್ಸವ ಕುರಿತು ವಿವರ ನೀಡಿದರು.

ಮೈಸೂರು,ಏ.28(ಪಿಎಂ)-ಜೆಎಸ್‌ಎಸ್ ಮಹಾವಿದ್ಯಾಪೀಠದ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ 4ನೇ ಘಟಿಕೋತ್ಸವ ಮೇ 2ರಂದು ನಡೆಯಲಿದ್ದು, 1,519 ವಿದ್ಯಾರ್ಥಿಗಳು ವಿವಿಧ ಪದವಿ ಸ್ವೀಕರಿಸಲಿದ್ದಾರೆ ಎಂದು ವಿಶ್ವವಿದ್ಯಾನಿಲಯದ ಪ್ರಭಾರ ಕುಲಪತಿ ಪ್ರೊ.ಎ.ಎನ್. ಸಂತೋಷ್ ಕುಮಾರ್ ತಿಳಿಸಿದರು.

ಮೈಸೂರಿನ ವಿನೋಭಾ ರಸ್ತೆಯ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಿವಿ ಏಕೀಕೃತ ವಿವಿಯಾಗಿ ಸ್ಥಾಪನೆಗೊಂಡಿದ್ದು, ಎಸ್‌ಜೆಸಿಇ ಕಾಲೇಜು ವಿವಿಯ ಘಟಕ ಕಾಲೇಜು ಆಗಿದೆ. ಅಂದು ಎಸ್‌ಜೆಸಿಇ ಕಾಲೇಜು ಆವರಣದಲ್ಲಿ ಬೆಳಗ್ಗೆ 10.30ಕ್ಕೆ ಘಟಿಕೋತ್ಸವ ನಡೆಯಲಿದ್ದು, ವಿವಿಯ ಕುಲಾಧಿಪತಿಗಳೂ ಆದ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು ಸಾನ್ನಿಧ್ಯ ವಹಿಸಿ, ಉನ್ನತ ಶ್ರೇಣಿಯೊಂದಿಗೆ ಪದವಿ ಪಡೆದ ವಿದ್ಯಾರ್ಥಿಗಳಿಗೆ ಪದಕ ಮತ್ತು ಪ್ರಮಾಣ ಪತ್ರ ಪ್ರದಾನ ಮಾಡಲಿದ್ದಾರೆ ಎಂದು ಹೇಳಿದರು.

ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್ತಿನ ಅಧ್ಯಕ್ಷ ಪ್ರೊ.ಅನಿಲ್ ಡಿ.ಸಹಸ್ರಬುದ್ಧೆ ಅವರು ಅತಿಥಿಯಾಗಿ ಪಾಲ್ಗೊಂಡು ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಲಿದ್ದಾರೆ. ಜೆಎಸ್‌ಎಸ್ ಮಹಾವಿದ್ಯಾಪೀಠದ ತಾಂತ್ರಿಕ ಶಿಕ್ಷಣ ವಿಭಾಗದ ಸಲಹೆಗಾರ ಪ್ರೊ.ಎಂ.ಹೆಚ್.ಧನಂಜಯ, ನಿರ್ದೇಶಕ ಡಾ.ಬಿ.ಸುರೇಶ್ ವಿಶೇಷ ಆಹ್ವಾನಿತರಾಗಿ ಆಗಮಿಸಲಿದ್ದಾರೆ ಎಂದು ವಿವರಿಸಿದರು.

2020-21ನೇ ಸಾಲಿನಲ್ಲಿ ಬಿಇಯಿಂದ 997, ಬಿಸಿಎಯಿಂದ 28, ಎಂ.ಟೆಕ್‌ನಿಂದ 199, ಎಂಸಿಎಯಿಂದ 57, ಎಂಎಸ್‌ಸಿಯಿಂದ 33, ಎಂಬಿಎಯಿಂದ 200 ಮತ್ತು 5 ಮಂದಿಗೆ ಪಿಹೆಚ್.ಡಿ ಸೇರಿದಂತೆ ಒಟ್ಟು 1,519 ಮಂದಿ ಪದವಿ ಪಡೆಯಲು ಅರ್ಹರಾಗಿದ್ದಾರೆ. ಈ ಪೈಕಿ 33 ಚಿನ್ನದ ಪದಕ, 19 ದತ್ತಿ ಬಹುಮಾನ ಸಹ ಪಡೆಯಲಿದ್ದಾರೆ ಎಂದು ಹೇಳಿದರು.

ಕುಲಸಚಿವ ಪ್ರೊ.ಎಸ್.ಎ.ಧನರಾಜ್ ಮಾತನಾಡಿ, ವಿವಿಯಲ್ಲಿ ಭಾರತದಲ್ಲೇ ಮೊಟ್ಟ ಮೊದಲಿಗೆ ನೂತನ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ-2020) ಜಾರಿಗೆ ತರಲಾಗಿದೆ. ಬಿಇ ಕಂಪ್ಯೂಟರ್ ಅಪ್ಲಿಕೇಷನ್‌ನಲ್ಲಿ ಪ್ರಾಯೋಗಿಕವಾಗಿ ಎನ್‌ಇಪಿ-2020 ಅನ್ನು ಅಳವಡಿಸಿಕೊಂಡಿದ್ದು, ಶೀಘ್ರದಲ್ಲಿ ಎಲ್ಲಾ ವಿಭಾಗಗಳಿಗೂ ವಿಸ್ತರಿಸುವ ಪ್ರಕ್ರಿಯೆ ಆರಂಭವಾಗಲಿದೆ ಎಂದರು.

2021-22ನೇ ಸಾಲಿಗೆ ಸಂಬಂಧಿಸಿದಂತೆ ವಿವಿಯ ಶೇ.90ರಷ್ಟು ವಿದ್ಯಾರ್ಥಿಗಳಿಗೆ ಈವರೆಗೆ ವಿವಿಧ ರೀತಿಯ 358 ಕಂಪನಿಗಳಲ್ಲಿ ಉದ್ಯೋಗಗಳು ದೊರೆತಿದ್ದು, ಕನಿಷ್ಠ 14 ಲಕ್ಷ ರೂ.ನಿಂದ ಗರಿಷ್ಠ 42 ಲಕ್ಷ ರೂ.ವರೆಗೆ ವಾರ್ಷಿಕವಾಗಿ ವೇತನ ನಿಗದಿಯಾಗಿದೆ. ಮುಂದಿನ ಶೈಕ್ಷಣಿಕ ವರ್ಷದಿಂದ ವಿಶೇಷಚೇತನರಿಗಾಗಿ ಕಂಪ್ಯೂಟರ್ ವಿಜ್ಞಾನದಲ್ಲಿ ಬಿಇ ಪದವಿ ಆರಂಭಿಸಲು ಪ್ರಕ್ರಿಯೆ ನಡೆಯುತ್ತಿದೆ. ಈಗಾಗಲೇ ಜೆಸಿ ಕಾಲೇಜು ಆವರಣದಲ್ಲಿ ವಿಶೇಷಚೇತನರ ಪಾಲಿಟೆಕ್ನಿಕ್ ಕಾಲೇಜು ಇರುವ ಹಿನ್ನೆಲೆಯಲ್ಲಿ ಅದಕ್ಕೆ ಪೂರಕ ಸೌಲಭ್ಯಗಳು ಈಗಾಗಲೇ ವಿವಿ ಹೊಂದಿದೆ ಜೊತೆಗೆ ಇತ್ತೀಚಿನ ಉದ್ಯಮ ಮತ್ತು ವ್ಯಾಪಾರ ಕ್ಷೇತ್ರದ ಬೇಡಿಕೆಗಳಿಗೆ ಅನುಗುಣವಾಗಿರುವ ಹಲವು ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಲು ಮುಂದಾಗಿದ್ದೇವೆ ಎಂದು ಹೇಳಿದರು.

ಆನ್‌ಲೈನ್ ಮತ್ತು ಆಫ್‌ಲೈನ್‌ನಲ್ಲಿ ವಿವಿ ತನ್ನದೇ 'ಜೆಇಟಿ' ಪ್ರವೇಶ ಪರೀಕ್ಷೆ ಮೂಲಕ ವಿದ್ಯಾರ್ಥಿಗಳ ಆಯ್ಕೆ ಪ್ರಕ್ರಿಯೆ ನಡೆಸಲು ಸಿದ್ಧತೆ ನಡೆಸುತ್ತಿದೆ. ಈ ಶೈಕ್ಷಣಿಕ ವರ್ಷದಿಂದಲೇ ಈ ಪರೀಕ್ಷೆ ನಡೆಸುವ ಉದ್ದೇಶವಿದ್ದು, ಸಾಧ್ಯವಾಗದಿದ್ದರೆ, ಮುಂದಿನ ಶೈಕ್ಷಣಿಕ ವರ್ಷದಿಂದ ನಡೆಸಲಾಗುವುದು ಎಂದರು. ಎಸ್‌ಜೆಸಿಇ ಕಾಲೇಜು ಪ್ರಾಂಶುಪಾಲ ಪ್ರೊ.ಎಸ್.ಬಿ.ಕಿವಾಡೆ ಗೋಷ್ಠಿಯಲ್ಲಿದ್ದರು.

ಮೈಸೂರು ವಿವಿಯಲ್ಲಿ ಹಸ್ತಪ್ರತಿ ಸಂರಕ್ಷಣೆ ಸಂಬಂಧ ವಿಶೇಷ ಕೋರ್ಸ್ ಅಗತ್ಯ

ಸಿಂಡಿಕೇಟ್ ಸದಸ್ಯೆ ಡಾ.ಚೈತ್ರಾ ನಾರಾಯಣ್ ಪ್ರತಿಪಾದನೆ



ಮೈಸೂರು, ಏ.28(ಎಂಕೆ)- ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಗ್ರಂಥಗಳ(ಹಸ್ತಪ್ರತಿ) ಸಂರಕ್ಷಣೆ (manuscript preservation) ಕುರಿತ ವಿಶೇಷ ಕೋರ್ಸ್‌ಗಳನ್ನು ಪ್ರಾರಂಭಿಸಬೇಕಾಗಿದೆ ಎಂದು ಮೈಸೂರು ವಿವಿ ಸಿಂಡಿಕೇಟ್ ಸದಸ್ಯೆ ಡಾ.ಚೈತ್ರಾ ನಾರಾಯಣ್ ಸಲಹೆ ನೀಡಿದರು.

ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ಅಧ್ಯಯನ ವಿಭಾಗದಲ್ಲಿ 'ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿದ್ಯಾರ್ಥಿಗಳ ಸಂಘ 2022-23(ಎಂಯುಎಲ್‌ಐಎಸ್‌ಎಸ್‌ಎ) ಉದ್ಘಾಟಿಸಿ ಮಾತನಾಡಿದ ಅವರು, ಬೇರೆ ದೇಶಗಳ ವಿಶ್ವವಿದ್ಯಾನಿಲಯಗಳಲ್ಲಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದ ಜೊತೆಗೆ ಗ್ರಂಥಗಳ ಸಂರಕ್ಷಣೆ ಕುರಿತು ಕೋರ್ಸ್‌ಗಳಿದ್ದು, ಮೈಸೂರು ವಿವಿಯಲ್ಲೂ ಪ್ರಾರಂಭಿಸಬೇಕು ಎಂದರು.

1955ರಲ್ಲಿ ಸ್ಥಾಪನೆಗೊಂಡ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿದ್ಯಾರ್ಥಿಗಳ ಸಂಘ ಇಲ್ಲಿಯವರೆಗೂ ಪ್ರತೀ ವಾರ ಸಂಪನ್ಮೂಲ ವ್ಯಕ್ತಿಗಳನ್ನು ಕರೆಸಿ ಅವರಿಂದ ಮಾಹಿತಿ ಪಡೆಯುವ ಪರಿಪಾಠವನ್ನು ನಡೆಸಿಕೊಂಡು ಬಂದಿದೆ. ವಿದ್ಯಾರ್ಥಿಗಳ ತಮ್ಮ ಗುರಿ-ಸಾಧನೆಗಾಗಿ ಬೇರೆ ಬೇರೆ ವಿಷಯಗಳ ಪರಿಣಿತರಿಂದ ಜ್ಞಾನ ಪಡೆದುಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಆರ್.ಎನ್.ಪದ್ಮನಾಭ್ ಮಾತನಾಡಿ, ವಿದ್ಯಾರ್ಥಿಗಳ ಅಂಗೈಯಲ್ಲೇ ಪ್ರತಿಯೊಂದು ವಿಷಯಗಳ ಮಾಹಿತಿ ಇದ್ದು, ಸರಿಯಾಗಿ ಬಳಕೆ ಮಾಡಿಕೊಂಡರೆ ಸಾಕಷ್ಟು ಪ್ರಯೋಜನ ಪಡೆದುಕೊಳ್ಳಬಹುದು. ದಾರಿ ತಪ್ಪಿಸುವ ವಿಚಾರಗಳು ಕಂಡರು ಕಾಣದ ಹಾಗೆ ತಮ್ಮ ಗುರಿ-ಸಾಧನೆಯತ್ತ ಮಾತ್ರ ಗಮನ ಹರಿಸಬೇಕು ಎಂದು ತಿಳಿ ಹೇಳಿದರು.

ಮೈಸೂರು ವಿವಿ ಅತ್ಯಂತ ದೊಡ್ಡ ವಿಶ್ವವಿದ್ಯಾನಿಲಯವಾಗಿದೆ. ಇಲ್ಲಿಂದ ಸರ್ವಪಲ್ಲಿ ರಾಧಾಕೃಷ್ಣನ್ ಅವರು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಕ್ಕೆ ತೆರಳಿದರೆ, ಅರ್ಥಶಾಸ್ತ್ರಜ್ಞ ಶ್ರೀನಿವಾಸನ್ ಅವರು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಿಂದ ಮೈಸೂರು ವಿವಿಗೆ ಬಂದರು. ಈ ವೇಳೆ ಇಬ್ಬರು ಮಾತನಾಡುವಾಗ ಶ್ರೀನಿವಾಸ್ ಅವರು, ಮೈಸೂರು ವಿವಿ ಅತ್ಯುತ್ತಮ ವಿವಿಯಾಗಿದ್ದು ಆದ್ದರಿಂದ ಅಲ್ಲಿಂದ ಇಲ್ಲಿಗೆ ಬಂದೆ ಎಂದರೆ, ರಾಧಾಕೃಷ್ಣನ್ ಅವರು ಇಂತಹ ವಿವಿಯ ಘನತೆಯನ್ನು ಮತ್ತಷ್ಟು ಹೆಚ್ಚಿಸಲು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯಕ್ಕೆ ಹೋಗುತ್ತಿದ್ದೇನೆ ಎಂದಿದ್ದರು ಎಂದರು.

ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ.ಎನ್.ಎಸ್. ಹರಿನಾರಾಯಣ, ಪ್ರಾಧ್ಯಾಪಕರಾದ ಪ್ರೊ.ಮಲ್ಲಿನಾಥ ಕುಂಬಾರ, ಪ್ರೊ.ಹೆಚ್.ಆದಿತ್ಯ ಕುಮಾರಿ, ಅತಿಥಿ ಉಪನ್ಯಾಸಕ ಎಂ.ಸುನೀಲ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಇಂದಿನಿಂದ ಮೈಸೂರು ಉತ್ಸವ

ಮೈಸೂರು, ಏ. 28- ಮೈಸೂರಿನ ದೊಡ್ಡಕೆರೆ ಮೈದಾನದ ಪಕ್ಕದಲ್ಲಿರುವ ಜೆಎಸ್‌ಎಸ್ ಮೈದಾನದಲ್ಲಿ ಏ.29ರಿಂದ ಮೈಸೂರು ಉತ್ಸವ ಆರಂಭವಾಗಲಿದ್ದು, ಅಂದು ಸಂಜೆ 6 ಗಂಟೆಗೆ ಶಾಸಕ ಎಸ್.ಎ.ರಾಮದಾಸ್ ಉದ್ಘಾಟಿಸಲಿದ್ದಾರೆ. ಶಾಸಕ ಎಲ್. ನಾಗೇಂದ್ರ ಈ ವೇಳೆ ಉಪಸ್ಥಿತರಿರುವರು.

"ಮೈಸೂರು ಉತ್ಸವ" ಧ್ಯೇಯದಡಿ "ಸ್ಪೇಸ್ ಟೂರ್" ಕರ್ನಾಟಕದಲ್ಲೇ ಮೊದಲ ದೃಶ್ಯ-ಶ್ರಾವ್ಯ ಪ್ರದರ್ಶನ ಏ.29ರಿಂದ ಮೇ 29ರವರೆಗೂ ಆಯೋಜಿಸಲಾಗಿದೆ. ಈಗ ಮೈಸೂರು ಉತ್ಸವದೊಂದಿಗೆ ಭವಿಷ್ಯದ ಮನೆಯೆಂದೇ ಕರೆಸಿಕೊಳ್ಳುತ್ತಿರುವ ಮಂಗಳನ ಅಂಗಳಕ್ಕೂ ಕರೆದೊಯ್ಯಲಿದೆ, ಅಲ್ಲಿಂದಲೇ ನವಗ್ರಹಗಳು, ನಭದ ಅಚ್ಚರಿಗಳನ್ನು, ಸೌರಮಂಡಲದ ವಿಸ್ಮಯಗಳು, ಭೂಮಿಯಿಂದ ಜಿಗಿಯುವ ರಾಕೆಟ್, ನಮ್ಮೆಲ್ಲರಿಗೂ ಅಗತ್ಯವಿರುವ ಉಪಗ್ರಹಗಳು, ಭೂಮಿಗಾಗಿ ಶ್ರಮಿಸುವ ಸ್ಪೇಸ್ ಸ್ಟೇಷನ್ ಮಾದರಿಗಳು ಮನಮುಟ್ಟಲಿದೆ. ಗಂಟೆಗಟ್ಟಲೆ ಭೂಮಿಯಾಚೆಗಿನ ಪಯಣದಲ್ಲಿ ನೀವು ಅನ್ಯಗ್ರಹ ಜೀವಿಗಳನ್ನು ನೋಡಬಹುದು, ನೆನಪಿಗಾಗಿ ಸೆಲ್ಫಿ ಕ್ಲಿಕ್ಕಿಸಬಹುದು. ಬೃಹತ್ ವೇದಿಕೆಯಲ್ಲಿ ರೂಪುಗೊಂಡಿರುವ "ಸ್ಪೇಸ್ ಟೂರ್" ಮೈಸೂರು, ಹೈದರಾಬಾದ್ ಕಲಾವಿದರ ಮತ್ತು ತಂತ್ರಜ್ಞರ ಕೈಚಳಕ.


ಸೈಮನ್ ಎಕ್ಸಿಬಿಟರ್ಸ್ ನಿರ್ದೇಶಕ ಎಂ.ಎಸ್.ನಾಗಚಂದ್ರ ಕಲ್ಪನೆಯಲ್ಲಿ ರೂಪುಗೊಂಡು ಈಗ ವಾಸ್ತವದಲ್ಲಿ ಪ್ರವಾಸಿಗರಿಗೆ ಸ್ಪೇಸ್ ಟೂರ್ ಲೋಕಾರ್ಪಣೆಯಾಗಲಿದೆ. ಬೆಳಗ್ಗೆ 11ರಿಂದ ರಾತ್ರಿ 10ರವರೆಗೂ ಪ್ರವೇಶಾವಕಾಶ ಕಲ್ಪಿಸಲಾಗಿದೆ.

ನಾಳೆ ನರರೋಗಗಳ ನ್ಯೂರೋ ಸಿ.ಎಂ.ಇ-22

ಮೈಸೂರು, ಏ.28-ಸುಯೋಗ್ ಆಸ್ಪತ್ರೆ, ಐಎಂಎ ಮತ್ತು ನ್ಯೂರಲಾಜಿಕಲ್ ಸೊಸೈಟಿ ಸಂಯುಕ್ತಾಶ್ರಯದಲ್ಲಿ "ವೈದ್ಯರ ತಿಳುವಳಿಕೆಗಾಗಿ ನರರೋಗಗಳ ಬಗ್ಗೆ ನ್ಯೂರೋ ಸಿ.ಎಂ.ಇ - 22 ಮುಂದುವರೆದ ಶೈಕ್ಷಣಿಕ ಕಾರ್ಯಕ್ರಮವನ್ನು ಏ.30 (ಶನಿವಾರ) ಬೆಳಗ್ಗೆ 10 ಗಂಟೆಗೆ ಹುಣಸೂರು ರಸ್ತೆಯಲ್ಲಿರುವ ಹೋಟೆಲ್ ಲೇ ರುಚಿಯಲ್ಲಿ ಆಯೋಜಿಸಲಾಗಿದೆ.

ಈ ಕಾರ್ಯಕ್ರಮವನ್ನು ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ.ಎಂ.ಎ. ಶೇಖರ್ ಉದ್ಘಾಟಿಸಲಿದ್ದಾರೆ. ಮೈಸೂರು ಐಎಂಎ ಅಧ್ಯಕ್ಷ ಡಾ.ಸುಜಾತರಾವ್, ಎ.ಪಿ.ಐ ಅಧ್ಯಕ್ಷ ಡಾ.ರಮೇಶ್, ನ್ಯೂರಲಾಜಿಕಲ್ ಸೊಸೈಟಿ ಕಾರ್ಯದರ್ಶಿ ಡಾ.ವಾಸನ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಸುಮಾರು 12 ಪ್ರತಿಷ್ಠಿತ ನರರೋಗ ತಜ್ಞರು ಉಪನ್ಯಾಸ ನೀಡಲಿದ್ದಾರೆ. ರಾಜ್ಯದ ವಿವಿಧ ಭಾಗಗಳಿಂದ ಪ್ರತಿಷ್ಠಿತ ವೈದ್ಯರು ಭಾಗವಹಿಸಲಿದ್ದು, ಪ್ರವೇಶ ಉಚಿತವಾಗಿರುತ್ತದೆ.

ಡಾ.ಜಿ.ಎಸ್.ವಿಜಯ್‌ಕುಮಾರ್ ನಿಧನ



ಮೈಸೂರು, ಏ.28- ಮೈಸೂರಿನ ಕನಕದಾಸನಗರ ನಿವಾಸಿ, ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ನಿವೃತ್ತ ಪ್ರೊಫೆಸರ್ ಡಾ.ಜಿ.ಎಸ್. ವಿಜಯ್‌ಕುಮಾರ್(70) ಅವರು ಇಂದು ನಿಧನರಾದರು.

ಮೃತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಶುಕ್ರವಾರ ಮಧ್ಯಾಹ್ನ 2ಕ್ಕೆ ಲಲಿತಾದ್ರಿಪುರ ವೀರಶೈವ ರುದ್ರಭೂಮಿಯಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಜ್ಜುನ್ನಿಸಾ



ಮೈಸೂರು, ಏ.28-ಮೈಸೂರಿನ ಉದಯಗಿರಿ ನಿವಾಸಿ ದಿವಂಗತ ಸೈಯ್ಯದ್ ಪಾಷಾ ಅವರ ಪತ್ನಿ ನಜ್ಜುನ್ನಿಸಾ(75) ಅವರು ಇಂದು ನಿಧನರಾದರು. ಮೃತರು ಪುತ್ರ ಸೇರಿ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಏ.29) ಬೆಳಗ್ಗೆ 9.30ಕ್ಕೆ ಟಿಪ್ಪು ಸರ್ಕಲ್‌ನಲ್ಲಿರುವ ಮುಸ್ಲಿಮರ ಖಬರ್‌ಸ್ಥಾನ್ (ಗೇಟ್ 1)ನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜೂನ್ ತಿಂಗಳಲ್ಲಿ 5 ಜಿ ತರಂಗಾಂತರ ಹರಾಜು ಸಾಧ್ಯತೆ



ನವದೆಹಲಿ: ಸರ್ಕಾರ ಜೂನ್ ತಿಂಗಳಲ್ಲಿ 5ಜಿ ತರಂಗಾಂತರ ಹರಾಜು ನಡೆಸುವ ಸಾಧ್ಯತೆ ಇದೆ ಎಂದು ಕೇಂದ್ರ ಟೆಲಿಕಾಮ್ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ನಿರೀಕ್ಷಿತ ಸಮಯಕ್ಕೆ ತಕ್ಕಂತೆ ಕೆಲಸ ನಡೆಯುತ್ತಿದೆ. ತರಂಗಾಂತರದ ಬೆಲೆಗಳ ಬಗ್ಗೆ ಕ್ಷೇತ್ರದಲ್ಲಿರುವ ಗೊಂದಲ, ಆತಂಕಗಳನ್ನು ದೂರ ಮಾಡುವ ಪ್ರಕ್ರಿಯೆಗಳು ಪ್ರಾರಂಭವಾಗಿವೆ. 30 ವರ್ಷಗಳಿಂದ ಹಂಚಿಕೆ ಮಾಡಲಾಗಿರುವ ವಿವಿಧ ರೇಡಿಯೋ ತರಂಗಗಳಿಗೆ 7.5 ಲಕ್ಷ ಕೋಟಿಗಳ ಮೂಲ ಬೆಲೆಯೊಂದಿಗೆ ಟ್ರಾಯ್ ಮೆಗಾ ಹರಾಜನ್ನು ನಡೆಸಲಿದೆ. ಹರಾಜು ಪ್ರಕ್ರಿಯೆ ನಿಗದಿತ, ನಿರೀಕ್ಷಿತ ಕಾಲದಲ್ಲೇ ನಡೆಯಲಿದೆ. ಟ್ರಾಯ್ ಶಿಫಾರಸುಗಳ ಬಗ್ಗೆ ಡಿಜಿಟಲ್ ಕಮ್ಯುನಿಕೇಷನ್ ಆಯೋಗ ನಿರ್ಧಾರ ಕೈಗೊಳ್ಳಲಿದೆ ಎಂದು ಸಚಿವರು ತಿಳಿಸಿದ್ದಾರೆ.

ಅಪರಿಚಿತ ಶವ ಪತ್ತೆ

ಮೈಸೂರು,ಏ.27-ನಂಜನಗೂಡಿನ ಚಾಮಲಾಪುರ ಬೀದಿಯ ಮಸೀದಿ ಬಳಿ ಸುಮಾರು 40 ವರ್ಷದ ಅಪರಿಚಿತ ವ್ಯಕ್ತಿಯ ಶವ ಪತ್ತೆಯಾಗಿದ್ದು, ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸುಮಾರು 40 ವರ್ಷದ ಮೃತ ವ್ಯಕ್ತಿಯು 5.5 ಅಡಿ ಎತ್ತರ, ಗೋದಿ ಮೈಬಣ್ಣ ಹೊಂದಿರುತ್ತಾರೆ. ಯಾವುದೋ ಖಾಯಿಲೆಯಿಂದ ಬಳಲಿ ಮೃತಪಟ್ಟಿದ್ದಾರೆಂದು ಶಂಕಿಸಲಾಗಿದೆ. ವಾರಸುದಾರರು ದೂ. ಸಂಖ್ಯೆ: 0821-2520040, 0821-2444800, 0821-228383 ಸಂಪರ್ಕಿಸಬಹುದು.

ಅಂಬೇಡ್ಕರ್ ಕೊಟ್ಟ ಸಂವಿಧಾನದ ಆಶಯದಂತೆ

ರಾಜಕಾರಣದಿಂದ ಧರ್ಮ ಬೇರ್ಪಡಿಸಬೇಕಿದೆ

● ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಭಿಮತ ● ಡಾ.ಬಿ.ಆರ್.ಅಂಬೇಡ್ಕರ್ 131ನೇ ಜನ್ಮ ದಿನೋತ್ಸವ



ಮೈಸೂರಿನ ಮಾನಸ ಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಅಂಬೇಡ್ಕರ್ ಅವರ 131ನೇ ಜನ್ಮ ದಿನೋತ್ಸವ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪುಷ್ಪ ನಮನ ಸಲ್ಲಿಸಿದರು.

ಮೈಸೂರು,ಏ.28(ಪಿಎಂ)- ಇಂದು ಧರ್ಮವನ್ನು ರಾಜಕಾರಣದಿಂದ ಬೇರ್ಪಡಿಸಬೇಕು. ಅದೇ ಡಾ.ಬಿ.ಆರ್.ಅಂಬೇಡ್ಕರ್ ಅವರು ಕೊಟ್ಟ ಸಂವಿಧಾನದ ಮೂಲ ಆಶಯ ಎಂದು ಮಾಜಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಅಭಿಪ್ರಾಯಪಟ್ಟರು.

ಮೈಸೂರಿನ ಮಾನಸ ಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ಮೈಸೂರು ವಿವಿ ಸಂಶೋಧಕರ ಸಂಘ ಮತ್ತು ದಲಿತ ವಿದ್ಯಾರ್ಥಿ ಒಕ್ಕೂಟದ ಜಂಟಿ ಆಶ್ರಯದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ 131ನೇ ಜನ್ಮ ದಿನೋತ್ಸವ ಕಾರ್ಯಕ್ರಮವನ್ನು ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಅಂಬೇಡ್ಕರ್ ಅವರು ಭಾರತೀಯತೆಯನ್ನು ಎತ್ತಿ ಹಿಡಿದಿದ್ದು, ಒಬ್ಬ ಮಹಾನ್ ರಾಷ್ಟ್ರೀಯವಾದಿ. ಅಂತಹ ಮಹಾನ್ ನಾಯಕ. ಯಾವುದೇ ಧರ್ಮ-ಜಾತಿಯನ್ನೂ ಅವರು ದ್ವೇಷದಿಂದ ಕಂಡವರಲ್ಲ. ಎಲ್ಲಾ ಸವಾಲುಗಳನ್ನು ಅಹಿಂಸಾತ್ಮಕ ಮಾರ್ಗ ಮತ್ತು ತಮ್ಮ ಪಾಂಡಿತ್ಯದ ಮೂಲಕ ಎದುರಿಸಿದರು. ಅವರು ಸಕಲ ಜೀವಕೋಶಗಳನ್ನು ಪ್ರೀತಿಸಿದವರು. ಎಲ್ಲರನ್ನೂ ಒಟ್ಟುಗೂಡಿಸಿ ಬಹುತ್ವದ ಭಾರತ ನಿರ್ಮಿಸುವುದು ಅವರ ಮೂಲ ಉದ್ದೇಶವಾಗಿತ್ತು ಎಂದು ಹೇಳಿದರು.

ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯು ಸಂವಿಧಾನದ ಆಶಯದಂತೆ ಕಟ್ಟುನಿಟ್ಟಾಗಿ ನಡೆದುಕೊಳ್ಳಬೇಕು. ಆದರೆ ಆ ರೀತಿ ಆಗದ ಹಿನ್ನೆಲೆಯಲ್ಲಿ ಬಡತನ, ಅಸಮಾನತೆ, ಮಾನವ ಹಕ್ಕುಗಳ ಉಲ್ಲಂಘನೆ ಆಗುತ್ತಿದೆ. ಅಂಬೇಡ್ಕರ್ ಅವರು ಮಾನವ ಹಕ್ಕುಗಳ ಅಪ್ರತಿಮ ಹೋರಾಟಗಾರ. ಹಿಂದೂ ಧರ್ಮದ ದಮನಕಾರಿ ದುಷ್ಟ ಶಕ್ತಿಗಳ ವಿರುದ್ಧ ಬಂಡಾಯದ ದನಿಯಾಗಿ ಹೋರಾಟ ಮಾಡಿದ ಒಬ್ಬ ಶ್ರೇಷ್ಠ ನಾಯಕ ಎಂದರು.

1947ರಲ್ಲಿ ಅಂಬೇಡ್ಕರ್ ಕೊಟ್ಟ ಸಂವಿಧಾನ ಒಪ್ಪಲು ಸಿದ್ಧವಿಲ್ಲದಿದ್ದ ಎಲ್ಲಾ ಶಕ್ತಿಗಳು ಇಂದು ತಮ್ಮ ಗುರಿಯನ್ನು ಗಟ್ಟಿ ಮಾಡಿಕೊಳ್ಳಲು ಶುರು ಮಾಡಿವೆ. ಸ್ವಾತಂತ್ರ್ಯದ ಬಳಿಕ ಲೋಕಸಭಾ ಚುನಾವಣೆ ಆದಾಗ, ಅಧಿಕ ಸ್ಥಾನದೊಂದಿಗೆ ನೆಹರು ನಾಯಕತ್ವಕ್ಕೆ ಗೆಲುವು ದೊರೆಯಿತು. ಆಗ ಪ್ರಬಲ ವಿರೋಧ ಪಕ್ಷಗಳು ಅಗತ್ಯ ಎಂದು ನೆಹರು ಹೇಳಿದ್ದರು. ಆದರೆ ಇಂದಿನ ಪ್ರಧಾನಿಗಳು ಎಲ್ಲರನ್ನು ನಿರ್ನಾಮ ಮಾಡುತ್ತೇವೆ. ವಿರೋಧ ಪಕ್ಷಗಳೇ ಇರಬಾರದು ಎನ್ನುತ್ತಿದ್ದಾರೆ. ಅಂದರೆ ಹಿಟ್ಲರ್ ಆಡಳಿತದತ್ತ ಮುಖ ಮಾಡಲಾಗಿದೆ. ಎಲ್ಲಾ ಸಂವಿಧಾನದತ್ತ ಸಂಸ್ಥೆಗಳು ರಾಜಕೀಯ ಅಸ್ತ್ರವಾಗಿ ಬಳಕೆಯಾಗುತ್ತಿದ್ದು, ಈ ಸಂಸ್ಥೆಗಳು ಸರ್ವಾಧಿಕಾರಿ ರಾಜಕಾರಣದ ಕೈಗೊಂಬೆಗಳಾಗಿವೆ. ಇದನ್ನು ಪ್ರಶ್ನಿಸಿದವರನ್ನು ಜೈಲಿಗೆ ಹಾಕುವ ಪರಿಪಾಠವೂ ಶುರುವಾಗಿದೆ ಎಂದು ದೂರಿದರು.

ಈ ಕಾರಣಕ್ಕಾಗಿ ಇಂದು ದೇಶದ ಜನತೆ ಹೆಚ್ಚು ಜಾಗೃತರಾಗಿ ಅಂಬೇಡ್ಕರ್ ಚಿಂತನೆಗಳತ್ತ ಮುಖ ಮಾಡುತ್ತಿದ್ದಾರೆ. ಸಂವಿಧಾನ ಮತ್ತು ಪ್ರಜಾಪ್ರಭುತ್ವದ ರಕ್ಷಣೆಗೆ ನಮ್ಮ ಯುವ ಸಮುದಾಯ ತಮ್ಮ ಜವಾಬ್ದಾರಿ ಅರಿತು ಜನಜಾಗೃತಿ ಮೂಡಿಸಬೇಕಿದೆ. ಸಮಸಮಾಜ ಮತ್ತು ಬಹುತ್ವದ ರಾಷ್ಟ್ರ ನಿರ್ಮಾಣಕ್ಕಾಗಿ ಯುವ ಜನತೆ ಈ ಜಾಗೃತಿ ಮೂಡಿಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕಿದೆ ಎಂದು ಹೇಳಿದರು.

ಮೈಸೂರು ವಿವಿ ರಾಜಕೀಯ, ಗುಂಪುಗಾರಿಕೆಯಿಂದ ಮುಕ್ತವಾಗಿ ಸಾಮಾಜಿಕ ಚಳವಳಿಯ ಕೇಂದ್ರಬಿಂದು ಆಗಿತ್ತು. ಕಾಲಕ್ರಮೇಣ ವಿವಿಧ ರಾಜಕೀಯ ಪಕ್ಷಗಳು ಪ್ರವೇಶ ಪಡೆದು ವಿದ್ಯಾರ್ಥಿಗಳ ಮನಸ್ಸು ಕೂಡ ಸ್ವಲ್ಪ ಚಂಚಲವಾಯಿತು. ಆದರೆ ವಿದ್ಯಾರ್ಥಿಗಳ ಭವಿಷ್ಯ ಮುಖ್ಯವಾಗಿದ್ದು, ಅವರ ಭವಿಷ್ಯ ಉತ್ತಮವಾದರೆ ಮಾತ್ರ ಅಂಬೇಡ್ಕರ್ ಕಂಡ ಸಮೃದ್ಧ ಭಾರತದ ಕನಸು ನನಸು ಆಗಲಿದೆ ಎಂದರು.

ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ವಿವಿಯ ಡಾ.ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ.ಜೆ. ಸೋಮಶೇಖರ್ ಮುಖ್ಯ ಭಾಷಣ ಮಾಡಿದರು. ಮೈಸೂರು ನಗರ ಉಪ ಪೊಲೀಸ್ ಆಯುಕ್ತ ಪ್ರದೀಪ್ ಗುಂಟಿ, ಮಾಜಿ ಶಾಸಕ ಜಯಣ್ಣ ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಎನ್.ಮುನಿರಾಜು, ಮೈಸೂರು ವಿವಿ ಸಿಂಡಿಕೇಟ್ ಸದಸ್ಯೆ ಡಾ.ಚೈತ್ರಾ ನಾರಾಯಣ್, ಸಂಶೋಧಕರ ಸಂಘದ ಅಧ್ಯಕ್ಷ ನಟರಾಜ್ ಶಿವಣ್ಣ, ಮುಖಂಡರಾದ ಸೋಸಲೆ ಮಹೇಶ್, ಡಾ.ನಿಂಗರಾಜು, ಕಲ್ಲಹಳ್ಳಿ ಕುಮಾರ್ ಮತ್ತಿತರರು ಹಾಜರಿದ್ದರು.

ನಮ್ಮ ಸಮಾಜದಲ್ಲಿ ಜಾತಿಯು ಒಂದು ಮನಸ್ಥಿತಿ. ಜಾತಿ ಹೆಸರಿನಲ್ಲಿ ಮಾನವ ಹಕ್ಕುಗಳನ್ನು ದಮನ ಮಾಡಲಾಗುತ್ತಿದೆ ಎಂಬುದನ್ನು ಅರಿತಿದ್ದ ಅಂಬೇಡ್ಕರ್, ಇಂತಹ ಜಾತಿ ಗೋಡೆ ಭೇದಿಸಿ ಮುನ್ನಡೆಯಬಹುದೆಂದು ತೋರಿಸಿಕೊಟ್ಟಿದ್ದಾರೆ. ಹಾಗಾಗಿ ನಮ್ಮನ್ನು ಬೆಳೆಯಲು ವ್ಯವಸ್ಥೆ ಬಿಡುವುದಿಲ್ಲವೆಂಬ ನಿರ್ಲಕ್ಷ್ಯ ಭಾವದಿಂದ ಕಾಲ ಕಳೆಯುವುದು ಸಲ್ಲದು. ಅಂಬೇಡ್ಕರ್ ಅವರು ಕೇವಲ ಒಂದು ಜಾತಿ, ಒಂದು ವಿಷಯಕ್ಕೆ ಸೀಮಿತವಲ್ಲ. ಆರ್‌ಬಿಐ ಅವರ ದೂರದೃಷ್ಟಿಯ ಫಲ. ನಾವು ಅವರನ್ನು ಆದರ್ಶವಾಗಿಟ್ಟುಕೊಂಡು ಬೆಳೆದು ಅವರ ಕೊಡುಗೆಗಳನ್ನು ಅನಾವರಣಗೊಳಿಸಬೇಕು.
-ಪ್ರದೀಪ್ ಗುಂಟಿ, ಮೈಸೂರು ನಗರ ಉಪ ಪೊಲೀಸ್ ಆಯುಕ್ತ

ತಂಬಾಕು ಉತ್ಪಾದನೆ, ರಫ್ತಿನಲ್ಲಿ ಭಾರತಕ್ಕೆ 2ನೇ ಸ್ಥಾನ

ತಂಬಾಕು ಉತ್ಪನ್ನ ರಫ್ತಿನಿಂದ ವಾರ್ಷಿಕ 6500 ಕೋಟಿ ರೂ. ವಿದೇಶಿ ವಿನಿಮಯ: ಭಾರತೀಯ ತಂಬಾಕು ಕೇಂದ್ರದ ನಿರ್ದೇಶಕ ಶಾರದ್ ತಂಡನ್

ಹುಣಸೂರು, ಏ.28(ಕೆಕೆ)– ತಂಬಾಕು ಭಾರತದ ಪ್ರಮುಖ ವಾಣಿಜ್ಯ ಬೆಳೆಯಾಗಿದ್ದು, ಉತ್ಪಾದನೆ ಮತ್ತು ರಫ್ತಿನಲ್ಲಿ ವಿಶ್ವದಲ್ಲೇ 2ನೇ ಸ್ಥಾನದಲ್ಲಿದೆ. ತಂಬಾಕು ಉತ್ಪನ್ನ ರಫ್ತಿನಿಂದ ವಾರ್ಷಿಕ 6500 ಕೋಟಿ ರೂ. ವಿದೇಶಿ ವಿನಿಮಯ ಗಳಿಸಲಾಗುತ್ತಿದೆ ಎಂದು ಭಾರತೀಯ ತಂಬಾಕು ಕೇಂದ್ರದ ನಿರ್ದೇಶಕ ಶಾರದ್ ತಂಡನ್ ತಿಳಿಸಿದರು.



ನಗರದ ಸಾಯಿಬ್ರಹ್ಮ ಗುರು ಕನ್ವೆನ್ಷನ್ ಹಾಲ್‌ನಲ್ಲಿ ಭಾರತೀಯ ತಂಬಾಕು ಕೇಂದ್ರದಿಂದ ಏರ್ಪಡಿಸಿದ್ದ 21ನೇ ತಂಬಾಕು ಬೆಳೆಗಾರರ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ತಂಬಾಕು ಉದ್ಯಮ ಭಾರತದ ಆರ್ಥಿಕತೆಗೆ ಅಧ್ಯಯನಗಳ ಪ್ರಕಾರ 12 ಲಕ್ಷ ಕೋಟಿ ರೂ. ಕೊಡುಗೆ ನೀಡುತ್ತಿದೆ ಎಂದರು.

ಭಾರತದಲ್ಲಿ ಗೋಲ್ಡನ್ ಲೀಫ್ ತಂಬಾಕಿನ ಮೇಲೆ ರೈತರು, ಕಾರ್ಮಿಕರು, ಬೀಡಿ ಕಾರ್ಮಿಕರು ವ್ಯಾಪಾರಿಗಳು ಸೇರಿದಂತೆ ಲಕ್ಷಾಂತರ ಕುಟುಂಬಗಳು ಅವಲಂಬಿತವಾಗಿವೆ. ಇದು ಲಾಭದಾಯಕ ಬೆಳೆಯಾಗಿದ್ದು, ಜನರ ಜೀವನೋಪಾಯಕ್ಕೆ ಆಧಾರವಾಗಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಭಾರತೀಯ ತಂಬಾಕಿನ ಸ್ಪರ್ಧೆ ಹೆಚ್ಚಿಸಲು ಮತ್ತು ರಫ್ತು ಉತ್ತೇಜಿಸಲು ಸರ್ಕಾರ ತಂಬಾಕು ರಫ್ತಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕಿದೆ ಎಂದರು.

ತಂಬಾಕು ಉತ್ಪನ್ನ ಸಿಗರೇಟ್ ಮೇಲೆ ಹೆಚ್ಚಿನ ತೆರಿಗೆ ವಿಧಿಸುವುದರಿಂದ ಕಳ್ಳ ಸಾಗಾಣೆ ಮಾಡುವವರಿಗೆ ಹಾಗೂ ತೆರಿಗೆ ವಂಚಿಸುವವರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದರು. ಅಕ್ರಮ ಸಿಗರೇಟ್ ಮಾರಾಟದಲ್ಲಿ ಭಾರತ ವಿಶ್ವದಲ್ಲೇ 4ನೇ ಸ್ಥಾನದಲ್ಲಿದೆ. ಇದರಿಂದ ವಾರ್ಷಿಕವಾಗಿ ಸರ್ಕಾರಕ್ಕೆ 15 ಸಾವಿರ ಕೋಟಿ ರೂ.ಗಳಿಗೂ ಹೆಚ್ಚು ಆದಾಯ ನಷ್ಟವಾಗುತ್ತಿದೆ. ಭಾರತೀಯ ಕಾನೂನುಬದ್ಧ ಸಿಗರೇಟ್ ಮಾರುಕಟ್ಟೆಯಲ್ಲಿ ಶೇ.33ರಷ್ಟು ಅಕ್ರಮ ಸಿಗರೇಟ್ ಮಾರುಕಟ್ಟೆ ಇದ್ದು, ಇದರಿಂದ ಕಾನೂನುಬದ್ಧ ವ್ಯಾಪಾರಕ್ಕೆ ಭಾರೀ ಹೊಡೆತ ಬೀಳಲಿದೆ. ರೈತರ ಆದಾಯದ ಮೇಲೂ ಪರಿಣಾಮ ಬೀರುತ್ತಿದೆ ಎಂದರು.

ಸ್ಥಳೀಯವಾಗಿ ಬೆಳೆಯುವ ತಂಬಾಕನ್ನು ತಮ್ಮ ಉತ್ಪನ್ನದಲ್ಲಿ ಬಳಸದ ಹಾಗೂ ಅಕ್ರಮ ಸಿಗರೇಟ್ ವ್ಯಾಪಾರ ಹೆಚ್ಚಾಗುತ್ತಿರುವ ಪರಿಣಾಮ ಭಾರತೀಯ ಎಫ್‌ಸಿವಿ ತಂಬಾಕು ಬೆಳೆಗಾರರ ಮೇಲೆ ಹೆಚ್ಚಿನ ಪರಿಣಾಮ ಬೀರಲಿದೆ. 2013–14ರಲ್ಲಿ 316 ದಶಲಕ್ಷ ಕೆಜಿ ಸಾಮಾನ್ಯ ಬೆಳೆಯಿಂದ ಕಳೆದ 5 ವರ್ಷಗಳಲ್ಲಿ ಬೆಳೆ ಕುಸಿತವಾಗಿ ಪ್ರತಿ ವರ್ಷ 218 ದಶಲಕ್ಷ ಕೆಜಿಗೆ ಇಳಿದಿದೆ. ಎಫ್‌ಸಿವಿ ತಂಬಾಕು ಉತ್ಪಾದನೆಯಲ್ಲಿ ಕುಸಿತ ಕಂಡಿರುವುದರಿಂದ ದೇಶದಲ್ಲಿ ತಂಬಾಕು ಬೆಳೆಯುವ ರೈತರು ಮತ್ತು ತಂಬಾಕು ಕಾರ್ಮಿಕರ ಜೀವನೋಪಾಯಕ್ಕೆ ಸಂಕಷ್ಟ ಎದುರಾಗಿದೆ. ದೇಶದಲ್ಲಿ ಎಫ್‌ಸಿವಿ ತಂಬಾಕು ಬೆಳೆ ಕುಸಿತದಿಂದ 35 ದಶಲಕ್ಷ ಮಾನವ ಉದ್ಯೋಗ ದಿನಗಳು ನಷ್ಟವಾಗಿವೆ ಎಂದು ಅಂದಾಜಿಸಲಾಗಿದೆ. ಇದು ರೈತರ ಆದಾಯವನ್ನು ಅತ್ಯಂತ ದೊಡ್ಡ ಪ್ರಮಾಣದಲ್ಲಿ ಕುಗ್ಗಿಸಿದೆ ಎಂದರು.

ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿ, ತಂಬಾಕು ಬೆಳೆಗಾರರಿಗೆ ದಂಡ ಹಾಕುವುದು ಅವೈಜ್ಞಾನಿಕ ಪದ್ಧತಿಯಾಗಿದ್ದು, ಇದನ್ನು ತೆಗೆದು ಹಾಕಿ ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದು ಒತ್ತಾಯಿಸಿದರು.

ಸಂಸದ ಪ್ರತಾಪ್ ಸಿಂಹ ಮಾತನಾಡಿ, ಈ ಹಿಂದೆ ತಂಬಾಕು ಬೆಳೆಗಾರರಿಗೆ ವಿಧಿಸುತ್ತಿದ್ದ ದಂಡವನ್ನು ಶೇ.15ರಿಂದ ಶೇ.5ಕ್ಕೆ ಇಳಿಸಲಾಗಿದೆ. ಮುಂದಿನ ದಿನಗಳಲ್ಲಿ ಈ ಬಗ್ಗೆ ವಾಣಿಜ್ಯ ಮಂತ್ರಿ ಸಚಿವಾಲಯದಲ್ಲಿ ಮಾತನಾಡಿ, ಯಾವುದೇ ದಂಡ ವಿಧಿಸದಂತೆ ಕ್ರಮ ಕೈಗೊಳ್ಳಲಾಗುವುದು. ಅಲ್ಲದೇ ಈಗಿರುವ ಅಧಿಕೃತ ಮತ್ತು ಅನಧಿಕೃತ ತಂಬಾಕು ಬೆಳೆಗಾರರು ಎಂದು ವಿಂಗಡಿಸಿರುವ ಪದ್ಧತಿ ತೆಗೆದು ಹಾಕಲಾಗುವುದು ಎಂದರು. ಇದೇ ವೇಳೆ ಕಾರ್ಯಕ್ರಮದಲ್ಲಿ 10 ಮಂದಿ ರೈತರಿಗೆ ಅತ್ಯುತ್ತಮ ತಂಬಾಕು ಬೆಳೆಗಾರ ಮತ್ತು ಗುರುತಿಸುವಿಕೆ ಎಂಬ 2 ಪ್ರತ್ಯೇಕ ವಿಭಾಗಗಳಲ್ಲಿ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಹುಣಸೂರಿನ ಸೀರೇನಹಳ್ಳಿ ಗ್ರಾಮದ ಕುಚೇಲೇಗೌಡ, ಗಾವಡಗೆರೆಯ ದೇವನಾಯಕ, ಎಂ.ಪಿ.ಕೊಪ್ಪಲ್‌ನ ಎಂ.ಎನ್.ರಾಮಚಂದ್ರ, ಕೊತ್ತೇಗಾಲದ ಕೆ.ಟಿ.ಸುರೇಶ್, ಪಿರಿಯಾಪಟ್ಟಣದ ಹರಿಲಾಪುರದ ಎಚ್.ಎಂ.ಪರಮೇಶ, ಕೊತ್ತವಳ್ಳಿ ಕೊಪ್ಪಲ್ ಗ್ರಾಮದ ರಘು, ಹಲಗನಹಳ್ಳಿ ಗ್ರಾಮದ ಅಸ್ಲಾಂ ಪಾಷಾ, ರಾಮನಾಥಪುರದ ಲಕ್ಕಿಕುಪ್ಪೆ ಗ್ರಾಮದ ರಾಮಕೃಷ್ಣ, ಸಿಬಳ್ಳಿಯ ಎಸ್.ವಿ. ಯೋಗಣ್ಣ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ತಂಬಾಕು ಮಂಡಳಿ ಛೇರ್ಮನ್ ರಘುನಂದನ್ ಬಾಬು, ಕೇಂದ್ರಿಯ ತಂಬಾಕು ಸಂಶೋಧನಾ ಕೇಂದ್ರದ ಡಾ.ರಾಮಕೃಷ್ಣ, ಆರ್‌ಎಂಓ ಸತ್ಯಪ್ರಕಾಶ್, ನಿರ್ದೇಶಕರಾದ ಜವರೇಗೌಡ, ಸಿದ್ದಮಲ್ಲೇಶ್ವರರೆಡ್ಡಿ, ಬಿ.ಎನ್.ಜಯರಾಂ ಇನ್ನಿತರರಿದ್ದರು.

ಪತ್ರ ಬರಹಗಾರರ ಪ್ರಗತಿಪರ ವೇದಿಕೆ ಉದ್ಘಾಟನೆ



ತಿ.ನರಸೀಪುರ, ಏ.28(ಎಸ್‌ಕೆ)– ಪತ್ರ ಬರಹಗಾರ ವೃತ್ತಿ ಬಾಂಧವರನ್ನು ಜಾಗೃತಿಗೊಳಿಸಿ, ವಿವಿಧ ಪ್ರಗತಿಪರ ಕಾರ್ಯ ಮಾಡಲು ಪತ್ರ ಬರಹಗಾರರ ಪ್ರಗತಿಪರ ವೇದಿಕೆ ಸದಾ ಜಾಗೃತವಾಗಿರಬೇಕು ಎಂದು ವೇದಿಕೆ ನೂತನ ಅಧ್ಯಕ್ಷ ನಾಗರಾಜು ತಿಳಿಸಿದರು.

ಪಟ್ಟಣದ ಕಪಿನಿ ಅತಿಥಿ ಗೃಹದಲ್ಲಿ ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಪತ್ರ ಬರಹಗಾರರ ಪ್ರಗತಿಪರ ವೇದಿಕೆಯನ್ನು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಪತ್ರ ಬರಹಗಾರರಾದ ನಾವು ಇಲಾಖೆಯ ಕಾಲಕಾಲಕ್ಕೆ ಸೂಚಿಸುವ ನೀತಿ ನಿಯಮಗಳನ್ನು ಅನುಸರಿಸಿ ಮತ್ತು ಸಾರ್ವಜನಿಕರೊಂದಿಗೆ ಉತ್ತಮ ಬಾಂಧವ್ಯ ಬೆಸೆದು ವೃತ್ತಿ ನಿರ್ವಹಿಸಲು ಮುಂದಾಗಬೇಕೆಂದು ಸದಸ್ಯರಿಗೆ ತಿಳಿಸಿದರು.

ಕೋಶಾಧ್ಯಕ್ಷ ಲೋಕೇಶ್ ಮಾತನಾಡಿ, ರಾಜ್ಯ ಪತ್ರ ಬರಹಗಾರರ ಹಿತವೃದ್ಧಿಯಂದ ರಾಜ್ಯದ ಸಂಘಟನೆಗೆ ಶಕ್ತಿ ತುಂಬಲು, ನಮ್ಮ ವ್ಯಾಪ್ತಿಯ ವೃತ್ತಿನಿರತ ಆಸಕ್ತ ಪತ್ರ ಬರಹಗಾರರನ್ನು ಸಂಘಟಿಸಲು ತಾಲೂಕಿನಲ್ಲಿ ವೇದಿಕೆ ಅಸ್ತಿತ್ವಕ್ಕೆ ತರಲಾಗಿದೆ. ತಾಲೂಕಿನ ಹೋಬಳಿ ಮಟ್ಟದಲ್ಲೂ ವೇದಿಕೆ ಪರ ಸೇವೆ ಮಾಡಲು ಆಸಕ್ತರನ್ನು ಗುರುತಿಸಿ ಅವರ ಮೂಲಕ ಉಪ ಶಾಖೆ ತೆರೆಯಲು ವೇದಿಕೆ ನಿರ್ಧರಿಸಿದೆ. ಎಂದರು. ಈ ವೇಳೆ ನೂತನ ಪದಾಧಿಕಾರಿಗಳಿಗೆ ಪ್ರಮಾಣ ವಚನ ಬೋಧನೆ ಮಾಡಿದರು. ಸಭೆಯಲ್ಲಿ ಗೌರವಾಧ್ಯಕ್ಷ ಚಿಕ್ಕಲಿಂಗಯ್ಯ, ಉಪಾಧ್ಯಕ್ಷ ಎಸ್.ಶಿವಶಂಕರ್, ಪ್ರಧಾನ ಕಾರ್ಯದರ್ಶಿಯಾಗಿ ಎಸ್.ಸುರೇಶ್, ಸಹ ಕಾರ್ಯದರ್ಶಿ ಗವಿಸಿದ್ದಯ್ಯ, ಖಜಾಂಚಿ ಬಿ.ರಮೇಶ್, ನಿರ್ದೇಶಕರಾದ ಎಸ್.ಸಿದ್ದು, ನಾಗರಾಜು, ಎ.ಎಂ.ರಮೇಶ್, ರವಿಶಂಕರ್, ರೇವಣ್ಣ ಇತರರಿದ್ದರು.

ಹಿಂದುಳಿದ ವರ್ಗಗಳ ಮೀಸಲಾತಿ ರಕ್ಷಣೆ, ಸಂವಿಧಾನ ಉಳಿವಿಗೆ

ಐಕ್ಯತಾ ಸಮಾವೇಶ ಅನಿವಾರ್ಯ: ಸುಬ್ರಹ್ಮಣ್ಯ

ಮೇ 4 ರಂದು ಮೈಸೂರಲ್ಲಿ ಬೃಹತ್ ಐಕ್ಯತಾ ಸಮಾವೇಶ



ಹೆಚ್.ಡಿ.ಕೋಟೆ, ಏ.28(ಮಂಜು)– ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಮೀಸಲಾತಿ ರಕ್ಷಣೆ ಮತ್ತು ಸಂವಿಧಾನ ಉಳಿವಿಗೆ ಹಿಂದುಳಿದ ವರ್ಗಗಳು ಶೋಷಿತ ಸಮುದಾಯಗಳ ಐಕ್ಯತಾ ಸಮಾವೇಶ ಮಾಡುವ ಅನಿವಾರ್ಯತೆ ಉಂಟಾಗಿದೆ ಎಂದು ಕುರುಬರ ಸಂಘದ ರಾಜ್ಯಾಧ್ಯಕ್ಷ ಸುಬ್ರಹ್ಮಣ್ಯ ತಿಳಿಸಿದರು.

ಪಟ್ಟಣದ ಕನಕ ಭವನದಲ್ಲಿ ನಡೆದ ಹಿಂದುಳಿದ ವರ್ಗಗಳ ಸಮುದಾಯಗಳ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಸಂವಿಧಾನದ ಉಳಿವಿಗಾಗಿ, ಹಿಂದುಳಿದ ವರ್ಗಗಳ ಮೀಸಲಾತಿ ರಕ್ಷಣೆಗೆ ಮೇ 4 ರಂದು ಮೈಸೂರಿನ ಜೆ.ಕೆ. ಮೈದಾನದಲ್ಲಿ ಬೃಹತ್ ಐಕ್ಯತಾ ಸಮಾವೇಶ ನಡೆಸಲಾಗುತ್ತದೆ ಎಂದರು.

ಲೋಕಸಭೆ, ವಿಧಾನಸಭೆಯಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಇಲ್ಲದ ಕಾರಣ ರಾಜಕೀಯವಾಗಿ ಹಿನ್ನಡೆ ಅನುಭವಿಸುತ್ತಿವೆ. ಇದೀಗ ಸ್ಥಳೀಯ ಸಂಸ್ಥೆಗಳ ಮೀಸಲಾತಿಗೂ ಸಂಚಕಾರ ಬಂದಿದ್ದು, ಹೋರಾಟ ಅನಿವಾರ್ಯವಾಗಿದೆ. 1993ರಲ್ಲಿ ಶೇ.33 ರಷ್ಟಿದ್ದ ಹಿಂದುಳಿದವರ ಮೀಸಲಾತಿ 2010ರ ವೇಳೆಗೆ ಶೇ.27ಕ್ಕೆ ಇಳಿಕೆಯಾಗಿದೆ. ಪ್ರಸ್ತುತ ಜಿಪಂ, ತಾಪಂ ಚುನಾವಣೆಗೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದೆ. ಸರ್ಕಾರ ಜವಾಬ್ದಾರಿಯುತವಾಗಿ ನಡೆದುಕೊಳ್ಳದಿದ್ದರೆ ಹಿಂದುಳಿದವರ ಮೀಸಲಾತಿ ಕೈ ತಪ್ಪುವ ಆತಂಕವಿದೆ. ಹೀಗಾಗಿ ಹಿಂದುಳಿದ ಮತ್ತು ಶೋಷಿತ ಸಮಾಜಗಳು ಮೀಸಲಾತಿ ಉಳಿಸಿಕೊಳ್ಳುವ ಜೊತೆಗೆ ಸಂವಿಧಾನ ರಕ್ಷಣೆಗೆ ಮುಂದಾಗಬೇಕಿದೆ. ಅಲ್ಲದೇ ರಾಜಕೀಯ ಪ್ರಜ್ಞಾವಂತಿಕೆ ದೂರದೃಷ್ಟಿ ರೂಢಿಸಿಕೊಂಡು 2023ರ ಚುನಾವಣೆಯಲ್ಲಿ ಬಹುಜನ ವರ್ಗ ನಿರ್ಣಾಯಕ ಶಕ್ತಿಯಾಗಬೇಕೆಂಬುದು ಈ ಐಕ್ಯತಾ ಸಮಾವೇಶದ ಆಶಯವಾಗಿದೆ ಎಂದರು.

ಈ ವೇಳೆ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ರಾಮಚಂದ್ರಪ್ಪ, ಕುರುಬ ಸಮಾಜದ ಜಿಲ್ಲಾಧ್ಯಕ್ಷ ಶಿವಪ್ಪ ಕೋಟೆ, ತಾಲೂಕು ಅಧ್ಯಕ್ಷ ಆನಂದ್, ಕಾರ್ಯದರ್ಶಿ ಚಿಕ್ಕಣ್ಣ, ವಿವಿಧ ಸಮುದಾಯದ ಮುಖಂಡರಾದ ನಾಗೇಶ್, ರೇವಣ್ಣ, ಪ್ರಕಾಶ್, ದೀಪು, ನರಸಿಂಹ, ಸುರೇಶ್, ಹನುಮಂತ, ವೆಂಕಟೇಶ್, ನಾಗೇಶ, ಬೀರೇಗೌಡ, ಶಿವಮಲ್ಲು, ನಾಗೇಂದ್ರ, ನರಸಿಂಹ, ಕುಮಾರೇಗೌಡ, ರವಿ, ಕುಮಾರ ಸೇರಿದಂತೆ ಉಪಸ್ಥಿತರಿದ್ದರು.

‘ಕೈ’ ತೊರೆದು ಜೆಡಿಎಸ್ ಸೇರುವ ಪ್ರಶ್ನೆಯೇ ಇಲ್ಲ

ವಸತಿ ಯೋಜನೆ ಜಾಗೃತಿ ಸಮಿತಿ ಮಾಜಿ ಅಧ್ಯಕ್ಷ ಸುನೀಲ್ ಬೋಸ್ ಸ್ಪಷ್ಟನೆ

ತಿ.ನರಸೀಪುರ, ಏ.28(ಎಸ್‌ಕೆ)– ಕಾಂಗ್ರೆಸ್ ನಮಗೆ ಎಲ್ಲಾ ರೀತಿಯ ಅಧಿಕಾರ ನೀಡಿದೆ. ಹೀಗಾಗಿ ಪಕ್ಷತೊರೆದು ಜೆಡಿಎಸ್‌ಗೆ ಹೋಗುವ ಪ್ರಶ್ನೆಯೇ ಇಲ್ಲ ಎಂದು ವಸತಿ ಯೋಜನೆ ಜಾಗೃತಿ ಸಮಿತಿ ಮಾಜಿ ಅಧ್ಯಕ್ಷ ಸುನೀಲ್ ಬೋಸ್ ಸ್ಪಷ್ಟಪಡಿಸಿದರು.



2 ತಿಂಗಳ ಹಿಂದೆ ತಾಲೂಕಿನ ಸೀಹಳ್ಳಿ ಗ್ರಾಮದಲ್ಲಿ ಮನೆಯೊಂದಕ್ಕೆ ಆಕಸ್ಮಿಕ ಬೆಂಕಿ ಬಿದ್ದು ಸೋಮಶೇಖರ್ ಎಂಬಾತ ಮೃತಪಟ್ಟಿದ್ದ ಹಿನ್ನೆಲೆಯಲ್ಲಿ ಗುರುವಾರ ಮೃತನ ಕುಟುಂಬಕ್ಕೆ ವೈಯಕ್ತಿಕ ಧನ ಸಹಾಯ ನೀಡಿ ಅವರು ಮಾತನಾಡಿದರು.

ನಮಗೆ ಜೆಡಿಎಸ್‌ಗೆ ಹೋಗುವ ಅನಿವಾರ್ಯತೆ ಇಲ್ಲ. ನಾವು ಈ ಹಿಂದೆ ಜೆಡಿಎಸ್‌ನಲ್ಲಿದ್ದು ಮಾಜಿ ಸಿಎಂ ಸಿದ್ದರಾಮಯ್ಯ ಅವರನ್ನು ಬೆಂಬಲಿಸಿ ಪಕ್ಷ ತೊರೆದು ಬಂದಿದ್ದು. ಪಕ್ಷದಲ್ಲಿ ನಮ್ಮ ತಂದೆ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಉನ್ನತ ಸ್ಥಾನಮಾನ ನೀಡಿ ಗೌರವಿಸಲಾಗಿದೆ. ಹಾಗಾಗಿ ನಾವು ಜೆಡಿಎಸ್‌ಗೆ ಹೋಗುತ್ತೇವೆ ಎಂಬುದು ಸುಳ್ಳು ಸುದ್ದಿ. ನಮ್ಮ ಏಳಿಗೆ ಸಹಿಸದ ಕೆಲವರು ಇಂತಹ ಸುಳ್ಳು ಸುದ್ದಿ ಹರಡಿಸಿರಬಹುದು ಎಂದರು.

ತಂದೆ ಕೆಲಸ ನನಗೆ ಶ್ರೀರಕ್ಷೆ: ಮುಂಬರುವ ಚುನಾವಣೆಗೆ ಕೈಗೊಂಡಿರುವ ಸಿದ್ಧತೆ ಬಗ್ಗೆ ಪ್ರಶ್ನಿಸಿದ ಅವರು, ವಿಶೇಷ ತಯಾರಿ ಏನೂ ಇಲ್ಲ. ದಿನ ನಿತ್ಯ ಜನರ ಮಧ್ಯೆ ಇದ್ದು ಅವರ ಕಷ್ಟ ಸುಖಗಳಿಗೆ ಸ್ಪಂದಿಸುವ ಕೆಲಸ ಮಾಡುತ್ತಿದ್ದೇನೆ. ನಾನು ಹೋದ ಲೆಲ್ಲಾ ಕ್ಷೇತ್ರದ ಜನತೆಯಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಕ್ಷೇತ್ರಾದ್ಯಂತ ನಮ್ಮ ತಂದೆ ಮಾಡಿರುವ ಅಭಿವೃದ್ಧಿ ಕಾರ್ಯಗಳು ನನಗೆ ಶ್ರೀರಕ್ಷೆಯಾಗಲಿವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಶಾಸಕರು ಕ್ಷೇತ್ರಕ್ಕೆ ತಂದ ಅನುದಾನದ ಬಗ್ಗೆ ತಿಳಿಸಲಿ: ಶಾಸಕರು ತಮ್ಮ ಅಧಿಕಾರ ಅವಧಿಯಲ್ಲಿ ಕ್ಷೇತ್ರಕ್ಕೆ ತಂದಿರುವ ಅನುದಾನ ಬಗ್ಗೆ ನಾನು ಈ ಹಿಂದೆಯೇ ಕೇಳಿದ್ದೆ, ಆದರೆ ಅವರು ಮೌನ ವಹಿಸಿದ್ದಾರೆ. ನಮ್ಮ ತಂದೆ ಶಾಸಕರಾಗಿದ್ದ ವೇಳೆ ಅವರು ಮಾಡಿದ್ದ ಅಭಿವೃದ್ಧಿ ಕಾಮಗಾರಿಗಳಿಗೆ ಮತ್ತೊಮ್ಮೆ ಭೂಮಿ ಪೂಜೆ ಮಾಡಲಾಗುತ್ತಿದೆ. ಶಾಸಕರು ಕ್ಷೇತ್ರದ ಜನರಿಗೆ ಸುಳ್ಳು ಹೇಳದೆ ಸತ್ಯ ಹೇಳಲಿ. ಬೇರೆಯವರ ಅನುದಾನವನ್ನು ನಾನೇ ತಂದೆ ಎಂದು ಜನರನ್ನು ದಾರಿ ತಪ್ಪಿಸುವುದು ಬೇಡ. ನೀವು ಶಾಸಕರಾಗಿ 4 ವರ್ಷಗಳಾಗಿವೆ. ಈಗಲಾದರೂ ಜನರ ಮುಂದೆ ನೀವು ಕ್ಷೇತ್ರಕ್ಕೆ ತಂದ ಅನುದಾನದ ಬಗ್ಗೆ ಸತ್ಯ ಹೇಳಿ ಎಂದು ಶಾಸಕ ಅಶ್ವಿನ್ ಕುಮಾರ್ ಅವರನ್ನು ಆಗ್ರಹಿಸಿದರು.

ಈ ವೇಳೆ ಕೊತ್ತೇಗಾಲ ಗ್ರಾಪಂ ಅಧ್ಯಕ್ಷ ಮರಿಸ್ವಾಮಿ, ಮಾಜಿ ಉಪಾಧ್ಯಕ್ಷ ಕುಮಾರಸ್ವಾಮಿ, ಗ್ರಾಪಂ ಸದಸ್ಯ ಮಲ್ಲಪ್ಪ, ಲಕ್ಷ್ಮಣ್, ತಾಪಂ ಮಾಜಿ ಸ್ಥಾಯಿ ಸಮಿತಿ ಅಧ್ಯಕ್ಷ ಗಣೇಶ್, ಅನುಪ್‌ಗೌಡ, ಆಪ್ತ ಸಹಾಯಕ ಬಸವರಾಜು, ಉಪನ್ಯಾಸಕ ಬಸವರಾಜು, ಕೆ.ಎಂ.ಕುಮಾರಸ್ವಾಮಿ, ಗ್ರಾಪಂ ಮಾಜಿ ಸದಸ್ಯ ಬಸವರಾಜು, ಮಹದೇವ್, ಶಿವಶಂಕರ್, ಮಹದೇವಸ್ವಾಮಿ, ನಾಗರಾಜು, ಗ್ರಾಪಂ ಸದಸ್ಯ ಪರಶಿವಮೂರ್ತಿ, ಶಾಂತರಾಜು ಮತ್ತಿತರರಿದ್ದರು.

ಮೇ 1ಕ್ಕೆ ಉಚಿತ ಬೃಹತ್ ಆರೋಗ್ಯ ತಪಾಸಣಾ ಶಿಬಿರ



ನಂಜನಗೂಡು, ಏ.28(ಸುಧೀರ್)– ರೋಟರಿ ಸಂಸ್ಥೆ ನಂಜನಗೂಡು ಮತ್ತು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಸಹಯೋಗದೊಂದಿಗೆ ಮೇ 1ರಂದು ನಗರದ ಜೆಎಸ್‌ಎಸ್ ಮಂಗಳ ಮಂಟಪದಲ್ಲಿ ಉಚಿತ ಬೃಹತ್ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ ಎಂದು ಜೆಎಸ್‌ಎಸ್ ಆಸ್ಪತ್ರೆ ನಿರ್ದೇಶಕ ಶ್ಯಾಂಪ್ರಸಾದ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 3ರವರೆಗೆ ಆರೋಗ್ಯ ಶಿಬಿರ ನಡೆಯಲಿದ್ದು, ಹೃದಯಕ್ಕೆ ಸಂಬಂಧಿಸಿದ ಸಮಸ್ಯೆಗಳು, ಕಿವಿ, ಮೂಗು, ಗಂಟಲು, ಕಣ್ಣಿನ ತೊಂದರೆ, ರಕ್ತದೊತ್ತಡ, ವಾತಪಿತ್ತ, ಮೂಳೆ, ಚರ್ಮಕ್ಕೆ ಸಂಬಂಧಿಸಿದ ತೊಂದರೆಗಳಿಗೆ ಚಿಕಿತ್ಸೆ ದೊರೆಯಲಿದೆ. ಮಕ್ಕಳ ತಜ್ಞರು, ದಂತ ತಜ್ಞರು ಸೇರಿದಂತೆ 11 ವಿಭಾಗಗಳ ನುರಿತ ವೈದ್ಯರ ತಂಡ ಪರೀಕ್ಷೆ ನಡೆಸಲಿದ್ದಾರೆ. ಇಸಿಜಿ, ಹಾರ್ಟ್ ಸ್ಕ್ಯಾನಿಂಗ್ ಮೆಷಿನ್ ಸೌಲಭ್ಯದಿಂದ ಸ್ಥಳದಲ್ಲೇ ಪರೀಕ್ಷೆ ನಡೆಸಿ ಉಚಿತವಾಗಿ ಔಷಧಿಗಳನ್ನು ವಿತರಿಸಲಾಗುತ್ತದೆ. ಈ ಅವಕಾಶ ಸದುಪಯೋಗಪಡಿಸಿಕೊಳ್ಳುವಂತೆ ಮನವಿ ಮಾಡಿದರು.

ಡಾ.ಶ್ರೀಕಾಂತ್ ಮಾತನಾಡಿ, ಶಿಬಿರದಲ್ಲಿ ವಿಶೇಷವಾಗಿ ಕಿಡ್ನಿಯ ಸಂಸ್ಥೆ ತಂಡ ಭಾಗವಹಿಸಲಿದ್ದು, ಕ್ಯಾನ್ಸರ್ ಗೆ ಸಂಬಂಧಿಸಿದ ತಪಾಸಣೆ ನಡೆಸಲಾಗುತ್ತದೆ. ಬೇರೆಡೆ ಕ್ಯಾನ್ಸರ್ ಪರೀಕ್ಷೆಗೆ ಸಾವಿರಾರು ರೂ. ಖರ್ಚಾಗಲಿದ್ದು ಶಿಬಿರದಲ್ಲಿ ಉಚಿತವಾಗಿ ತಪಾಸಣೆ ನಡೆಸಲಾಗುವುದು. ವಿಶೇಷ ಚಿಕಿತ್ಸೆ ಅವಶ್ಯಕತೆ ಇದ್ದವರಿಗೆ ಆಸ್ಪತ್ರೆಗೆ ದಾಖಲಿಸಲಾಗುವುದು. ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ ಸರ್ಕಾರದ ನಿಯಮಾವಳಿ ಪ್ರಕಾರ ಉಚಿತ ಚಿಕಿತ್ಸೆ ನೀಡಲಾಗುವುದು. ಕಾರ್ಡ್ ಹೊಂದಿಲ್ಲದವರಿಗೆ ರಿಯಾಯಿತಿ ದರದಲ್ಲಿ ಚಿಕಿತ್ಸೆ ನೀಡಲಾಗುವುದು ಮತ್ತು ಆಧಾರ್ ಕಾರ್ಡ್ ನೊಂದಿಗೆ ಶಿಬಿರದಲ್ಲಿ ಭಾಗವಹಿಸಬೇಕೆಂದು ಕೋರಿದರು.

ರೋಟರಿ ಸಂಸ್ಥೆ ಕಾರ್ಯದರ್ಶಿ ಚಂದ್ರು ಮಾತನಾಡಿ, ರೋಟರಿ ಸಂಸ್ಥೆ ಸಮಾಜ ಸೇವೆಯನ್ನೇ ಉಸಿರಾಗಿಸಿಕೊಂಡಿದೆ. ನಗರದಲ್ಲಿ ಬೃಹತ್ ಆರೋಗ್ಯ ಶಿಬಿರ ಆಯೋಜಿಸಿದ್ದು, 1 ಸಾವಿರಕ್ಕೂ ಹೆಚ್ಚು ತಪಾಸಣೆ ಮಾಡುವ ಗುರಿ ಹೊಂದಲಾಗಿದೆ. ಸಾರ್ವಜನಿಕರು ಇದರ ಸದುಪಯೋಗಪಡಿಸಿಕೊಳ್ಳಬೇಕೆಂದು ಕೋರಿದರು.

ಗೋಷ್ಠಿಯಲ್ಲಿ ಜೆಎಸ್‌ಎಸ್ ಆಸ್ಪತ್ರೆ ಮಾರುಕಟ್ಟೆ ವ್ಯವಸ್ಥಾಪಕ ಮಲ್ಲಿಕಾರ್ಜುನಸ್ವಾಮಿ, ಸುಧೀಂದ್ರ, ಶ್ರೀಕಂಠ ಪ್ರಸಾದ್, ನಂಜುಂಡಸ್ವಾಮಿ, ಬೊಮ್ಮಾಯಿ ಇದ್ದರು.

ಇಂದು ಅಂಬೇಡ್ಕರ್, ಬಾಬೂಜಿ ಹುಟ್ಟುಹಬ್ಬ ಅದ್ದೂರಿ ಆಚರಣೆ

ಹೆಚ್.ಡಿ.ಕೋಟೆ, ಏ.28(ಮಂಜು)– ಡಾ.ಬಿ.ಆರ್. ಅಂಬೇಡ್ಕರ್, ಬಾಬು ಜಗಜೀವನ ರಾಂ ಹುಟ್ಟುಹಬ್ಬವನ್ನು ಏ.29ರಂದು ಬೆಳಗ್ಗೆ 11 ಗಂಟೆಗೆ ಪಟ್ಟಣದಲ್ಲಿ ಅದ್ದೂರಿಯಾಗಿ ಆಚರಿಸಲಾಗುವುದು ಎಂದು ಬಾಬು ಜಗಜೀವನ ರಾಂ ವಿಚಾರ ವೇದಿಕೆ ಅಧ್ಯಕ್ಷ ಪಿ.ನಾಗರಾಜು ತಿಳಿಸಿದರು. ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಟ್ಟಣದ ಕೃಷ್ಣಾಪುರ ಬಾಬೂಜಿ ವೃತ್ತದಿಂದ ಅಂಬೇಡ್ಕರ್ ಭವನದವರೆಗೆ ಅಂಬೇಡ್ಕರ್ ಹಾಗೂ ಬಾಬೂಜಿ ಅವರ ಭಾವಚಿತ್ರಗಳನ್ನು ಮೆರವಣಿಗೆ ಮಾಡಲಾಗುವುದು. ಕಾರ್ಯಕ್ರಮದ ಸಾನ್ನಿಧ್ಯವನ್ನು ಕಡಪ ಸಿಂಹಾಸನ ಕೊಡಿಹಳ್ಳಿ ಅದಿಜಾಂಬವ ಮಹಾಸಂಸ್ಥಾನ ಮಠದ ಷಡಕ್ಷರ ಮುನಿ ದೇಶಿಕೇಂದ್ರ ಸ್ವಾಮೀಜಿ, ಹರಳಯ್ಯ ಮಠದ ಗುರುರುದ್ರಪ್ಪ ಹರಳಯ್ಯ ಸ್ವಾಮೀಜಿ ವಹಿಸಲಿದ್ದಾರೆ ಎಂದರು.

ಇಂದು ಉಚಿತ ಯೋಗ ಕಾರ್ಯಾಗಾರ

ಮೈಸೂರು, ಏ.28–ಆಲನಹಳ್ಳಿ, ಲಲಿತಾದ್ರಿಪುರ ರಸ್ತೆಯಲ್ಲಿರುವ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಏ.29ರಂದು ‘ಒಂದು ದಿನದ ಉಚಿತ ಯೋಗ ಕಾರ್ಯಾಗಾರ’ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. 8 ರಿಂದ 18 ವರ್ಷ ವಯಸ್ಸಿನ ಮಕ್ಕಳು ಈ ಶಿಬಿರದ ಸದುಪಯೋಗ ಪಡೆಯಬಹುದು. ಈ ಶಿಬಿರವು ಬೆಳಗ್ಗೆ 10.30ರಿಂದ 12.30 ಗಂಟೆಯವರೆಗೆ ನಡೆಯಲಿದೆ.

ಗ್ರಾಮಸ್ಥರಿಂದಲೇ ಗವಿಸಿದ್ದೇಶ್ವರ ದೇವಸ್ಥಾನಕ್ಕೆ ರಸ್ತೆ ನಿರ್ಮಾಣ

ಶಾಸಕ ಕೆ. ಮಹದೇವ್ ಭೂಮಿಪೂಜೆ, ಗ್ರಾಮಸ್ಥರ ಕಾರ್ಯಕ್ಕೆ ಮೆಚ್ಚುಗೆ

ಪಿರಿಯಾಪಟ್ಟಣ, ಏ.28(ವೀರೇಶ್)– ಜನಪ್ರತಿನಿಧಿಗಳ ಬಳಿ ಯಾವುದೇ ಅನುದಾನ ಅಪೇಕ್ಷಿಸದೆ ಗ್ರಾಮಸ್ಥರೇ ಒಟ್ಟಾಗಿ ಸೇರಿ ಹಣ ಹಾಕಿಕೊಂಡು ಗವಿಸಿದ್ದೇಶ್ವರ ದೇವಾಲಯಕ್ಕೆ ರಸ್ತೆ ನಿರ್ಮಿಸುತ್ತಿರುವುದು ಹೆಮ್ಮೆಯ ವಿಚಾರ ಎಂದು ಶಾಸಕ ಕೆ.ಮಹದೇವ್ ಗ್ರಾಮಸ್ಥರ ಕಾರ್ಯವನ್ನು ಶ್ಲಾಘಿಸಿದರು.



ಸಮೀಪದ ಬೆಟ್ಟದತುಂಗ ಮೆಣಸಿಕ್ಯಾತನಹಳ್ಳಿ ಕೊಪ್ಪಲು ಗ್ರಾಮದಲ್ಲಿ ಗವಿಸಿದ್ದೇಶ್ವರ ದೇವಸ್ಥಾನದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಬಳಿಕ ಮಾತನಾಡಿದ ಅವರು, ಸಾವಿರಾರು ಕುಟುಂಬಕ್ಕೆ ಮನೆ ದೇವರಾಗಿರುವ ಗವಿಸಿದ್ದೇಶ್ವರ ದೇವಾಲಯದ ಅಭಿವೃದ್ಧಿಗೆ ಗ್ರಾಮಸ್ಥರು ಪಣ ತೊಟ್ಟಿರುವುದು ಸಂತಸದ ಬೆಳವಣಿಗೆ. ಇದರೊಂದಿಗೆ ನಾನೂ ಸಹ ನಿಮ್ಮೊಂದಿಗೆ ಕೈ ಜೋಡಿಸಿ ವೈಯಕ್ತಿಕವಾಗಿ 1 ಲಕ್ಷ ರೂ ಹಣವನ್ನು ಕೊಡುತ್ತೇನೆ ಎಂದು ತಿಳಿಸಿದರು.

ಸುಮಾರು 8 ತಲೆಮಾರಿನಿಂದ ಬೆಟ್ಟಕ್ಕೆ ಕಾಲ್ನಡಿಗೆಯಲ್ಲಿ ಹತ್ತಿ ಗವಿಸಿದ್ದೇಶ್ವರ ಹಾಗೂ ವೀರಭದ್ರಸ್ವಾಮಿ ದೇವಾಲಯಗಳಿಗೆ ಅನಾದಿ ಕಾಲದಿಂದಲೂ ಪೂಜೆ ಸಲ್ಲಿಸುತ್ತಾ ಬಂದಿದ್ದಾರೆ. ನಾನು ಯಾವುದೇ ಅನುದಾನವನ್ನು ದೇವಾಲಯಕ್ಕೆ ಕೊಡದಿದ್ದರೂ ಸಹ ಗ್ರಾಮಸ್ಥರ ಒತ್ತಾಸೆ ಮೇರೆಗೆ ಭೂಮಿ ಪೂಜೆ ನಡೆಸಲು ಕಾರ್ಯಕ್ರಮಕ್ಕೆ ಆಗಮಿಸಿದ್ದೇನೆ. ಬಹುಮುಖ್ಯವಾಗಿ ದೇವಾಲಯಕ್ಕೆ ಹೋಗಲು ರಸ್ತೆ ಬೇಕಾಗಿರುವುದರಿಂದ ತಕ್ಷಣದಲ್ಲಿಯೇ ಮೆಟ್ಟಿಲ್ಗಳ ನಿರ್ಮಾಣ ಮಾಡಿಸುವ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೇನೆ. ಮುಂದಿನ ದಿನಗಳಲ್ಲಿ ಅದನ್ನು ಡಾಂಬರೀಕರಣ ಮಾಡಿಸುವ ಮೂಲಕ ಈ ಕ್ಷೇತ್ರವನ್ನು ಇನ್ನಷ್ಟು ಅಭಿವೃದ್ಧಿ ಪಡಿಸುತ್ತೇನೆ ಎಂದು ಭರವಸೆ ನೀಡಿದರು.

ಬೆಟ್ಟದ ತಪ್ಪಲಿನಲ್ಲಿ ಕುಡಿಯುವ ನೀರಿನ ಹ್ಯಾಂಡ್ ಪಂಪ್ ಕೊಳವೆ ಬಾವಿಯನ್ನು ತೆಗೆಸಿಕೊಡುವಂತೆ, ಮೆಣಸಿಕ್ಯಾತನಹಳ್ಳಿ ಕೊಪ್ಪಲು ಗ್ರಾಮದ ಒಳ ಭಾಗದ ರಸ್ತೆಗಳನ್ನು ಕಾಂಕ್ರೀಟ್ ರಸ್ತೆ ಮಾಡಿಸಿ ಕೊಡುವಂತೆ, ಗವಿಸಿದ್ದೇಶ್ವರ ಹಾಗೂ ವೀರಭದ್ರೇಶ್ವರ ದೇವಾಲಯಗಳ ಅಭಿವೃದ್ಧಿಗೆ ಸಹಕಾರ ನೀಡುವಂತೆ ಮನವಿ ಪತ್ರ ಸಲ್ಲಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಶಾಸಕ ಕೆ.ಮಹದೇವ್, ಮುಂದಿನ ವಾರದಲ್ಲಿ ಕೊಳವೆ ಬಾವಿ ತೆಗೆಯಲು ಅಧಿಕಾರಿಗಳಿಗೆ ಸೂಚಿಸಿದರು. ಗ್ರಾಮದ ಒಳ ಭಾಗದ ರಸ್ತೆಗಳಿಗೆ ಕಾಂಕ್ರೀಟ್ ರಸ್ತೆ ಮಾಡಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಅಲ್ಲದೇ ದೇವಾಲಯಗಳ ಅಭಿವೃದ್ಧಿಗೆ ಸರ್ಕಾರ ಮಟ್ಟದಲ್ಲಿ ಗಮನ ಸೆಳೆದು ಅದಕ್ಕೂ ಹೆಚ್ಚಿನ ಅನುದಾನ ಬಿಡುಗಡೆ ಮಾಡಿಸುವುದಾಗಿ ಭರವಸೆ ನೀಡಿದರು.

ಗ್ರಾಪಂ ಅಧ್ಯಕ್ಷ ದೇವರಾಜು, ಉಪಾಧ್ಯಕ್ಷೆ ಸುನೀತಾ, ತಾಲೂಕು ಜೆಡಿಎಸ್ ಘಟಕದ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಮುಖಂಡರಾದ ಸ್ವಾಮಿಗೌಡ, ಸಣ್ಣಸ್ವಾಮೀಗೌಡ, ಸಿದ್ದರಾಮೇಗೌಡ, ಪ್ರೀತಿ ಅರಸ್, ಗಗನ್, ದೇವರಾಜು, ಕೃಷ್ಣ ಅರಸ್, ಪಟೇಲ್ ನಟೇಶ್, ನಟರಾಜು, ಲಕ್ಷ್ಮಿ, ಮಲ್ಲಿಕಾರ್ಜುನ, ಪ್ರಭುಗೌಡ, ಮಧು, ರಾಮೇಗೌಡ, ರಾಜೀ ಅರಸ್, ಗಿರೀಶ್, ಸತೀಶ್, ಗ್ರಾಮಸ್ಥರು ಇದ್ದರು.

ಕೆಕೆಆರ್ ವಿರುದ್ಧ ಡೆಲ್ಲಿಗೆ ಭರ್ಜರಿ ಜಯ

ಮುಂಬೈ, ಏ.28– ಕುಲದೀಪ್ ಯಾದವ್, ಮುಸ್ತಫಿಜುರ್ ರೆಹಮಾನ್ ಅವರ ಮಾರಕ ಬೌಲಿಂಗ್ ದಾಳಿ ಹಾಗೂ ತಂಡದ ಸಾಂಘಿಕ ಪ್ರದರ್ಶನದ ನೆರವಿನಿಂದ ಡೆಲ್ಲಿ ಕ್ಯಾಪಿಟಲ್ಸ್ ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ 4 ವಿಕೆಟ್‌ಗಳ ಜಯ ಸಾಧಿಸಿದೆ. ಇಲ್ಲಿನ ವಾಂಖೇಡೆ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಕೆಕೆಆರ್ ಕುಲದೀಪ್ ಸ್ಪಿನ್ ಮೋಡಿಗೆ ತತ್ತರಿಸಿ ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 146 ರನ್‌ಗಳ ಸ್ಪರ್ಧಾತ್ಮಕ ಮೊತ್ತ ದಾಖಲಿಸಿತು.



35ರನ್ ಆಗುವಷ್ಟರಲ್ಲಿ 4 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದ್ದ ತಂಡಕ್ಕೆ ನಾಯಕ ಶ್ರೇಯಸ್ ಅಯ್ಯರ್, ನಿತೀಶ್ ರಾಣಾ 49 ರನ್‌ಗಳ ಜೊತೆಯಾಟವಾಡುವ ಮೂಲಕ ಆಸರೆಯಾದರು. ಈ ವೇಳೆ 37 ಎಸೆತಗಳಲ್ಲಿ 4 ಬೌಂಡರಿ ಒಳಗೊಂಡ 42 ರನ್ ಗಳಿಸಿದ್ದ ಶ್ರೇಯಸ್ ಅಯ್ಯರ್ ವಿಕೆಟ್ ಒಪ್ಪಿಸಿ ನಿರ್ಗಮಿಸಿದರು. ಮತ್ತೊಂದೆಡೆ ಜವಾಬ್ದಾರಿಯುತ ಬ್ಯಾಟಿಂಗ್ ಪ್ರದರ್ಶಿಸಿದ ರಾಣಾ 30 ಎಸೆತಗಳಲ್ಲಿ ಅರ್ಧಶತಕ ಸಿಡಿಸಿ ಐಪಿಎಲ್‌ನಲ್ಲಿ 2 ಸಾವಿರ ರನ್ ಪೂರೈಸಿದರು.

ಈ ವೇಳೆ ಒಂದಾದ ರಿಂಕು ಸಿಂಗ್ ಹಾಗೂ ನಿತೀಶ್ ರಾಣಾ 7ನೇ ವಿಕೆಟ್‌ಗೆ 62 ರನ್ ಒಟ್ಟುಗೂಡಿಸಿದರು. ಅಂತಿಮವಾಗಿ ರಾಣಾ 34 ಎಸೆತಗಳಲ್ಲಿ 4 ಸಿಕ್ಸರ್, 3 ಬೌಂಡರಿ ಒಳಗೊಂಡ 57 ರನ್ ಗಳಿಸಿದರೆ, ರಿಂಕು ಸಿಂಗ್ 23 ರನ್ ಗಳಿಸಿದರು. ಡೆಲ್ಲಿ ಪರ ಕುಲದೀಪ್ ಯಾದವ್ 4, ಮುಸ್ತಫಿಜುರ್ ರೆಹಮಾನ್ 3, ಚೇತನ್ ಸಕಾರಿಯಾ ಹಾಗೂ ಅಕ್ಷರ್ ಪಟೇಲ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ಬಳಿಕ ಗುರಿ ಬೆನ್ನತ್ತಿದ ಡೆಲ್ಲಿ 19 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 150 ರನ್ ಗಳಿಸುವ ಮೂಲಕ ಗೆಲುವಿನ ನಗೆ ಬೀರಿತು. ತಂಡದ ಪರ ಡೇವಿಡ್ ವಾರ್ನರ್ 42, ಮಿಚೆಲ್ ಮಾರ್ಷ್ 13, ಲಲಿತ್ ಯಾದವ್ 22, ರೋವ್ಮನ್ ಪೊವೆಲ್ 33, ಅಕ್ಷರ್ ಪಟೇಲ್ 24 ರನ್ ಗಳಿಸಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಕೆಕೆಆರ್ ಪರ ಉಮೇಶ್ ಯಾದವ್ 3, ಹರ್ಷಿತ್ ರಾಣಾ, ಸುನೀಲ್ ನರೈನ್ ತಲಾ ಒಂದೊಂದು ವಿಕೆಟ್ ಕಬಳಿಸಿದರು. ಕುಲದೀಪ್ ಯಾದವ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಗಾಯಿತ್ರಮ್ಮ ನಿಧನ



ತಿ.ನರಸೀಪುರ, ಏ.28(ಎಸ್‌ಕೆ)– ತಾಲೂಕಿನ ತುಂಬಲ ಗ್ರಾಮದ ನಿವಾಸಿ ಹುಚ್ಚೇಗೌಡರ ಪತ್ನಿ ಗಾಯಿತ್ರಮ್ಮ(62) ಗುರುವಾರ ಮುಂಜಾನೆ ನಿಧನರಾದರು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮ ಜಮೀನಿನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀ ಬೋರಪ್ಪ
ನಿಧನ: 19.04.2022
ಭೋಜನ. ಮಧ್ಯಾಹ್ನ 12ಕ್ಕೆ

ಇವರು ದಿ.19.04.2022 ಮಂಗಳವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ.29.04.2022 ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಕನ್ನೇಗೌಡನ ಕೊಪ್ಪಲು, ಶ್ರೀ ಮರುಳೇಶ್ವರ ಶಾಂತಿಧಾಮ, ಕುವೆಂಪುನಗರ, ಮೈಸೂರಿನಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ ದುಃಖತಪ್ತರು: ಮೃತರ ಪತ್ನಿ ಗಾಯಿತ್ರಮ್ಮ ಮತ್ತು ಮಕ್ಕಳು ಕುಟುಂಬವರ್ಗದವರು, ಬಂಧು-ಮಿತ್ರರು ಹಾಗೂ ಗ್ರಾಮಸ್ಥರು.

2+1 OFFER FESTIVAL **SALE** SHOP NOW FOR LIMITED DAYS ONLY

BUY 2 GET 1 FREE *

ON ALL IN- HOUSE BRANDS

SHOE WORLD™ ESTD.1998
Best Brands at Your Feet...
*T&C Apply

> OPP. MANNAR'S MARKET, SHIVARAMPET, MYSURU - 01. ✆ : 2424282 11am To 8-30pm OPEN ON SUNDAYS

ಕೈಲಾಸ ಶಿವಗಣಾರಾಧನೆ



ಇವರು ದಿ:20.04.2022 ಬುಧವಾರ ಶಿವೈಕ್ಯರಾಗಿದ್ದು ತತ್ಸಂಬಂಧವಾಗಿ ದಿ: 29-04-2022 ನೇ ಶುಕ್ರವಾರ ಬೆಳಿಗ್ಗೆ 8 ಗಂಟೆಗೆ ದೇವನೂರು ಶ್ರೀಗುರುಮಲ್ಲೇಶ್ವರ ತ್ರಿವಿಧ ದಾಸೋಹ ಮಹಾಸಂಸ್ಥಾನ ಮಠಾಧ್ಯಕ್ಷರಾದ ಶ್ರೀ ಮ॥ನಿ॥ಪ್ರ॥ಸ್ವಾ॥ ಮಹಾಂತಸ್ವಾಮಿಗಳ ಪಾದಪೂಜೆ ಮತ್ತು ಕೈಲಾಸ ಶಿವಗಣಾರಾಧನೆಯನ್ನು ಮಧ್ಯಾಹ್ನ 12 ಗಂಟೆಗೆ ಸ್ವಗೃಹ ಹೆಗ್ಗಡಹಳ್ಳಿ ಗ್ರಾಮ, ನಂಜನಗೂಡು ತಾ॥ ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಬೇಕೆಂದು ವಿನಂತಿ.

ಇಂತಿ ದುಃಖತಪ್ತರು:
ಪತಿ: ಹೆಚ್.ಸಿ.ಬಸವಣ್ಣ (ತಾ.ಪಂ ಮಾಜಿ ಸದಸ್ಯರು)
ಮಕ್ಕಳಾದ: ಎಚ್.ಬಿ.ರೇವಣ್ಣ, ಎಚ್.ಬಿ.ಸೋಮಣ್ಣ ಎಚ್.ಬಿ.ಚೆನ್ನಪ್ಪ, ಸೊಸೆಯಂದಿರು ಮೊಮ್ಮಕ್ಕಳು, ಹೆಣ್ಣುಮಕ್ಕಳು

ಶ್ರೀಮತಿ ಎಂ.ಪಿ.ಕಮಲಮ್ಮ



Media Partner

Mandya Hudgi Mysore Bedagi our own R.J.Rashmi & Tanishka Invite You All to

The Luxurious Lifestyle Exhibition Back at Mysore

INDIAN LIFESTYLE EXHIBITION

MISS MYSORE TANISHKA
RJ RASHMI

29 30 APRIL 2022

At: Hotel Southern Star Mysore

Timing:10:30am to 8:00pm

Ravi: 91+9880340484

WANTED
Manager - Finance & Administration

Academy Newspapers Pvt. Ltd., publishers of **"Star of Mysore" English Evening Daily and "Mysuru Mithra" Regional Kannada Morning Daily** is looking for a suitable male candidate to be appointed as **"Manager-Finance & Administration"**, a senior level position reporting directly to the CMD and Executive Directors of the company. The candidate;

- Should be a commerce graduate with CA Intermediate qualification.
- Should have work experience of **at least 8 years** in a similar senior position in any private company.
- Should possess adequate working knowledge of maintenance of accounts in customized Tally ERP, knowledge of GST, income tax, company law matters, ESI and PF and employees related matters, purchase functions, inventory and debtors management and all liaisoning functions.
- Will be required to work with a team of Accounts Executives and should have leadership qualities.
- Should be able to read, write and speak in both Kannada and English and be able to handle correspondence independently with officials, suppliers and clients.
- Should be able to handle day-to-day administration.

Remuneration will commensurate with qualification and experience.

Male candidates having above qualification and experience interested in working in a senior position on long term basis may email their resumes along with a recent passport sized photograph to **finance@starofmysore.com** before 4th May 2022.

ತಿಬ್ಬಾದೇವಿ ನೂತನವಾಗಿ ಲೇಸರ್ ಪ್ರೊಜೆಕ್ಷನ್ ನಲ್ಲಿ



4 ಪ್ರದರ್ಶನಗಳು. 10:45, 1:45, 5:00, 8:00
ಇಂದಿನಿಂದ
ಹೀರೋಪಂತಿ -2 (ಹಿಂದಿ)
ದರ: ಬಾಲ್ಕನಿ-110 2ನೇ ಕ್ಲಾಸ್-90

WANTED TEACHERS

- English - 4 Nos.
- PCM - 2 Nos.
- CBZ - 2 Nos.
- Mathematics - 4 Nos.
- Social Science - 4 Nos.

Nursery Teachers | Office Administrator
PT | Library | Art and Craft
Music and Dance Teacher are also welcome

Preferred Qualification :
M.Sc., B.Sc., M.A., B.Ed., M.Com., BCA

NOTE: Teachers with experience and proved professional competency will be considered as weightage.

WISDOM SCHOOL (CBSE), Nanjangud
70222 37715 / 76761 10063

Work from home

Business Opportunity Seminar

Limited Seats

- India's most trusted and leading financial group offers a Business and Career Opportunity.
- Exclusively for Retired Senior Citizens, Housewives,Business Profession and NRI's.
- Basic Salary, PF & ESI Medical Benefits will be provided.
- Presentation will be held in Hotel Maurya Residency, near Woodland Theatre at 11 am on Saturday, the 30th April 2022, followed by lunch.

For Registration call:
Mob: 7208872090

ವೃದ್ಧಾಶ್ರಮ

ನಮ್ಮ ಆಶ್ರಮದಲ್ಲಿ ವೃದ್ಧರು, ನಿವೃತ್ತರು ಹಾಗೂ ಎಲ್ಲಾ ರೀತಿಯ ರೋಗಿಗಳಿಗೆ ಪ್ರವೇಶವಕಾಶವಿರುತ್ತದೆ. 24*7 ನರ್ಸಿಂಗ್ ಸೇವೆ, ವೈದ್ಯರ ಭೇಟಿ, ಆಂಬುಲೆನ್ಸ್ ಸೇವೆ, ಬಿಸಿನೀರಿನ ಸೌಲಭ್ಯ, ಮನೋರಂಜನೆಗಾಗಿ ಟಿವಿ ಹಾಗೂ ಪತ್ರಿಕೆ, ಊಟ ಉಪಹಾರ ಇತ್ಯಾದಿ ಹೋಮ್ ನರ್ಸಿಂಗ್ ಸೇವೆ ಸಹ ಲಭ್ಯವಿದೆ.

9513253747

WANTED
RECEPTIONIST
for a reputed firm at the heart of the city with hotel rooms
Male / Female with experience preferred.
Call : **99016 08109**
Call between 4 - 6pm

ಗಿರವಿ ಚಿನ್ನಾಭರಣ ಖರೀದಿ
ಒಂದು ಗ್ರಾಂ ಚಿನ್ನಕ್ಕೆ **5200**
ಗಿರವಿಯಿಟ್ಟಿರುವ ಚಿನ್ನಾಭರಣಕ್ಕೆ ಹಣಬೇಕೆ ಕೂಡಲೇ ಸಂಪರ್ಕಿಸಿ
9448744888

AUCTION FOR STEEL SCRAPS

Lying in basement of Income Tax Office at Nazarbad, Mysuru.
Website: https://www.mstcecommerce.com
Auction number: MSTC/BLR/Joint Commissioner of Income Tax (ReFAC)(AU)-1(1). Mysuru/3/ Near Taluk Office, Nazarbad/22-23/3682
Location of Material: Income Tax office, 22/16, Aayakar Bhavan, Residency Road, Nazarbad, Mysuru, Karnataka-570 010
Contact person for inspection: Mahadevaiah, AO-Gr-II, O/o Pr.CIT (ReFAC)(AU)-1, Mysuru.
Contact No. 9449371334
Time: 10am-4pm on working days
Dates of Inspection: 27/04/2022 to 05/05/2022
Date of Auction: 06/05/2022

WANTED

Applications are invited from Energetic and Experienced candidates to fill the position in a leading FMCG company near Mysore, Karnataka.

ASSISTANT EXECUTIVE - LEGAL
(preferable with CS Certification).
Interested Candidates can send their updated CV's to
cvs.mys2018@gmail.com

DEVELOPED PLOTS
Hunsur Road
(Nr Economic Corridor Expressway)
Bogadi Road
(For immediate construction)
80% Bank Loan
✆Yesh 9538885070

ಮೈಸೂರು ಪ್ರೆಸ್ ಕ್ಲಬ್(ರಿ.)
15ನೇ ವರ್ಷದ ವಾರ್ಷಿಕೋತ್ಸವದ ಪ್ರಯುಕ್ತ

ಬೃಹತ್ ಉದ್ಯೋಗ ಮೇಳ

ಉಚಿತ ಕಣ್ಣು ತಪಾಸಣೆ
ಹಾಗೂ
ಉಚಿತ ಕನ್ನಡಕ ವಿತರಣೆ
(ಅನ್ನಪೂರ್ಣ ಆಸತ್ರೆ)

ಸ್ಥಳ: ಪುರಭವನ, ಮೈಸೂರು
1.05.2022 ಭಾನುವಾರ
ಕಸ್ತೂರಿ ಚಂದ್ರು 88676-88676

ಇಂದಿನಿಂದ ಅಮೋಘ ಪ್ರಾರಂಭ

Gruhashobhe International Trade Fair

ಗೃಹಶೋಭೆ

11 Days

GRUHASHOBHE LIVING STYLE EXHIBITION

TIMING : 11 Am to 9 Pm

Special Attraction



ಏಪ್ರಿಲ್ 29 ರಿಂದ ಮೇ 09 ರವರೆಗೆ
ಸ್ಕೌಟ್ ಅಂಡ್ ಗೈಡ್ಸ್ ಗ್ರೌಂಡ್, ಮೈಸೂರು

ENTRY Rs. 30/- Children Below 10 Years Free Entry PARKING FREE

MITHRA

WE ARE HIRING

Customer Relationship Officer & Event Manager
Female Candidates

- Looking for Fresher / Experienced to work in outbound for banking sector.
- Min. 2 years experience in event management skills.
- Excellent communication skills.
- Salary : As per Company standards.

LOCATION : MYSURU

Contact Us : sowmyarsvs@gmail.com 95133 36791 / 2 / 3
www.hrmithra.in

26ನೇ ವರ್ಷದ ವಿವಾಹ ವಾರ್ಷಿಕೋತ್ಸವ



ಲಕ್ಷ್ಮೀದೇವಿ ಮತ್ತು ಬಿ.ಕೆ.ಒಡ್ಡಲಯ್ಯ (ಪೊಲೀಸ್ ಇಲಾಖೆ)

ಶುಭಕೋರುವವರು:
ಮಗಳು: ಲಾವಣ್ಯ, ಹರಿಕೃಷ್ಣ, ಶಿವಪ್ರಕಾಶ್
ತಂದೆ: ಕೃಷ್ಣಯ್ಯ, ತಾಯಿ: ಪುಟ್ಟಮಲ್ಲಮ್ಮ
ಬಿ.ಬೆಟ್ಟಹಳ್ಳಿ, ಟಿ.ನರಸೀಪುರ ತಾ॥

ಇಂದಿನಿಂದ ಅಮೋಘ ಪ್ರಾರಂಭ

ಪ್ರಪ್ರಥಮ ಬಾರಿಗೆ ಮೈಸೂರಿನಲ್ಲಿ

31 Days

2022 ಮೈಸೂರು ಉತ್ಸವ

ಉದ್ಘಾಟನೆ : ಸಂಜೆ 6.00 ಘಂಟೆಗೆ
ಮುಖ್ಯ ಅತಿಥಿಗಳು



ಶ್ರೀ ಎಸ್.ಎ.ರಾಮದಾಸ್ ಎಂ.ಎಲ್.ಎ ಕೆ.ಆರ್.ಕ್ಷೇತ್ರ, ಮೈಸೂರು
ಶ್ರೀ ಎಲ್ ನಾಗೇಂದ್ರ ಎಂ.ಎಲ್.ಎ ಚಾಮರಾಜ ಕ್ಷೇತ್ರ, ಮೈಸೂರು

Special Attraction
SPACE TOUR

ಏಪ್ರಿಲ್ 29 ರಿಂದ ಮೇ 29 ರವರೆಗೆ
ಜೆ.ಎಸ್.ಎಸ್ ಗ್ರೌಂಡ್
ದೊಡ್ಡ ಕೆರೆ ಮೈದಾನದ ಪಕ್ಕ, ಮೈಸೂರು

BERLYNOAK
Discover Style at Honest Price

GRAND OPENING
OF OUR 33RD STORE

NOW @ MYSORE

INAUGURAL OFFER



359 North, Near Alanahalli Police Station, Mysuru, Karnataka 570019
CALL : 89519 66135 www.berlynoak.com
33+ STORES ACROSS INDIA

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀ ಟಿ.ರಾಮೇಗೌಡ ರವರು
ಮಾಜಿ ಮಂಡಲ ಪಂಚಾಯಿತಿ ಸದಸ್ಯರು, ಮೇಟಗಳ್ಳಿ, ಮೈಸೂರು

ಇವರು ದಿ.19.04.2022 ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ. 29.04.2022ರ ಶುಕ್ರವಾರ ಬೆಳಗ್ಗೆ 10.15 ಗಂಟೆಗೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಮುಂಭಾಗ ಮೇಟಗಳ್ಳಿ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ. ತಮ್ಮಗಳನ್ನು ಖುದ್ದಾಗಿ ಭೇಟಿಯಾಗಿ ಆಮಂತ್ರಿಸಲು ಸಾಧ್ಯವಾಗದ ಕಾರಣ, ಇದನ್ನೇ ಆಹ್ವಾನ ಪತ್ರಿಕೆ ಎಂದು ಭಾವಿಸಿ ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು:
ಧರ್ಮಪತ್ನಿ ಶ್ರೀಮತಿ ಚನ್ನಮ್ಮ, ಮಕ್ಕಳು ಶ್ರೀ ಆರ್.ಶ್ರೀನಿವಾಸ್, ಶ್ರೀ .ಆರ್.ಬಾಲಕೃಷ್ಣ (ಬಾಲು)(ಪಶುಪಾಲನ ಇಲಾಖೆ.) ಶ್ರೀ .ಆರ್. ದೇವರಾಜ್ (ಮಾಜಿ ನಗರ ಪಾಲಿಕೆ ಸದಸ್ಯರು)
ಭೋಜನ: 12.30 ಗಂಟೆಗೆ